ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 13 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 178 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಷರತ್ತಿನನ್ವಯ ಮಹಿಷ ಉತ್ಸವಕ್ಕೆ ಅನುಮತಿ

● ಪುರಭವನ ಆವರಣದಲ್ಲಿ ಮಾತ್ರ ಆಚರಣೆ ● ಯಾವುದೇ ಮೆರವಣಿಗೆ, ರ್‍ಯಾಲಿಗೆ ಅವಕಾಶವಿಲ್ಲ ● ಬೆಳಗ್ಗೆ 10ರಿಂದ ಮಧ್ಯಾಹ್ನ 12 ಗಂಟೆವರೆಗೆ ಸಮಯಾವಕಾಶ ● ಶಾಂತಿ, ಕಾನೂನು ಸುವ್ಯವಸ್ಥೆಗೆ ಧಕ್ಕೆಯಾದರೆ ಕ್ರಮದ ಎಚ್ಚರಿಕೆ



ಮೈಸೂರು, ಅ.12(ಎಸ್‌ಬಿಡಿ)– ಮೈಸೂರಿನ ಆವರಣಕ್ಕೆ ಸೀಮಿತವಾಗಿ ಮಹಿಷ ಉತ್ಸವಕ್ಕೆ ಅನುಮತಿ ನೀಡಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಷ ದಸರಾ ಹಾಗೂ ಚಲೋ ಚಾಮುಂಡಿಬೆಟ್ಟ ಕಾರ್ಯಕ್ರಮಗಳಿಗೆ ಅನುಮತಿ ನಿರಾಕರಿಸಿದ ನಂತರ ಮಹಿಷ ದಸರಾ ಆಚರಣೆ ಸಮಿತಿ ಲೆಟರ್‌ಹೆಡ್‌ನಲ್ಲಿ ಪುರುಷೋತ್ತಮ್ ಅವರು ಅ.13ರಂದು ಪುರ ಭವನ ಆವರಣದಲ್ಲಿ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಮಹಿಷ ಉತ್ಸವ ಮತ್ತು ದಮ್ಮದೀಕ್ಷೆ ಕಾರ್ಯಕ್ರಮ ನಡೆಸಲು ಅನುಮತಿ ಕೇಳಿದ್ದಾರೆ. ಈ ಸಂಬಂಧ ಜಿಲ್ಲಾಡಳಿತದೊಂದಿಗೆ ಚರ್ಚೆ ಮಾಡಿ, ಪುರಭವನ ಆವರಣಕ್ಕೆ ಸೀಮಿತವಾಗಿ ಷರತ್ತುಗಳ ಮೇಲೆ ಕಾರ್ಯಕ್ರಮ ನಡೆಸಲು ಅನುಮತಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಷರತ್ತುಗಳು ಅನ್ವಯ

ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೆ ಕಾರ್ಯಕ್ರಮ ನಡೆಸಲು ಅನುಮತಿ ಕೇಳಿದ್ದರು. ಆದರೆ ಬೆಳಗ್ಗೆ 10ರಿಂದ 12 ಗಂಟೆವರೆಗೆ ಹಲವು ಷರತ್ತುಗಳ ಮೇಲೆ ಅನುಮತಿ ನೀಡಲಾಗಿದೆ. ಸ್ಥಳೀಯ ಪೊಲೀಸ್ ಅಧಿಕಾರಿ, ಮೇಲಧಿಕಾರಿಗಳ ಸೂಚನೆಯನ್ನು ತಪ್ಪದೆ ಪಾಲಿಸಬೇಕು. ಚಪ್ಪರ ಅಥವಾ ವೇದಿಕೆ ನಿರ್ಮಿಸಲು ನಗರಪಾಲಿಕೆ ಅಥವಾ ಸಂಬಂಧಪಟ್ಟ ಇಲಾಖೆಯಿಂದ ಪ್ರತ್ಯೇಕ ಅನುಮತಿ ಪಡೆದುಕೊಳ್ಳಬೇಕು. ನಗರಪಾಲಿಕೆ ನೀತಿ ನಿಯಮಗಳನ್ನು ತಪ್ಪದೆ ಪಾಲಿಸಬೇಕು. ಇತರೆ ಯಾವುದೇ ಮತೀಯ, ಧಾರ್ಮಿಕ ವಿಚಾರಗಳ ಸಂಬಂಧ ಪ್ರಚೋದನಾಕಾರಿ ಭಾಷಣ ಮಾಡಬಾರದು. ಯಾವುದೇ ಗಲಾಟೆ, ವಗೆರಾ ಕಂಡುಬಂದಲ್ಲಿ ಆಯೋಜಕರಾದ ಮಹಿಷ ದಸರಾ ಆಚರಣಾ



ಸಮಿತಿ ಪದಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿಸಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು. ಜೊತೆಗೆ ನಗರಾದ್ಯಂತ ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ಯಾವುದೇ ಮೆರವಣಿಗೆ, ಪ್ರತಿಭಟನೆಗೆ ಅವಕಾಶವಿರುವುದಿಲ್ಲ. ಭಾಗವಹಿಸುವವರು ನೇರವಾಗಿ

▶ 9ನೇ ಪುಟಕ್ಕೆ

ಅ.14ರವರೆಗೆ ಮೈಸೂರಲ್ಲಿ ನಿಷೇಧಾಜ್ಞೆ ಜಾರಿ

ಮೈಸೂರು, ಅ.12(ಆರ್‌ಕೆ)–ಮಹಿಷ ದಸರಾ ಮತ್ತು ಚಾಮುಂಡಿಬೆಟ್ಟ ಚಲೋ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟ ಸೇರಿದಂತೆ ಪುರಭವನದ ಆವರಣ ಹೊರತುಪಡಿಸಿ ಮೈಸೂರು ನಗರದಾದ್ಯಂತ ಇಂದು ಮಧ್ಯರಾತ್ರಿ (ಅ.12)ಯಿಂದ ಅ.14ರ ಬೆಳಗ್ಗೆ 6 ಗಂಟೆವರೆಗೆ ಸಿಆರ್‌ಪಿಸಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಹೊರಡಿಸಲಾಗಿದೆ.

ಈ ಸಂಬಂಧ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶ ಹೊರಡಿಸಿದ್ದು, ಈ ಅವಧಿಯಲ್ಲಿ ಯಾವುದೇ ಸಭೆ–ಸಮಾರಂಭ, ರ್‍ಯಾಲಿ ಹಾಗೂ ಮೆರವಣಿಗೆ ನಡೆಯುವುದನ್ನು ನಿಷೇಧಿಸಿದ್ದಾರೆ. ಕೆಲ ಸಂಘಟನೆಗಳು ಅ.13ರಂದು ಚಾಮುಂಡಿಬೆಟ್ಟದಲ್ಲಿ ಮಹಿಷಾಸುರನ ಪ್ರತಿಮೆಗೆ ಪುಷ್ಪಾರ್ಚನೆ ನಂತರ ತಾವರೆಕಟ್ಟೆಯಿಂದ ಪುರಭವನದವರೆಗೆ ಮೆರವಣಿಗೆಯಲ್ಲಿ ತೆರಳಿ ಡಾ. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಸಭಾ ಕಾರ್ಯಕ್ರಮ ನಡೆಸುವುದಾಗಿ ತಿಳಿಸಿರುವುದರಿಂದ ಹಾಗೂ ಬಿಜೆಪಿಯಿಂದ ಅಂದು ಚಾಮುಂಡಿಬೆಟ್ಟ ಚಲೋ ಕಾರ್ಯಕ್ರಮ



ಹಮ್ಮಿಕೊಳ್ಳುತ್ತೇವೆಂದು ಹೇಳುತ್ತಿರುವ ಕಾರಣ ಆ ಸಂದರ್ಭ ದಲ್ಲಿ ಪರ–ವಿರೋಧ ವ್ಯಕ್ತವಾಗಿ ಘರ್ಷಣೆ ಉಂಟಾಗಿ ಹಿಂಸಾಚಾರಕ್ಕೆ ತಿರುಗುವ ಸಾಧ್ಯತೆ ಇರುತ್ತದೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ. ಅ.15ರಂದು ವಿಶ್ವವಿಖ್ಯಾತ ದಸರಾ ಮಹೋತ್ಸವ ಆರಂಭವಾಗಲಿದ್ದು, ಹೊರ ರಾಜ್ಯ ಮತ್ತು ವಿದೇಶಗಳಿಂದ ಲಕ್ಷಾಂತರ ಪ್ರವಾಸಿಗರು ಆಗಮಿಸುವುದರಿಂದ ಆ ಸಂದರ್ಭ ಶಾಂತಿ ಹಾಗೂ ಕಾನೂನು–ಸುವ್ಯವಸ್ಥೆಗೆ ಭಂಗ ಉಂಟಾದಲ್ಲಿ, ಸಾರ್ವಜನಿಕ ಆಸ್ತಿ–ಪಾಸ್ತಿ ನಷ್ಟವಾದರೆ ಮೈಸೂರಿಗೆ ಕಳಂಕ ಬರುವುದಲ್ಲದೆ, ನವರಾತ್ರಿ ಉತ್ಸವ ಕಾರ್ಯಕ್ರಮಗಳಿಗೂ ತೊಂದರೆಯಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

▶ 9ನೇ ಪುಟಕ್ಕೆ

ಇಂದು ಚಾಮುಂಡಿಬೆಟ್ಟಕ್ಕೆ ಸಾರ್ವಜನಿಕರ ನಿರ್ಬಂಧ

ಮೈಸೂರು, ಅ.12–ಚಾಮುಂಡಿಬೆಟ್ಟಕ್ಕೆ ಶುಕ್ರವಾರ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆದೇಶಿಸಿದ್ದಾರೆ. ಚಾಮುಂಡಿಬೆಟ್ಟದಲ್ಲಿ ಮಹಿಷ ದಸರಾ ಹಾಗೂ ಚಲೋ ಚಾಮುಂಡಿಬೆಟ್ಟ ಕಾರ್ಯಕ್ರಮಕ್ಕೆ ಅವಕಾಶ ನಿರಾಕರಿಸಿದ್ದರೂ ಮುಂಜಾಗ್ರತಾ ಕ್ರಮವಾಗಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ನಿಷೇಧಾಜ್ಞೆ ವಿಧಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ಮಧ್ಯರಾತ್ರಿ 12ರಿಂದ ಅ.14ರ ಬೆಳಗ್ಗೆ 6 ಗಂಟೆವರೆಗೆ

▶ 9ನೇ ಪುಟಕ್ಕೆ


5ನೇ ರಾಜ್ಯ ಹಣಕಾಸು ಆಯೋಗ ರಚಿಸಿದ ಸರ್ಕಾರ

ಬೆಂಗಳೂರು, ಅ.12– ಕರ್ನಾಟಕ ಸರ್ಕಾರ 5ನೇ ರಾಜ್ಯ ಹಣಕಾಸು ಆಯೋಗವನ್ನು ರಚಿಸಿದೆ. ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಆರ್ಥಿಕ ಸ್ಥಿತಿಗಳನ್ನು ಪರಿಶೀಲಿಸಿದ ನಂತರ ಸಂಪನ್ಮೂಲಗಳ ಹಂಚಿಕೆ ಹಾಗೂ ವಿಭಜನೆ ಕುರಿತ ಶಿಫಾರಸ್ಸುಗಳನ್ನು ನೀಡಲು ಈ ಆಯೋಗವನ್ನು ರಚಿಸಲಾಗಿದೆ. ಮಾಜಿ ಸಂಸದ ಸಿ.ನಾರಾಯಣಸ್ವಾಮಿ ನೇತೃತ್ವದಲ್ಲಿ ಈ ಆಯೋಗ ರಚನೆಯಾಗಿದ್ದು, ನಿವೃತ್ತ ಐಎಎಸ್ ಅಧಿಕಾರಿ ಮೊಹಮ್ಮದ್ ಸನಾವುಲ್ಲಾ ಹಾಗೂ ರಾಜ್ಯ ಲೆಕ್ಕಪತ್ರ ಇಲಾಖೆಯ ನಿವೃತ್ತ ನಿಯಂತ್ರಕ

▶ 9ನೇ ಪುಟಕ್ಕೆ


ವಿದ್ಯುತ್‌ದ್ದೇ ದೊಡ್ಡ ಸಮಸ್ಯೆ

● ರಾಜ್ಯ ಸರ್ಕಾರಕ್ಕೆ ತೀವ್ರ ತಲೆನೋವು ● ಬೆಳೆಗಳಿಗೆ ನೀರುಣಿಸಲು ಕರೆಂಟ್ ಇಲ್ಲದೆ ಅನ್ನದಾತ ಕಂಗಾಲು









ಬೆಂಗಳೂರು,ಅ.12(ಕೆಎಂಶಿ)–ವಿದ್ಯುತ್‌ದ್ದೇ ದೊಡ್ಡ ಸಮಸ್ಯೆಯಾಗಿದೆ. ಏನು ಮಾಡೋದೋ ಗೊತ್ತಾಗ್ತಿಲ್ಲ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ರಾಜ್ಯದ ವಿದ್ಯುತ್ ವಾಸ್ತವ ಚಿತ್ರಣವನ್ನು ಇಂದಿಲ್ಲಿ ಬಿಡಿಸಿಟ್ಟಿದ್ದಾರೆ.

ಮುಂಗಾರು ಮಳೆ ವೈಫಲ್ಯದಿಂದ ರಾಜ್ಯ ಒಂದೆಡೆ ಬರಕ್ಕೆ ಸಿಲುಕಿದ್ದರೆ, ಮತ್ತೊಂದೆಡೆ ವಿದ್ಯುತ್ ಉತ್ಪಾದನೆ ಕುಂಠಿತಗೊಂಡು ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚಾಗಿರುವುದು ಸಮಸ್ಯೆಗೆ ಕಾರಣವಾಗಿದೆ.

ಸಮಸ್ಯೆ ಹಿನ್ನೆಲೆಯಲ್ಲಿ ಅನಧಿಕೃತವಾಗಿ ಲೋಡ್ ಶೆಡ್ಡಿಂಗ್ ಉಂಟಾಗುತ್ತಿದೆ. ನಮ್ಮಲ್ಲಿರುವ ವಿದ್ಯುತ್ ಉತ್ಪಾದನೆಯನ್ನು ಇಡೀ ರಾಜ್ಯಕ್ಕೆ ಹಂಚುವ ಕಾರ್ಯ ನಡೆದಿದೆ. ಇದರಿಂದ ಕೆಲವೆಡೆ ವಿದ್ಯುತ್ ಅಭಾವ ಸೃಷ್ಟಿಯಾಗುತ್ತಿದೆ. ಜಲಾಶಯಗಳಲ್ಲಿ ನೀರಿನ ಕೊರತೆ, ಕೊಳವೆ ಬಾವಿಗಳಲ್ಲಿ ಅಂತರ್ಜಲ ಕುಸಿಯುತ್ತಿದೆ. ರೈತರು ತಮ್ಮ ಬೆಳೆ ಉಳಿಸಿಕೊಳ್ಳಲು ಕೃಷಿ ಪಂಪ್‌ಸೆಟ್‌ಗಳಿಗೆ ಅಗತ್ಯ ವಿದ್ಯುತ್ ಸರಬರಾಜು ಮಾಡಲು ಸದ್ಯಕ್ಕೆ ಸಾಧ್ಯವಾಗುತ್ತಿಲ್ಲ. ಸಮಸ್ಯೆಯ ಗಂಭೀರತೆ ಅರಿತಿರುವ ಮುಖ್ಯಮಂತ್ರಿ ಅವರು ವಿದ್ಯುತ್ ಬಿಕ್ಕಟ್ಟು ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದಾರೆ. ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ಕೇಂದ್ರ ಸಚಿವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಕಲ್ಲಿದ್ದಲು ಪೂರೈಕೆಗೆ ಕ್ರಮ ಕೈಗೊಳ್ಳುತ್ತಿದ್ದಾರೆ. ಹೆಚ್ಚುವರಿ ವಿದ್ಯುತ್ ಹೊಂದಿರುವ ರಾಜ್ಯಗಳಿಂದ ಖರೀದಿಗೆ ಮಾತುಕತೆ ನಡೆದಿದೆ. ಪೂರ್ಣವಾಗಿ ಅಲ್ಲದಿದ್ದರೂ ಸಮಸ್ಯೆ ಬಗೆಹರಿಸುವ ಪ್ರಯತ್ನ ನಡೆದಿದೆ ಎಂದರು.

ಮಳೆ ಆಗಿದ್ದರೆ ಸಮಸ್ಯೆ ಇರಲಿಲ್ಲ : ಈ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಳೆಯಾಗಿದ್ದರೆ ವಿದ್ಯುತ್ ಸಮಸ್ಯೆ ಆಗುತ್ತಿರಲಿಲ್ಲ. ಮಳೆ ಪ್ರಮಾಣ ಕಡಿಮೆಯಾಗಿ ರುವುದರಿಂದ ನಾವು ಈ ಸ್ಥಿತಿಗೆ ಬಂದಿದ್ದೇವೆ.

▶ 9ನೇ ಪುಟಕ್ಕೆ

ಮುಂದಿನ ಮೂರು ತಿಂಗಳಲ್ಲಿ ರೈತರಿಗೆ ಬೆಳೆ ಮಾಹಿತಿ ನೀಡಲು ಸಾವಿರ ಅಧಿಕಾರಿಗಳ ನೇಮಕ

ಬೆಂಗಳೂರು, ಅ.12(ಕೆಎಂಶಿ)–ರೈತರಿಗೆ ಬೆಳೆ ಮಾಹಿತಿ ನೀಡುವ ಒಂದು ಸಾವಿರ ಕೃಷಿ ಅಧಿಕಾರಿಗಳನ್ನು ಇನ್ನು ಮೂರು ತಿಂಗಳಲ್ಲಿ ಭರ್ತಿ ಮಾಡುವುದಾಗಿ ಕೃಷಿ ಸಚಿವ ಚಲುವರಾಯಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಅಧಿಕಾರಿಗಳು ತುಂಬಿ ತುಳುಕುತ್ತಿದ್ದಾರೆ. ಆದರೆ, ರೈತರಿಗೆ ಸಲಹೆ ಸೂಚನೆಗಳನ್ನು ನೀಡುವ 2500 ವಿವಿಧ ಹುದ್ದೆಗಳು ಖಾಲಿ ಇವೆ.

2000 ಹುದ್ದೆಗಳ ಭರ್ತಿಗೆ ಮುಖ್ಯಮಂತ್ರಿ ಕೋರಿದ್ದು, ಮೊದಲ ಹಂತದಲ್ಲಿ ಒಂದು ಸಾವಿರ ಹುದ್ದೆ ಭರ್ತಿಗೆ ಕ್ರಮ ವಹಿಸುವಂತೆ ಆರ್ಥಿಕ ಇಲಾಖೆಗೆ ಸೂಚಿಸಿದ್ದಾರೆ. ನಂತರದ ದಿನಗಳಲ್ಲಿ ಉಳಿದ ಖಾಲಿ ಹುದ್ದೆ ಭರ್ತಿ ಮಾಡುತ್ತಿದ್ದೇವೆ. ಈ ನಡುವೆ ಬಹುದಿನಗಳಿಂದ ಬಾಕಿ ಉಳಿದಿದ್ದ ಮುಂಬಡ್ತಿಯನ್ನು ನೀಡಲಾಗಿದೆ ಎಂದು ಹೇಳಿದರು. ಇದಲ್ಲದೆ, ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಕೆಪಿಎಸ್ಸಿ ಮೂಲಕ ನೇಮಕ ಮಾಡಿಕೊಳ್ಳಲಾಗುತ್ತಿದೆ. ಮುಂಗಾರು ಹಂಗಾಮಿನಲ್ಲಿ ಬೆಳೆ ಕಳೆದುಕೊಂಡ ರೈತರಿಗೆ ಕೇಂದ್ರ ಸರ್ಕಾರ ನೀಡುವ ಪರಿಹಾರ ನೋಡಿಕೊಂಡು ರಾಜ್ಯ ಸರ್ಕಾರ ಮುಂದಿನ ನಿರ್ಧಾರ ಕೈಗೊಳ್ಳಲಿದೆ. ಮಾರ್ಗಸೂಚಿ ಪ್ರಕಾರ 5 ಸಾವಿರ ಕೋಟಿ ರೂ. ಬೆಳೆ ನಷ್ಟ ಪರಿಹಾರಕ್ಕೆ ಮನವಿ ಸಲ್ಲಿಸಲಾಗಿದೆ. ಎಷ್ಟು ಪರಿಹಾರ ನೀಡುತ್ತಾರೆ ಎಂಬುದನ್ನು ಗಮನಿಸಿ, ಆ ನಂತರ

▶ 9ನೇ ಪುಟಕ್ಕೆ

ಕಾಂಗ್ರೆಸ್ ಕದ ತಟ್ಟುತ್ತಿರುವ ವಿವಿಧ ಪಕ್ಷಗಳ 42ಕ್ಕೂ ಅಧಿಕ ಮುಖಂಡರು

■ ಶೆಟ್ಟರ್, ಸವದಿ ಸಿದ್ಧಪಡಿಸಿರುವ ಪಟ್ಟಿ ಇದು ■ ಡಿಸಿಎಂ ಡಿ.ಕೆ.ಶಿವಕುಮಾರ್ ಕೈ ಸೇರಿದೆ ■ ಮಾಜಿ ಶಾಸಕ ಶಿರಹಟ್ಟಿ ರಾಮಪ್ಪ ಲಮ್ಮಾಣಿ ಕಾಂಗ್ರೆಸ್ ಸೇರ್ಪಡೆ

ಬೆಂಗಳೂರು, ಅ.12(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಬಹುದಾದ ಉತ್ತರ ಮತ್ತು ದಕ್ಷಿಣ ಕರ್ನಾಟಕದ ನಾಯಕರ ದೊಡ್ಡ ಪಟ್ಟಿಯನ್ನೇ ತಂದು ಚರ್ಚೆ ಮಾಡಿದ್ದಾರೆ. ವಿವಿಧ ಪಕ್ಷಗಳ 42 ಕ್ಕೂ ಹೆಚ್ಚು ಮುಖಂಡರ ಅರ್ಜಿಗಳು ನನ್ನ ಮುಂದಿವೆ. ಆ ಹೆಸರುಗಳನ್ನು ಈಗ ಬಹಿರಂಗ ಮಾಡುವುದಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಲ್ಲಿ ಬಿಜೆಪಿ ಮಾಜಿ ಶಾಸಕ ಶಿರಹಟ್ಟಿಯ ರಾಮಪ್ಪ ಲಮ್ಮಾಣಿ ಅವರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ಥಳೀಯ ನಾಯಕರುಗಳ ಜತೆ ಚರ್ಚೆ ಮಾಡಿ, ಒಮ್ಮತ ಮೂಡಿಸಿ ಅನ್ಯ ಪಕ್ಷಗಳ ನಾಯಕರುಗಳನ್ನು ಸೇರ್ಪಡೆ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ವಿರೋಧ ಪಕ್ಷಗಳ ಮೈತ್ರಿಯನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷವನ್ನು ಸೇರುತ್ತಿರುವುದರಿಂದ ರಾಜ್ಯ, ರಾಷ್ಟ್ರಮಟ್ಟದಲ್ಲಿ ನಮ್ಮ ಪಕ್ಷ ಹಾಗೂ ಕಾರ್ಯಕರ್ತರಿಗೆ ಶಕ್ತಿ ತುಂಬಿದಂತಾಗಿದೆ ಎಂದು ಹೇಳಿದರು.

ಕೆಲವರು 2024 ರಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತದೆ ಎಂದು ಹೇಳುತ್ತಿದ್ದಾರೆ. ಅದರ ವಿವರಣೆಗೆ ನಾನು ಹೋಗುವುದಿಲ್ಲ. ಆಮ್ ಆದ್ಮಿ ಪಕ್ಷದಿಂದ ಸ್ಪರ್ಧೆ ಮಾಡಿದ 100ಕ್ಕೂ ಹೆಚ್ಚು ಜನ ಅಭ್ಯರ್ಥಿಗಳು ನನ್ನನ್ನು ಭೇಟಿ ಮಾಡಿ, ನಾವು ಇಂಡಿಯಾದಲ್ಲಿ ಗುರುತಿಸಿಕೊಂಡಿದ್ದು, ನಿಮ್ಮ ಜೊತೆ ಕೈ ಜೋಡಿಸುತ್ತೇವೆ ಎಂದು ಹೇಳಿದ್ದಾರೆ. ಬೀದರ್‌ನಿಂದ ಚಾಮರಾಜನಗರದ ತನಕ ಕಾಂಗ್ರೆಸ್ ಪಕ್ಷ ಸೇರಲು ಉತ್ಸುಕರಾಗಿದ್ದಾರೆ ಎಂದರು. ಬಿಜೆಪಿ ತಂಡವೊಂದು ಕಾಂಗ್ರೆಸ್ ಪಕ್ಷದ ನಾಯಕರು, ಶಾಸಕರನ್ನು ಭೇಟಿ ಮಾಡುತ್ತಿದೆ. ಈ ಭೇಟಿಯ ಬಗ್ಗೆ ನಮ್ಮ ಪಕ್ಷದ ಮುಖಂಡರು, ಶಾಸಕರು ಇಂಚಿಂಚೂ ಮಾಹಿತಿ ನೀಡುತ್ತಿದ್ದಾರೆ. ಈ ಬಗ್ಗೆ ಮಾಧ್ಯಮದವರು ಎಷ್ಟೇ ಚರ್ಚೆಗೆ ಎಳೆದರೂ ನಾನು ಏನನ್ನೂ ಬಿಟ್ಟುಕೊಡುವುದಿಲ್ಲ ಎಂದು ತಿಳಿಸಿದರು.

ಅ.15ರಿಂದ ದಸರಾ ವಸ್ತು ಪ್ರದರ್ಶನ ಆರಂಭ

11.52 ಕೋಟಿಗೆ ಗುತ್ತಿಗೆ; ಕಳೆದ ವರ್ಷಕ್ಕಿಂತ ಈ ಬಾರಿ 3.44 ಕೋಟಿ ಹೆಚ್ಚುವರಿ ಆದಾಯ

● 90 ದಿನಗಳು ನಡೆಯುವ ದಸರಾ ವಸ್ತು ಪದರ್ಶನ ● ಪ್ರವೇಶ ದರ: ವಯಸ್ಕರಿಗೆ 30 ರೂ. ಮಕ್ಕಳಿಗೆ 20 ರೂ. ● ಈ ಬಾರಿ ಹಲವು ಬಗೆಯ ವಿಶೇಷ ಆಟಿಕೆಗಳ ಪರಿಚಯ

ಮೈಸೂರು, ಅ.12(ಬಿಎಲ್‌ಯು)– ಮೈಸೂರು ದಸರಾ ವಸ್ತು ಪ್ರದರ್ಶನವನ್ನು 90 ದಿನಗಳಿಗೆ 11.52 ಕೋಟಿ ರೂ. ಜಾಗತಿಕ ಟೆಂಡರ್ ನೀಡಲಾಗಿದೆ. ಈ ಮೂಲಕ ಕಳೆದ ಬಾರಿಗಿಂತ ಈ ವರ್ಷ ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ 3.44 ಕೋಟಿ ಹೆಚ್ಚುವರಿ ಆದಾಯ ಬಂದಿದೆ.

ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ಅಕ್ಟೋಬರ್ 15ರಿಂದ ಆರಂಭಗೊಳ್ಳಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಂದು ಚಾಲನೆ ನೀಡಲಿದ್ದಾರೆ. ದಸರಾ ಮಹೋತ್ಸವ ವಿಜಯದಶಮಿಯೊಂದಿಗೆ ಅಕ್ಟೋಬರ್ 24ಕ್ಕೆ ಮುಗಿದರೂ ದಸರಾ ಅಂಗವಾಗಿ ನಡೆಯುವ ವಸ್ತು ಪ್ರದರ್ಶನ ಜನವರಿವರೆಗೆ ಇರಲಿದೆ.

ಈ ಬಾರಿಯ ದಸರಾ ವಸ್ತು ಪ್ರದರ್ಶನ ನಡೆಸಲು ಜಾಗತಿಕ ಟೆಂಡರ್ ಕರೆಯಲಾಗಿತ್ತು. ಬೆಂಗಳೂರಿನ ಫನ್ ವರ್ಲ್ಡ್ ಹಾಗೂ ಬೆಂಗಳೂರು ಸೇಲ್ಸ್ ಅಂಡ್ ಮಾರ್ಕೆಟಿಂಗ್‌ನವರು ಟೆಂಡರ್‌ನಲ್ಲಿ ಭಾಗವಹಿಸಿದ್ದರು. ಬೆಂಗಳೂರು ಸೇಲ್ಸ್ ಅಂಡ್ ಮಾರ್ಕೆಟಿಂಗ್‌ನವರು 9.68 ಕೋಟಿ ನಮೂದಿಸಿದ್ದರೆ, ಫನ್‌ವರ್ಲ್ಡ್‌ನವರು 11.52 ಕೋಟಿ ನಮೂದಿಸಿದ್ದರು. ಹಾಗಾಗಿ ಹೆಚ್ಚು ಮೊತ್ತ ನಮೂದಿಸಿದ್ದ ಫನ್ ವರ್ಲ್ಡ್‌ಗೆ 90 ದಿನಗಳ ದಸರಾ



ವಸ್ತು ಪ್ರದರ್ಶನದ ಗುತ್ತಿಗೆ ದೊರಕಿದೆ.

ಕಳೆದ ವರ್ಷ ಜಾಗತಿಕ ಟೆಂಡರ್ ಮೂಲಕ ಇದೇ ಫನ್‌ವರ್ಲ್ಡ್‌ಗೆ 8.08 ಕೋಟಿ ರೂ.ಗೆ ಗುತ್ತಿಗೆ ನೀಡಲಾಗಿದ್ದರೆ, ಈ ವರ್ಷ 11.52 ಕೋಟಿ ರೂಪಾಯಿಗೆ ನೀಡಲಾಗಿದೆ. ಪ್ರವೇಶ ದರ ಸಂಗ್ರಹ, ವಾಣಿಜ್ಯ ಮಳಿಗೆಗಳು, ಆಹಾರ ಮಳಿಗೆಗಳು, ಅಮ್ಯೂಸ್ ಮೆಂಟ್, ವಾಹನ ನಿಲ್ದಾಣದ ಗುತ್ತಿಗೆಯನ್ನು ಫನ್ ವರ್ಲ್ಡ್‌ನವರು ನಿರ್ವಹಿಸಲಿದ್ದಾರೆ. ಈ ತನಕ ಫನ್‌ವರ್ಲ್ಡ್‌ನವರು 9 ಬಾರಿ ಮೈಸೂರು ದಸರಾ ವಸ್ತು ಪ್ರದರ್ಶನ ನಿರ್ವಹಿಸಿದ್ದಾರೆ.

ಆಕರ್ಷಕ ಆಟಿಕೆಗಳು: ಈ ವರ್ಷ ಅಮ್ಯೂಸ್ ಮೆಂಟ್‌ನಲ್ಲಿ 35 ವಿವಿಧ ಬಗೆಯ ಆಟಿಕೆಗಳಿರುತ್ತವೆ. ಚೀನಾ ದೇಶದ ಪೆಂಡಾ ಲೂಮ್, ವಿಂಡ್ ಮಿಲ್, ಸುನಾಮಿ ಸೇರಿದಂತೆ ವಿವಿಧ ಹೊಸ ಬಗೆಯ ಆಟಿಕೆಗಳನ್ನು ಈ ಬಾರಿ ಪರಿಚಯಿಸಲಾಗಿದೆ. ಇದೇ ಮೊದಲ ಬಾರಿಗೆ ಬೈಕ್ ಸ್ಟಂಟ್ ಕೂಡ ಇರಲಿದೆ ಎಂದು ಫನ್ ವರ್ಲ್ಡ್ ಮಾಲೀಕ ವಿನೋದ್ ಸಬರವಾಲ್ ತಿಳಿಸಿದರು. ಈ ಬಾರಿ ಕೂಡ ವಯಸ್ಕರಿಗೆ 30 ರೂ., ಮಕ್ಕಳಿಗೆ 20 ರೂ. ಪ್ರವೇಶ ದರ ನಿಗದಿ ಮಾಡಲಾಗಿದೆ. ಆದರೆ ವಿಶೇಷ ಚೇತನರಿಗೆ ಉಚಿತ ಪ್ರವೇಶ ವಿರುತ್ತದೆ.

'ಶಕ್ತಿ' ಇರುವುದರಿಂದ ಹೆಚ್ಚು ಜನ ಬಂದೇ ಬರ್‍ತಾರೆ...

ಕಳೆದ ವರ್ಷ 17 ಲಕ್ಷ ಜನರು ಮೈಸೂರು ದಸರಾ ವಸ್ತು ಪ್ರದರ್ಶನ ವೀಕ್ಷಿಸಿದ್ದಾರೆ ಎಂದು ರಾಜೇಶ್‌ಗೌಡ ತಿಳಿಸಿದ್ದಾರೆ. ಆದರೆ ಈ ಬಾರಿ ಶಕ್ತಿ ಯೋಜನೆಯಲ್ಲಿ ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ ಇರುವ ಕಾರಣ ಹೆಚ್ಚು ಜನರು ದಸರಾ ವಸ್ತು ಪ್ರದರ್ಶನದ ವೀಕ್ಷಣೆಗೆ ಬರಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ ಎಂದರು. ಹೆಚ್ಚು ಜನರು ಆಗಮಿಸುವ ಕಾರಣ ಕುಡಿಯುವ ನೀರು ಮತ್ತು ಶುಚಿತ್ವವಿರುವ ಶೌಚಾಲಯದ ವ್ಯವಸ್ಥೆ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ರಾಜೇಶ್‌ಗೌಡ ಹೇಳಿದರು. ಮರಳಿನ ಕಲಾ ಕೃತಿಯಲ್ಲಿ ಪುನೀತ್ ರಾಜ್‌ಕುಮಾರ್, ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಹಾಗೂ ಚಂದ್ರಯಾನ–3 ಕಲಾಕೃತಿ ನಿರ್ಮಾಣ ಮಾಡಲಾಗುತ್ತಿದ್ದು, ಜನರನ್ನು ಅತ್ಯಾಕರ್ಷಿಸಲಿದೆ ಎಂದು ತಿಳಿಸಿದರು.

ಸರ್ಕಾರದ ವಿವಿಧ ಇಲಾಖೆಯ 38 ಸ್ಟಾಲ್‌ಗಳಿರುತ್ತವೆ. ದಸರಾ ವಸ್ತು ಪ್ರದರ್ಶನದ ಉದ್ಘಾಟನೆ ದಿನದಂದೇ ಶೇ.75ರಷ್ಟು ಸರ್ಕಾರಿ ಮಳಿಗೆಗಳು ತೆರೆಯಬೇಕಿದೆ. ಉಳಿದ ಶೇ.25ರಷ್ಟು ಮಳಿಗೆಗಳು ವಾರದೊಳಗೆ ತೆರೆಯುತ್ತವೆ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್‌ಗೌಡ ತಿಳಿಸಿದ್ದಾರೆ. ಪ್ರತಿದಿನ ಹಲವು ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಆದರೆ ಶನಿವಾರ ಮತ್ತು ಭಾನುವಾರ ಹೆಸರಾಂತ ಕಲಾವಿದರಿಂದ ವಿಶಿಷ್ಟ ಕಾರ್ಯಕ್ರಮಗಳ ವ್ಯವಸ್ಥೆ ಮಾಡಲಾಗಿದೆ. ವಸ್ತು ಪ್ರದರ್ಶನದ ರಸ್ತೆಗಳು ಹಾಗೂ ಫೌಂಟೆನ್‌ಗಳನ್ನು ದುರಸ್ತಿ ಮಾಡಿಸಿ, ಕಟ್ಟಡಗಳಿಗೆ ಬಣ್ಣದ ಮೆರಗು ನೀಡಲಾಗಿದೆ. ಪ್ರವೇಶ ದ್ವಾರ ಸೇರಿದಂತೆ ಇತರೆಡೆ ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ. ಈ ಮೂಲಕ ದಸರಾ ವಸ್ತು ಪ್ರದರ್ಶನ ಆರಂಭಕ್ಕೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ವಾಣಿಜ್ಯ ಮಳಿಗೆಗಳು, ಆಹಾರ ಮಳಿಗೆಗಳ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ಅಮ್ಯೂಸ್ ಮೆಂಟ್‌ನಲ್ಲಿ ವಿವಿಧ ಬಗೆಯ ಆಟಿಕೆಗಳನ್ನು ಅವಳಡಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ.

ದಸರಾ ವಸ್ತು ಪ್ರದರ್ಶನದಲ್ಲಿ ಸ್ಥಳಿಯರು ಸೇರಿದಂತೆ ಹೊರ ರಾಜ್ಯದ ವ್ಯಾಪಾರಿಗಳು ಕೂಡ ಭಾಗಿಯಾಗಲಿದ್ದಾರೆ. ಇದರಿಂದ ಸ್ಥಳಿಯರಿಗೆ ಉದ್ಯೋಗಾವಕಾಶ ದೊರೆಯುತ್ತದೆ. ಜೊತೆಗೆ ಪ್ರವಾಸಿಗರು ಸೇರಿದಂತೆ ಲಕ್ಷಾಂತರ ಜನರು ಆಗಮಿಸುವ ಹಿನ್ನೆಲೆಯಲ್ಲಿ ಮೈಸೂರಿನ ವ್ಯಾಪಾರ ವಹಿವಾಟು ಕೂಡ ಚುರುಕುಗೊಳ್ಳಲಿದೆ.

ಮೇಯರ್, ಪಾಲಿಕೆ ಆಯುಕ್ತರಿಂದ ಕೆಸರೆ ಘನ ತ್ಯಾಜ್ಯ ಸಂಸ್ಕರಣಾ ಘಟಕ ಪರಿಶೀಲನೆ



ಮೈಸೂರು, ಅ.12(ಆರ್‌ಕೆ)–ಮೈಸೂರಿನ ಕೆಸರೆಯಲ್ಲಿರುವ ಘನ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯವನ್ನು ಮೇಯರ್ ಶಿವಕುಮಾರ್ ಹಾಗೂ ನಗರಪಾಲಿಕೆ ಆಯುಕ್ತ ಆಸಾದ್ ಉರ್ ರೆಹಮಾನ್ ಷರೀಫ್ ಗುರುವಾರ ಪರಿಶೀಲಿಸಿದರು.

ಮೈಸೂರಲ್ಲಿ ಪ್ರತೀದಿನ ಉತ್ಪತ್ತಿ ಯಾಗುತ್ತಿರುವ ಸುಮಾರು 200 ಟನ್ ಕಸವನ್ನು ಕೆಸರೆ ಪ್ಲಾಂಟ್‌ಗೆ ಸಾಗಿಸುತ್ತಿದ್ದು, ಅಲ್ಲಿ ಹಸಿ ಮತ್ತು ಒಣಕಸ ಬೇರ್ಪಡಿಸಿ ಸಂಸ್ಕರಣೆ ಮೂಲಕ ವಿಲೇವಾರಿ ಮಾಡುವ ಪ್ರಕ್ರಿಯೆಯನ್ನು ವೀಕ್ಷಿಸಿದ ಅವರು, ಅಲ್ಲಿನ ಸಿಬ್ಬಂದಿ ಎರಡು ಪಾಳಿಯಲ್ಲಿ ಕೆಲಸ ನಿರ್ವಹಿಸುವ ಮೂಲಕ ತ್ಯಾಜ್ಯ ಸಂಸ್ಕರಣೆಗೆ ಆದ್ಯತೆ ನೀಡುವಂತೆ ಸೂಚಿಸಿದರು. ವಿದ್ಯಾರಣ್ಯಪುರಂನ ಎಕ್ಸೆಲ್ ಪ್ಲಾಂಟ್‌ನಲ್ಲಿ ಈಗಾಗಲೇ ಬೃಹದಾಕಾರದಲ್ಲಿ ಸಂಗ್ರಹವಾಗಿರುವ ತ್ಯಾಜ್ಯ ವಿಲೇವಾರಿಗೆ ತೊಂದರೆಯಾಗಿರುವುದರಿಂದ ಕೆಸರೆಯಲ್ಲಿ ಪ್ಲಾಂಟ್ ಸ್ಥಾಪಿಸಲಾಗಿದೆ. ಮೈಸೂರಿನ ಅರ್ಧ ಭಾಗದಲ್ಲಿ ಸಂಗ್ರಹವಾಗುವ ತ್ಯಾಜ್ಯ ವಿಲೇವಾರಿಗೆ ಕೆಸರೆ ಪ್ಲಾಂಟ್‌ನಲ್ಲಿ ವ್ಯವಸ್ಥೆ ಮಾಡ ಲಾಗಿದೆ.

ನಗರಪಾಲಿಕೆ ಅಧಿಕಾರಿಗಳು, ಆರೋಗ್ಯ ಶಾಖೆ ಸಿಬ್ಬಂದಿ, ಪರಿಸರ ಇಂಜಿನಿಯರ್‌ಗಳು ಸ್ಥಳದಲ್ಲಿ ಪರಿಶೀಲನೆ ವೇಳೆ ಉಪಸ್ಥಿತರಿದ್ದು, ಅಲ್ಲಿನ ಕಾರ್ಯವೈಖರಿ ಬಗ್ಗೆ ಪರಿಶೀಲನೆ ನಡೆಸಿದರು.



ಮೈಸೂರಿನ ಮಹದೇಶ್ವರ ಬಡಾವಣೆಯ ತ್ರಿನೇತ್ರ ವೃತ್ತದಿಂದ ವಿಜಯನಗರ ವಾಟರ್ ಟ್ಯಾಂಕ್ ರಸ್ತೆಯಲ್ಲಿ ರಸ್ತೆ ವಿಭಜಕ ನಿರ್ಮಾಣ ಕಾಮಗಾರಿಗೆ ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಗುದ್ದಲಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ರಾಮಚಂದ್ರ, ಕೃಷ್ಣಪ್ಪ, ಅರುಣ, ನಿಣಿ, ರಮೇಶ್, ಅಶೋಕ್ ಇನ್ನಿತರರು ಉಪಸ್ಥಿತರಿದ್ದರು.

ಸೋಹನ್‌ಲಾಲ್‌ಜಿ ಬಾಗ್‌ಮಾರ್‌ಗೆ ಬಿಜೆಎಸ್ ಸೇವಾ ಶಿರೋಮಣಿ ಜೀವಮಾನ ಸಾಧನೆ ಪ್ರಶಸ್ತಿ



ಮೈಸೂರು,ಅ.12–ಇತ್ತೀಚೆಗೆ ಮೈಸೂರಿನ ಸಮತಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮನುಕುಲ ಮತ್ತು ಸಮಾಜಕ್ಕೆ ನೀಡಿದ ಅತ್ಯುತ್ತಮ ಸೇವೆಯನ್ನು ಪರಿಗಣಿಸಿ ಸೋಹನ್‌ಲಾಲ್‌ಜಿ ಬಾಗ್‌ಮಾರ್ ಅವರಿಗೆ ಬಿಜೆಎಸ್ ಸೇವಾ ಶಿರೋಮಣಿ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಯಿತು. ಮೈನಾ ಬಾಯಿ ಮತ್ತು ಬುದ್‌ಮಾಲ್ ಬಾಗ್‌ಮಾರ್ ಅವರು ಬಿಜೆಎಸ್ ಸೇವಾ ಶಿರೋಮಣಿ ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ ಸುಮತಿ ನಾಥ್‌ಮೂರ್ತಿ ಪುಜಾಕ್ ಸಂಘದ ಅಧ್ಯಕ್ಷ ಬೀರುಲಾಲ್‌ಜೀ ರಾಥೋಡ್, ಸ್ಥಾನಿಕವಾಸಿ ಜೈನ್ ಸಂಘದ ಅಧ್ಯಕ್ಷ ಸುಭಾಷ್ ಚಂದಜಿ ದೋಕಾ, ತೇರಾ ಪಂತ್ ಅಧ್ಯಕ್ಷ ಪ್ರಕಾಶ್ ಚಂದ್‌ಜಿ ದಾಕ್ (ರಾಯಲ್), ಸಾಧುಮಾರ್ಗಿ ಜೈನ್ ಅಧ್ಯಕ್ಷ ಸುರೇಶ್ ಕುಮಾರ್ ಜೀ ದಾಕ್, ಭಾರತೀಯ ಜೈನ್ ಸಂಘಟನೆ ಮೈಸೂರು ಚಾಪ್ಟರ್ ಅಧ್ಯಕ್ಷ ಪ್ರವೀಣ್ ಲುಂಕಾರ್, ಕಾರ್ಯದರ್ಶಿ ಕುಶಾಲ್ ಪಾಲ್ ರೇಚಾ, ಜಂಟಿ ಕಾರ್ಯದರ್ಶಿ ನೇಮಿ ಚಂದ್ ಬಾಡೋಲಾ, ಪ್ರಾಜೆಕ್ಟ್ ಡೈರೆಕ್ಟರ್ ರಾಜೇಂದ್ರ ದೇಸರಾಲಾ, ದೀಪಕ್ ಬೋಹ್ರಾ, ಮಹಾವೀರ್ ಗಡಿಯಾ, ಬಿಜೆಎಸ್ ಮಾಜಿ ಅಧ್ಯಕ್ಷ ಅಶೋಕ್‌ಜಿ ಸಲೇಚಾ, ಪ್ರಕಾಶ್‌ಜೀ ಗುಲೇಚಾ ಉಪಸ್ಥಿತರಿದ್ದರು.

ಅ.18, ಮೈಸೂರು ವಿವಿ 103ನೇ ಘಟಿಕೋತ್ಸವ

ಮೈಸೂರು, ಅ.12– ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ಅ.18ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಏರ್ಪಡಿಸಲಾಗಿದೆ. ರಾಜ್ಯಪಾಲರೂ ಆದ ಮೈಸೂರು ವಿಶ್ವವಿದ್ಯಾನಿಲಯ ಕುಲಾಧಿಪತಿಗಳಾದ ಥಾವರ್ ಚಂದ್ ಗೆಹ್ಲೋಟ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು. ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ ವಿಶ್ರಾಂತ ಮಹಾನಿರ್ದೇಶಕರಾದ ಪದ್ಮವಿಭೂಷಣ ಡಾ. ವಾಸುದೇವ್ ಕೆ.ಆತ್ರೆ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಮಕುಲಾಧಿಪತಿಗಳಾದ ಡಾ. ಎಂ.ಸಿ.ಸುಧಾಕರ್ ಉಪಸ್ಥಿತರಿರುವರು.



ದಕ್ಷಿಣ ವಲಯದಲ್ಲಿ 58 ಎಸ್‌ಐಗಳಿಗೆ ಸ್ಥಳ ನಿಯೋಜನೆ

ಮೈಸೂರು, ಅ.12–ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಪ್ರಸ್ತುತ ಎಎಸ್‌ಐ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 58 ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಪ್ರಭಾರ ನೀಡಿ ಸ್ಥಳ ನಿಯೋಜನೆ ಮಾಡಲಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಠಾಣೆಗೆ ಎ.ಆರ್.ಸುರೇಶ್, ಸಾಲಿಗ್ರಾಮ ಠಾಣೆಗೆ ಹೆಚ್.ಎನ್.ಕೋಟೇಗೌಡ, ತಲಕಾಡಿಗೆ ಕೆ.ಶಿವಕುಮಾರ್, ನಂಜನಗೂಡು ಪಟ್ಟಣ ಠಾಣೆಗೆ ಬಿ.ವೈ.ಶಿವಣ್ಣ, ಹೆಚ್.ಡಿ.ಕೋಟೆಗೆ ಜಿ.ವಿ.ಗೌರಿಶಂಕರ, ಅಂತರಸಂತೆಗೆ ಆರ್.ಕುಮಾರ್, ಮೈಸೂರು ದಕ್ಷಿಣ ಠಾಣೆಗೆ ಶಾಂತಲಿಂಗಯ್ಯ, ನಂಜನಗೂಡು ಗ್ರಾಮಾಂತರ ಠಾಣೆಗೆ ಕೆ.ಗೋಪಾಲಕೃಷ್ಣ, ಹುಣಸೂರು ಗ್ರಾಮಾಂತರ ಠಾಣೆಗೆ ಆರ್.ಪಾಂಡುರಂಗ, ಕೆ.ಆರ್.ನಗರಕ್ಕೆ ಎಂ.ನಂಜಪ್ಪ, ಹೆಚ್.ಡಿ.ಕೋಟೆಗೆ ಸುಬ್ರಮಣ್ಯ, ಪಿರಿಯಾಪಟ್ಟಣಕ್ಕೆ ಆರ್.ನಾಗರಾಜು, ತಿ.ನರಸೀಪುರ ಠಾಣೆಗೆ ವಿ.ಪ್ರಭಾಕರ್ ಅವರನ್ನು ನಿಯೋಜಿಸಲಾಗಿದೆ.

ಚಾಮರಾಜನಗರ ಜಿಲ್ಲೆ ರಾಮಾಪುರ ಠಾಣೆಗೆ ಎಸ್.ಲೋಕೇಶ್, ಅಗರ ಮಾಂಬಳ್ಳಿಗೆ ಎಂ.ಸಿದ್ದರಾಜು, ಯಳಂದೂರಿಗೆ ಎಂ.ಮಲ್ಲಿಕಾರ್ಜುನ, ಚಾಮರಾಜನಗರ ಪೂರ್ವ ಠಾಣೆಗೆ ಕೆ.ವಿಜಯಕುಮಾರ್, ಗುಂಡ್ಲುಪೇಟೆಗೆ ಎಂ.ಎನ್.ಶಿವಶಂಕರಪ್ಪ, ಚಾಮರಾಜನಗರ ಟೌನ್ ಠಾಣೆಗೆ ಶಿವಶಂಕರ, ಸಂತೇಮರಳ್ಳಿಗೆ ಚಂದ್ರಶೇಖರ, ಹನೂರು ಠಾಣೆಗೆ ಅಶ್ವತ್ಥ, ಚಾಮರಾಜನಗರ ಟೌನ್ ಠಾಣೆಗೆ ಕೆ.ಎಂ.ಗೋಪಾಲಕೃಷ್ಣ, ಗುಂಡ್ಲುಪೇಟೆಗೆ ಸಿ.ಎಂ.ಜಯರಾಂ, ಚಾ.ನಗರ ಜಿಲ್ಲೆ ಸೆನ್ ಠಾಣೆಗೆ ಎಸ್.ಪ್ರಕಾಶ್, ಚಾ.ನಗರ ಪಟ್ಟಣ ಠಾಣೆಗೆ ಸ್ವಾಮಿ, ಮಹದೇಶ್ವರ ಬೆಟ್ಟಕ್ಕೆ ಎಂ.ರವಿ, ಕೊಳ್ಳೇಗಾಲ ಗ್ರಾಮಾಂತರ ಠಾಣೆಗೆ ಎನ್.ಚಲುವರಾಜು, ತೆರಕಣಾಂಬಿಗೆ ಕೂಸಪ್ಪ, ಡಿಎಸ್‌ಬಿಗೆ ಚಂದ್ರಪ್ಪ, ಸೆನ್ ಠಾಣೆಗೆ ಡಿ.ಧನಂಜಯ, ಚಾಮರಾಜನಗರ ಪೂರ್ವ ಠಾಣೆಗೆ ವಸಂತಕುಮಾರ್ ನಿಯೋಜಿಸಲಾಗಿದೆ.

ಹಾಸನ ಜಿಲ್ಲೆ ಕೊಣನೂರು ಠಾಣೆಗೆ ಕೆ.ಪ್ರಹ್ಲಾದ, ಹಾಸನ ಬಡಾವಣೆ ಠಾಣೆಗೆ ಎಂ.ಆರ್.ಮಂಜಶೆಟ್ಟಿ, ಹೊಳೆನರಸೀಪುರಕ್ಕೆ ಕೆ.ಜೆ.ರಂಗಸ್ವಾಮಿ, ಹಾಸನ ನಗರ ಠಾಣೆಗೆ ಬಿ.ಎಂ.ಕೇಶವಪ್ರಸಾದ್, ಗ್ರಾಮಾಂತರ ಠಾಣೆಗೆ ಆರ್.ರಾಮ, ಶ್ರವಣಬೆಳಗೊಳಕ್ಕೆ ಕೆ.ವಿ.ಸುಬ್ರಮಣ್ಯ, ಹಾಸನ ನಗರ ಠಾಣೆಗೆ ಸಿ.ಡಿ.ಆನಂದ.

ಮಂಡ್ಯ ಜಿಲ್ಲೆ ಅರಕೆರೆಗೆ ಶಿವರುದ್ರ, ಕೆ.ಎಂ.ದೊಡ್ಡಿಗೆ ಕೆ.ಸಿ.ದೇವರಾಜು, ಬೆಳ್ಳೂರು ಠಾಣೆಗೆ ಶ್ರೀಧರಸ್ವಾಮಿ, ಮಂಡ್ಯ ಪಶ್ಚಿಮ ಠಾಣೆಗೆ ಪಿ.ಅರ್ಕೇಶ್, ಕಿರುಗಾವಲು ಠಾಣೆಗೆ ಎಂ.ಸಿದ್ದರಾಜು, ಮಂಡ್ಯ ಗ್ರಾಮಾಂತರ ಠಾಣೆಗೆ ಚಿಕ್ಕಹುಚ್ಚೇಗೌಡ, ಶ್ರೀರಂಗಪಟ್ಟಣ ಗ್ರಾಮಾಂತರಕ್ಕೆ ಆರ್.ಹೇಮಂತಕುಮಾರ್, ಮಂಡ್ಯ ಸೆಂಟ್ರಲ್‌ಗೆ ಎಸ್.ಬಿ.ಮೋಹನ್‌ಕುಮಾರ್, ಕೊಪ್ಪ ಠಾಣೆಗೆ ಎಂ.ಮಹದೇವ, ಪಾಂಡವಪುರಕ್ಕೆ ಮಹದೇವ, ಶಿವಳ್ಳಿಗೆ ಎಂ.ಕೆ.ರಘುಪ್ರಸಾದ್, ಕೆಸ್ತೂರು ಠಾಣೆಗೆ ಎಂ.ಬಿ.ಮಂಜುನಾಥ್, ಶ್ರೀರಂಗಪಟ್ಟಣಕ್ಕೆ ಎಂ.ಎಸ್.ಗುರುಸ್ವಾಮಿ, ಕೆರಗೂಡು ಠಾಣೆಗೆ ಎಚ್.ವಿ.ಮುನಿವೀರೇಗೌಡ, ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಗೆ ವೆಂಕಟೇಶಾಚಾರ್ ಮತ್ತು ಮಂಚಪ್ಪ, ಕೆ.ಆರ್.ಸಾಗರಕ್ಕೆ ಕೆ.ರಾಮಣ್ಣ ಅವರನ್ನು ಸಬ್ ಇನ್ಸ್‌ಪೆಕ್ಟರ್ ಪ್ರಭಾರ ನೀಡಿ ನಿಯೋಜಿಸಲಾಗಿದೆ.

ಮಹಿಳೆಯರಿಗಾಗಿ ವಿವಿಧ ಆಟೋಟ ಸ್ಪರ್ಧೆ

ಮೈಸೂರು,ಅ.12–ಮೈಸೂರಿನ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ಮಹಿಳೆಯರಿಗಾಗಿ ವಿವಿಧ ಮನರಂಜನಾ ಕಾರ್ಯಕ್ರಮಗಳು ಹಾಗೂ ಗೋಲ್ ಗೊಪ್ಪ ತಿನ್ನುವ ಸ್ಪರ್ಧೆಯನ್ನು ಅ.18ರ ಬುಧವಾರದಂದು ಏರ್ಪಡಿಸಲಾಗಿದೆ. ಅಂದು ಅಪರಾಹ್ನ 2.30ರಿಂದ ಗೀತಾ ಸೀತಾ, ಪಕ್ಕಾ 420, ಬಿಂದಿ ಲಗಾವ್ ಬಲೂನ್ ಚಡಾವ್ ಹಾಗೂ ಗೋಲ್ ಗೊಪ್ಪ ತಿನ್ನುವ ಸ್ಪರ್ಧೆ ನಡೆಯಲಿದೆ. ಈ ಎಲ್ಲಾ ಆಟೋಟಗಳು ರಾಮಕೃಷ್ಣನಗರ ವೃತ್ತದ ಸಮೀಪವಿರುವ ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನಡೆಯಲಿದೆ. ಮಾಹಿತಿ ಹಾಗೂ ನೋಂದಣಿಗಾಗಿ 9964790442, 8310306882 ಸಂಪರ್ಕಿಸಿ.

ಜಾತಿ ಗಣತಿ ವರದಿ ಬಿಡುಗಡೆಗೆ ವಿರೋಧ; ಕುಮಾರಸ್ವಾಮಿ, ಶಾಮನೂರು ಬಳಿ ನಿಯೋಗ

ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ತೀರ್ಮಾನ

● ಇಬ್ಬರಿಗೂ ಜಾತಿ ಗಣತಿ ವರದಿ ಮಹತ್ವ ಮನವರಿಕೆ ● ದುಂಡು ಮೇಜಿನ ಸಭೆ ನಡೆಸಿದ ವೇದಿಕೆ
● ಜಾತಿ ಗಣತಿ ವರದಿ ಶೀಘ್ರ ಬಿಡುಗಡೆಗೆ ಆಗ್ರಹ ● ಸಂಸದ ಪ್ರತಾಪ್ ಸಿಂಹಗೆ ಸವಾಲು

ಮೈಸೂರು,ಅ.12(ಬಿಎಲ್‌ಯು)–ಜಾತಿಗಣತಿ ವರದಿ ಬಿಡುಗಡೆಗೆ ವಿರೋಧ ಮಾಡುತ್ತಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನು ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ನಿಯೋಗ ಖುದ್ದು ಭೇಟಿ ಮಾಡಿ, ಜಾತಿ ಗಣತಿಯ ಮಹತ್ವವನ್ನು ಅವರಿಗೆ ಮನವರಿಕೆ ಮಾಡಿಕೊಡಲು ತೀರ್ಮಾನ ಮಾಡಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ದುಂಡು ಮೇಜಿನ ಸಭೆ ನಡೆಸಿದ ಜಾಗೃತ ವೇದಿಕೆ ಮುಖಂಡರು, ಮುಂದಿನ ವಾರ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಶಾಮನೂರು ಶಿವಶಂಕರಪ್ಪ ಅವರನ್ನು ಭೇಟಿ ಮಾಡಿ ಜಾತಿ ಗಣತಿ ವರದಿಯಿಂದ ಏನೆಲ್ಲಾ ಪ್ರಯೋಜನವಾಗಲಿದೆ ಎಂದು ಮನವರಿಕೆ ಮಾಡಿಕೊಡಲು ಸಭೆ ನಿರ್ಧಾರ ಕೈಗೊಂಡಿತು.

ಸಿದ್ದರಾಮಯ್ಯ ಅವರು 2015ರಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಜಾತಿ ಗಣತಿ ನಡೆಸಲು ಹೆಚ್.ಕಾಂತರಾಜು ನೇತೃತ್ವದಲ್ಲಿ ಆಯೋಗ ರಚಿಸಿದ್ದರು. ಇದಕ್ಕಾಗಿ 170 ಕೋಟಿ ರೂ. ವೆಚ್ಚ ಮಾಡಿದ್ದರು. ಈಗ ನವೆಂಬರ್ ತಿಂಗಳಲ್ಲಿ ವರದಿ ಮಂಡಿಸುವಂತೆ ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ ನೀಡಿದ್ದಾರೆ. ಆದರೆ ಈಗ ಕುಮಾರಸ್ವಾಮಿ, ಶಾಮನೂರು ಶಿವಶಂಕರಪ್ಪ ವರದಿ ಬಿಡುಗಡೆಗೆ ವಿರೋಧ ಮಾಡುತ್ತಿರುವುದು ಸರಿಯಲ್ಲ ಎಂದು ಸಭೆ ಅಭಿಪ್ರಾಯಪಟ್ಟಿತು.

ಜಾತಿ ಗಣತಿ ವರದಿಯಿಂದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ತಿಳಿಯುತ್ತದೆ. ನಿಖರ ಹಾಗೂ ವೈಜ್ಞಾನಿಕ ವರದಿಯಿಂದ ಸಣ್ಣ ಹಾಗೂ ಸೂಕ್ಷ್ಮ ಜಾತಿಯವರು ರಾಜಕೀಯ ಹಾಗೂ ಸಾಮಾಜಿಕ ಸ್ಥಾನಮಾನಕ್ಕೆ ಸರ್ಕಾರದ ಮುಂದೆ ಬೇಡಿಕೆ ಇಡಲು ಅನುಕೂಲವಾಗಲಿದೆ. ಇದರಿಂದ ಜನರಿಗೆ ಏನೆಲ್ಲಾ ಪ್ರಯೋಜನವಾಗಲಿದೆ ಎಂದು ಕುಮಾರಸ್ವಾಮಿ ಹಾಗೂ ಶಾಮನೂರು ಶಿವಶಂಕರಪ್ಪ ಅವರಿಗೆ ಮನದಟ್ಟು ಮಾಡಲು ಸಭೆ ತೀರ್ಮಾನ ಮಾಡಿತು.



ಜಾತಿ ಗಣತಿ ವರದಿ ಬಿಡುಗಡೆಯಾದರೆ ಇದರಿಂದ ತಮಗೆ ರಾಜಕೀಯವಾಗಿ ತೊಂದರೆ ಆಗುತ್ತದೆ ಎಂಬ ಕಾರಣದಿಂದ ಕೆಲವರು ವಿರೋಧ ಮಾಡುತ್ತಿದ್ದಾರೆ ಎಂದು ಸಭೆಯಲ್ಲಿದ್ದ ಹಲವರು ಆಕ್ರೋಶ ವ್ಯಕ್ತಪಡಿಸಿದರು.

ಯಾರು ಏನೇ ವಿರೋಧ ಮಾಡಿದರೂ ಅದನ್ನು ಲೆಕ್ಕಿಸದೆ ಜಾತಿ ಗಣತಿಯನ್ನು ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕು. ತರುವಾಯ ವರದಿ ಅಂಶಗಳನ್ನು ಆಧರಿಸಿ ಆಯಾ ಜಾತಿಯವರಿಗೆ ಸೂಕ್ತ ಸ್ಥಾನಮಾನ ನೀಡುವಂತೆ ಸಭೆ ಸರ್ಕಾರವನ್ನು ಆಗ್ರಹಿಸಿತು.

ಮಹಿಷ ದಸರಾ ವಿಚಾರ ಕುರಿತಂತೆ ಸಂಸದ ಪ್ರತಾಪ್ ಸಿಂಹ ನೀಡುತ್ತಿರುವ ಹೇಳಿಕೆಯನ್ನು ಈ ವೇಳೆ ಸಭೆ ಖಂಡಿಸಿತು. ಈ ರೀತಿಯ ಹೇಳಿಕೆ ನೀಡುತ್ತಿರುವ ಪ್ರತಾಪ್ ಸಿಂಹ, ನನಗೆ ದಲಿತರು ಹಾಗೂ ಹಿಂದುಳಿದ ವರ್ಗದವರ ಮತಗಳು ಬೇಡವೆಂದು ಬಹಿರಂಗವಾಗಿ ಘೋಷಿಸಲಿ ಎಂದು ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಸವಾಲು ಹಾಕಿದರು.

ಸಿದ್ದರಾಮಯ್ಯ ಅವರು ಕೂಡಲೇ ಜಾತಿ ಗಣತಿಯನ್ನು ಮಂಡಿಸಬೇಕು. ಇದರಿಂದ ಸಾಮಾಜಿಕ ನ್ಯಾಯ ಕಲ್ಪಿಸಲು ಸಹಕಾರಿಯಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಆಗ್ರಹಿಸಿದರು.

ಕುಂಬಾರರ ಸಂಘದ ಜಿಲ್ಲಾಧ್ಯಕ್ಷ ಹೆಚ್.ಎಸ್.ಪ್ರಕಾಶ್, ಮಡಿವಾಳ ಸಂಘದ ಜಿಲ್ಲಾಧ್ಯಕ್ಷ ರವಿನಂದನ್, ಉಪ್ಪಾರರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ, ವಿಶ್ವಕರ್ಮ ಸಂಘದ ಜಿಲ್ಲಾಧ್ಯಕ್ಷ ಆಚಾರ್ಯ, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ನಾಗೇಶ್, ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಪ್ರೊ. ಕಾಳಚೆನ್ನಯ್ಯ, ಮುಸ್ಲಿಂ ಸಮುದಾಯದ ಮುಖಂಡ ಖಲೀಂ ಸೇರಿದಂತೆ ಹಲವರು ದುಂಡು ಮೇಜಿನ ಸಭೆಯಲ್ಲಿ ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರಲ್ಲಿ ಜಂಬೋ ಸರ್ಕಸ್ ಆರಂಭ





ಮೈಸೂರು, ಅ.12(ಜಿಎ)–ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹೆಸರಾಂತ ಜಂಬೋ ಸರ್ಕಸ್ ನಾಳೆ(ಅ.13)ಯಿಂದ ಚಾಲನೆಗೊಳ್ಳಲಿದ್ದು, ಬರೋಬ್ಬರಿ 40 ದಿನಗಳ ಕಾಲ ಜನರ ರಂಜಿಸಲಿದೆ ಎಂದು ಸರ್ಕಸ್ ಕಲಾವಿದರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ವಿ.ನಾಗೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ಸಂಜೆ 6.30ಕ್ಕೆ ನಗರದ ನಜರ್‌ಬಾದ್‌ನ ಮೃಗಾಲಯದ ಹಿಂಭಾಗದ ಹಾರ್ಸ್ ಪಾರ್ಕ್ ಮೈದಾನದಲ್ಲಿ ಆಯೋಜಿಸಿರುವ ಜಂಬೋ ಸರ್ಕಸ್ ಅನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್‌ಸೇಠ್, ಟಿ.ಎಸ್.ಶ್ರೀವತ್ಸ ಹಾಗೂ ಮೇಯರ್ ಶಿವಕುಮಾರ್ ಆಗಮಿಸಲಿದ್ದಾರೆ ಎಂದು ಹೇಳಿದರು.

ಈ ಬಾರಿ ಭಾರತ, ಆಫ್ರಿಕಾದ ಎಥೋಪಿಯನ್ಸ್ ಮತ್ತು ಟ್ಯಾನ್ ಸ್ಯಾನಿಯಸ್ಸ್ ಸೇರಿದಂತೆ 260 ಕಲಾವಿದರು 2.30 ತಾಸು 26 ಬಗೆಯ ಸಾಹಸ ಪ್ರದರ್ಶನದ ಮೂಲಕ ಎಲ್ಲರನ್ನು ರಂಜಿಸಲಿದ್ದಾರೆ. 1500 ಮಂದಿಗೆ ಆಸನ ವ್ಯವಸ್ಥೆ ಕಲ್ಪಿಸಿದ್ದು, ಮಳೆ, ಗಾಳಿ ಮತ್ತು ಬೆಂಕಿಯಿಂದಲೂ ಸುರಕ್ಷ ರೀತಿಯ ಪೆಂಡಾಲ್ ಬಳಸಲಾಗಿದೆ. ಪ್ರತಿದಿನ ಮಧ್ಯಾಹ್ನ 1ಕ್ಕೆ, ಸಂಜೆ 4ಕ್ಕೆ ಹಾಗೂ ರಾತ್ರಿ 7ಕ್ಕೆ 3 ಪ್ರದರ್ಶನಗಳಿರಲಿವೆ. ಎಂ.ವಿ.ಶಂಕರ್ ಅವರು ಸರ್ಕಸ್‌ನ ಮೂಲ ಸಂಸ್ಥಾಪಕರಾಗಿದ್ದು, ಸದ್ಯ ಅವರ ಮಕ್ಕಳಾದ ಅಜಯ ಶಂಕರ್, ಅಶೋಕ ಶಂಕರ್ ಮುನ್ನೆಡೆಸುತ್ತಾರೆ. ಪ್ರವೇಶ ಶುಲ್ಕ 100, 150, 200 ಹಾಗೂ 300 ರೂ.ಗಳನ್ನು ನಿಗದಿಪಡಿಸಲಾಗಿದೆ. bookmyseats.inನಲ್ಲೂ ಬುಕ್ಕಿಂಗ್‌ಗೆ ಅವಕಾಶವಿದ್ದು, ಹೆಚ್ಚಿನ ಮಾಹಿತಿಗೆ 7991172237/9796730 336 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಕಲಾವಿದ ಪ್ರೇಮ್ ನಾಥ್ ಉಪಸ್ಥಿತರಿದ್ದರು.

ಆನ್‌ಲೈನ್ ಮೂಲಕ ದಸರಾ ಚಲನ ಚಿತ್ರೋತ್ಸವ ಪಾಸ್ ಲಭ್ಯ



ಮೈಸೂರು, ಅ.12– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಚಲನಚಿತ್ರೋತ್ಸವ ಉಪಸಮಿತಿ ವತಿಯಿಂದ ಅ.16ರಿಂದ 22ರವರೆಗೆ ನಗರದ ಮಾಲ್ ಆಫ್ ಮೈಸೂರಿನ ಐನಾಕ್ಸ್ ಹಾಗೂ ಡಿಆರ್‌ಸಿ ಪರದೆಗಳಲ್ಲಿ ಹಮ್ಮಿಕೊಂಡಿರುವ ಚಲನಚಿತ್ರಗಳ ಪ್ರದರ್ಶನದ ವೀಕ್ಷಣೆಗಾಗಿ https://mysurudasarafilmfestival.in ಲಿಂಕ್ ಬಳಸಿ ಪಾಸ್ ಪಡೆಯಬಹುದಾಗಿದೆ. ಪಾಸ್‌ನ ಸಾಮಾನ್ಯ ದರ 500 ಹಾಗೂ ವಿದ್ಯಾರ್ಥಿಗಳ ಪಾಸ್ ದರ 300 ರೂ. ಆಗಿರುತ್ತದೆ.

ಅಂತರ ಕಾಲೇಜು ವಚನ ಗಾಯನ ಸ್ಪರ್ಧೆ

ಮೈಸೂರು, ಅ.12– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕದ ದತ್ತಿ ಕಾರ್ಯಕ್ರಮದ ಅಂಗವಾಗಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಸಹಯೋಗದಲ್ಲಿ ಅ.27ರ ಶುಕ್ರವಾರ ಬೆಳಗ್ಗೆ 10.30ಕ್ಕೆ ಕಾಲೇಜು ಸಭಾಂಗಣದಲ್ಲಿ ಅಂತರ ಕಾಲೇಜು ವಚನ ಗಾಯನ ಸ್ಪರ್ಧೆ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. 9242829947, 8861654566 ಸಂಪರ್ಕಿಸಬಹುದು.

ಜ್ಞಾನಕಾಶಿ ಇನ್ ತ್ರೀಡಿ ಛಾಯಾಚಿತ್ರ ಪ್ರದರ್ಶನ



ಮೈಸೂರು,ಅ.12(ಜಿಎ)–ಅ.14ರಿಂದ 25ರವರೆಗೆ ವಿಜಯನಗರ 2ನೇ ಹಂತದ ಅಂಬರೀಶ್ ರಸ್ತೆಯಲ್ಲಿರುವ ಕಾಫಿ ಸಿಟಿಯ ನೆರಳು ಬೆಳಕು ಗ್ಯಾಲರಿಯಲ್ಲಿ ಜ್ಞಾನಕಾಶಿ ಇನ್ ತ್ರೀಡಿ ಛಾಯಾಚಿತ್ರ ಪ್ರದರ್ಶನ ಆಯೋಜಿಸಲಾಗಿದ್ದು, ಅ.14ರ ಸಂಜೆ 4 ಗಂಟೆಗೆ ಉದ್ಘಾಟನೆಗೊಳ್ಳಲಿದೆ ಎಂದು ತ್ರೀಡಿ ಸ್ಟುಡಿಯೋಸ್‌ನ ಎ.ಎಸ್.ನಂದಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದವರಾಗಿದ್ದು, ಹಲವಾರು ವರ್ಷ ದಿನಪತ್ರಿಕೆಗಳಿಗೆ ಛಾಯಾಗ್ರಾಹಕರಾಗಿ ದುಡಿದ ಅನುಭವವಿದ್ದು, ಸ್ವಂತ ಪರಿಶ್ರಮದಿಂದ ತ್ರೀಡಿ ಛಾಯಾಗ್ರಹಣ ಕಲಿತಿದ್ದು, ಈ ರೀತಿ ಸೆರೆ ಹಿಡಿದ ತ್ರೀಡಿ ಛಾಯಾಚಿತ್ರಗಳನ್ನೊಳಗೊಂಡ ಪ್ರದರ್ಶನ ಇದಾಗಿದೆ ಎಂದರು. ಗೋಷ್ಠಿಯಲ್ಲಿ ವಿಶ್ವನಾಥ್, ಗೌರೀಶ್ ಕಪನಿ ಉಪಸ್ಥಿತರಿದ್ದರು.

ಮಹಿಷ ದಸರಾ ನಾಡಹಬ್ಬದ ಒಂದು ಭಾಗವೇ ಆಗಿದೆ

ಪರಂಪರೆ ರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಉಗ್ರನರಸಿಂಹೇಗೌಡ ಪ್ರತಿಪಾದನೆ

ಮೈಸೂರು, ಅ.12(ಜಿಎ)–ದಸರಾ ಒಂದು ನಾಡಹಬ್ಬವಾಗಿದ್ದು, ಹತ್ತು ಹಲವು ಭಿನ್ನ ಭಿನ್ನ ಸಾಂಸ್ಕೃತಿಕ ನಂಬಿಕೆ ಆಚರಣೆಯಾಗಿದೆ. ಈ ವೈವಿಧ್ಯತೆಯ ಭಾಗವೇ ಮಹಿಷ ದಸರಾ. ಹೀಗಿದ್ದರೂ ಸಂಸದ ಪ್ರತಾಪ್‌ಸಿಂಹ ಇದನ್ನು ವಿರೋಧಿಸುವುದು ಅಜ್ಞಾನ ಮತ್ತು ಬೇಜವಾಬ್ದಾರಿಯ ಪರಮಾವಧಿಯಾಗಿದೆ ಎಂದು ಮಂಟೆಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ ಪರಂಪರೆ ರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಉಗ್ರನರಸಿಂಹೇಗೌಡ ಟೀಕಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾವನ್ನು ವಿರೋಧಿಸಲೆಂದು ಮಹಿಷ ದಸರಾ ಆಚರಣೆ ಮಾಡುತ್ತಿಲ್ಲ. ಆದರೂ ಸಂಸದನಾಗಿ ತಮ್ಮ ಕ್ಷೇತ್ರದ ಜನರ ಕಷ್ಟ ಸುಖಗಳಿಗೆ ಸ್ಪಂದಿಸದೇ ಕೇವಲ ಹಣದ ವಹಿವಾಟಿನ ಕಾಮಗಾರಿಗಳಿಗೆ ಮಾತ್ರ ಗಮನ ನೀಡುತ್ತಿದ್ದಾರೆ. ಜೊತೆಗೆ, ಮುಂಬರುವ ಚುನಾವಣೆ ವೇಳೆ ಮತ ಗಳಿಸಲೆಂದು ಕೋಮು ಭಾವನೆ ಪ್ರಚೋದನೆಯಲ್ಲಿ ತೊಡಗಿದ್ದಾರೆಂದು ದೂರಿದರು.



ಮಹಿಷ ದಸರಾ ಆಚರಣೆ ಮಾಡಲು ಹೊರಟಿರುವವರನ್ನು ತುಳಿದು ಹಾಕುತ್ತೇವೆ. ದೆವ್ವಗಳು ಎಂಬ ರೀತಿಯ ಮಾತುಗಳಿಂದಾಗಿ ತಾವೇ ಆಯ್ಕೆ ಮಾಡಿ ಕಳುಹಿಸಿದ ಸಂಸದರೋ ಸರ್ವಾಧಿಕಾರಿಯೋ ಎಂಬ ಪ್ರಶ್ನೆ ಜನತೆಯಲ್ಲಿ ಮೂಡಿದೆ. ಇಂತಹವರಿಗೆ ರಾಜ್ಯದ ಮತದಾರರು ಪಾಠ ಕಲಿಸಿದ್ದಾರೆಂಬುದನ್ನು ಸಂಸದ ಮರೆಯಬಾರದು ಎಂದರು.


ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಾಗದಷ್ಟು ಕಡಿಮೆ ಪ್ರಮಾಣದಲ್ಲಿ ರಾಜ್ಯದ ಜಲಾಶಯಗಳಲ್ಲಿ ನೀರಿದೆ. ಹೀಗಿದ್ದರೂ ನೀರು ಹರಿಸಬೇಕೆಂಬ ಆದೇಶ ಅವೈಜ್ಞಾನಿಕವಾಗಿದೆ ಎಂಬುದನ್ನು ತಿಳಿಸಲು ಪಕ್ಷದ ಸಂಸದರ ನಿಯೋಗವನ್ನು ತಮ್ಮ ನೇತೃತ್ವದಲ್ಲಿ ದೆಹಲಿಗೆ ಇವರು ಕರೆದೊಯ್ಯಬಹುದಾಗಿತ್ತು. ಆದರೆ ಈ ರೀತಿ ಮಾಡಿಲ್ಲ. ಬದಲಾಗಿ ಜನರಲ್ಲಿ ದ್ವೇಷ ಬಿತ್ತುವ ಕೆಲಸ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಶಂಭುಲಿಂಗಸ್ವಾಮಿ ಉಪಸ್ಥಿತರಿದ್ದರು.

ಅಮೃತಾಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಂ.ಎಸ್.ಕೃಷ್ಣ ಅವರ ಮಾರ್ಗದರ್ಶನದಲ್ಲಿ ಎಂ.ಆರ್.ಅಮೃತಾ ಅವರು ಅನುವಂಶಿಕ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.10.2023 ಶುಕ್ರವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪೈಲ್ಸ್, ಮೂಲವ್ಯಾಧಿ, ಪಿಸ್ತುಲ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣಾ, ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಪ್ರತಿಭಾ ವೇದಿಕೆ ಉದ್ಘಾಟನೆ : ಹಿನ್ನೆಲೆ ಗಾಯಕ ನವೀನ್ ಸಜ್ಜು, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಉಪಸ್ಥಿತರು : ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ನಿರ್ದೇಶಕ ಡಾ. ಸಿ.ಕೆ. ರೇಣುಕಾರ್ಯ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು –ಬಾನುಲಿ ಸರಣಿ, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ–ಡಾ. ಕೆ.ಎಲ್. ಪದ್ಮಿನಿ ಹೆಗಡೆ, 7.15 ಭಾವಗೀತೆಗಳು –ಶಂಕರ್ ಶ್ಯಾನ್‌ಭೋಗ್, ಎಂ.ಡಿ. ಪಲ್ಲವಿ, ಜೆ. ಮೋಹನ, 9.05 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಓಲೇಟಿ ವೆಂಕಟೇಶ್ವರುಲು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ;** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಎಸ್. ಮಂಜುಳಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಚಾರುಮತಿ ರಾಮಚಂದ್ರನ್–ಹಾಡುಗಾರಿಕೆ, 4.00 ಮಹಿಳಾರಂಗ–ಸಂಖೀ ಸಂವಾದ. ವಿಷಯ– ದಸರಾ ಆಚರಣೆ, ಪ್ರಸ್ತುತಿ–ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾ ಲಯದಲ್ಲಿ ಲಭ್ಯವಿರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ರಾಧಾ ಎಸ್. ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ರೇಷ್ಮೆ ಆಧಾರಿತ ಸಮಗ್ರ ಕೃಷಿ ಕುರಿತು ಸಂವಾದ ಭಾಗವಹಿಸುವವರು ರಾಮು ಹಾಗೂ ಆರ್. ವಸಂತ್‌ಕುಮಾರ್, 9.30 ಜಯಂತಿ ಮೋಹನ್ – ಹಾಡುಗಾರಿಕೆ, 10.00 ತತ್ತ್ವ ಸಂಚಾರ – ಭಾಗವಹಿಸುವ ವರು ಚಾಮನಗಳ್ಳಿಯ ಮಲ್ಲಮ್ಮ ಮತ್ತು ಸಂಗಡಿಗರು, ಪ್ರಸ್ತುತಿ–ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ ಶುಕ್ರವಾರ 13 ಅಕ್ಟೋಬರ್ 2023

ಎಸ್‌ಎಸ್‌ಎಲ್‌ಸಿ ವರೆಗೆ ಉಚಿತ 'ಶಿಕ್ಷಣ ಭಾಗ್ಯ' ಕಲ್ಪಿಸಿ

ಸಿಎಂ ಸಿದ್ದರಾಮಯ್ಯಗೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮನವಿ



ಮೈಸೂರು,ಅ.12(ಪಿಎಂ)-ಯಾವುದೇ ಶಾಲೆಯಾದರೂ ಪ್ರತಿ ಮಗುವಿಗೂ ಎಸ್‌ಎಸ್‌ಎಲ್‌ಸಿ ವರೆಗೆ ಉಚಿತ ಶಿಕ್ಷಣ ದೊರಕುವಂತಹ 'ಶಿಕ್ಷಣ ಭಾಗ್ಯ' ಯೋಜನೆ ಜಾರಿಗೊಳಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಶಾಲೆಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ನೀಡುತ್ತಿವೆ. ಈ ಪೈಕಿ ಸರ್ಕಾರಿ ಶಾಲೆಗಳ ಸ್ಥಿತಿಗತಿ ಹೇಗಿದೆ ಎಂಬುದು ತಿಳಿದ ಸಂಗತಿ. ಹೀಗಾಗಿ ಶ್ರೀಮಂತರು ಮಾತ್ರವಲ್ಲದೆ ಬಡವರು, ಮಧ್ಯಮ ವರ್ಗದವರೂ ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕೆಂಬ ಖಾಸಗಿ ಶಾಲೆಗಳತ್ತ ಮುಖ ಮಾಡಿದ್ದಾರೆ. ಆದರೆ ಖಾಸಗಿ ಶಾಲೆಗಳು ಪೋಷಕರ ಸುಲಿಗೆ ಮಾಡುವಲ್ಲಿ ನಿರತವಾಗಿರುವುದು ಆತಂಕದ ಸಂಗತಿ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧುಬಂಗಾರಪ್ಪ ಅವರು ಶಾಲಾ ಸಮಯ ಬದಲಾಯಿಸುವ ಜೊತೆಗೆ 10, 11ನೇ ತರಗತಿಗೆ ಪಬ್ಲಿಕ್ ಪರೀಕ್ಷೆ ಮಾಡುವುದಾಗಿ ಹೇಳಿದ್ದಾರೆ. ಈಗಾಗಲೇ ಪರೀಕ್ಷೆ ಭಯದಿಂದ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವುದೂ ಆಗುತ್ತಿದೆ. ಉದ್ದೇಶಿತ ಪಬ್ಲಿಕ್ ಪರೀಕ್ಷೆಯಿಂದ ವಿದ್ಯಾರ್ಥಿಗಳಲ್ಲಿ ಒತ್ತಡ ಹೆಚ್ಚಾಗಲಿದೆ. ಇದರಿಂದ ಆತ್ಮಹತ್ಯೆ ಪ್ರಮಾಣ ಹೆಚ್ಚಾದರೆ ಹೊಣೆ ಯಾರು? ಎಂದು ಪ್ರಶ್ನಿಸಿದ್ದಾರೆ.

ಜೊತೆಗೆ ಶಾಲಾ ಸಮಯ ಬದಲಾದರೆ, ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ. ಕೇವಲ ಪ್ರಚಾರ ಅಥವಾ ತಮ್ಮ ಅವಧಿಯ ಬದಲಾವಣೆ ಎಂದು ಹೇಳಿಕೊಳ್ಳಲು ಇಂತಹ ಅವೈಜ್ಞಾನಿಕ ಯೋಜನೆಗಳ ಬಗ್ಗೆ ಚಿಂತಿಸದೇ ಇದ್ದರೆ, ಪೋಷಕರಿಗೆ ಮತ್ತು ಮಕ್ಕಳಿಗೆ ಎಷ್ಟೋ ಉಪಕಾರವಾಗಲಿದೆ ಎಂದು ವ್ಯಂಗ್ಯವಾಡಿದ್ದಾರೆ.

ನೂತನ ಏಕರೂಪ ಶಿಕ್ಷಣ ಜಾರಿಗೆ ಆಸಕ್ತಿ ವಹಿಸಿರುವ ಸರ್ಕಾರ, ಹಾಗೆಯೇ ಏಕರೂಪ ಶುಲ್ಕ ಪದ್ಧತಿ ಜಾರಿಗೂ ಆಸಕ್ತಿ ವಹಿಸಬೇಕು. ಇನ್ನೂ ಅನುದಾನರಹಿತ ಖಾಸಗಿ ಶಾಲೆಗಳ ಅಧಿಕ ಶುಲ್ಕ ವಸೂಲಿ ಬಗ್ಗೆ ಪೋಷಕರಿಂದ ಸಾಕಷ್ಟು ದೂರುಗಳಿದ್ದರೂ ಸರ್ಕಾರ ಇದನ್ನು ನಿಯಂತ್ರಿಸದೇ ಅಸಹಾಯಕತೆ ತೋರುತ್ತಿದೆ. ಅನುದಾನ ರಹಿತ ಖಾಸಗಿ ಶಾಲೆಗಳನ್ನು ನಿಯಂತ್ರಿಸಬೇಕಾದರೆ ಸರ್ಕಾರವು ಈ ಶಾಲೆಗಳ ಆರಂಭಕ್ಕೆ ಅನುಮತಿ ನೀಡುವ ಮುನ್ನವೇ ಷರತ್ತುಗಳನ್ನು ವಿಧಿಸಬಹುದು. ಹೀಗೆ ನಿಯಂತ್ರಿಸಲು ಸಾಧ್ಯವಿಲ್ಲವೆಂದರೆ 10ನೇ ತರಗತಿವರೆಗೆ ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಸಂದೇಶ್‌ಸ್ವಾಮಿ ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರ ನೀಡಿರುವ ಉಚಿತ ಭಾಗ್ಯಗಳಿಂದ ಕುಟುಂಬದ ಸದೃಢ ಸಂಬಂಧಗಳಿಗಾಗಲಿ, ಸಮಾಜದ ಸಮಾನತೆಯ ನಿರ್ಮಾಣಕ್ಕಾಗಲೀ ಅಥವಾ ರಾಜ್ಯದ ಬೊಕ್ಕಸಕ್ಕಾಗಲೀ ಆಪತ್ತುಗಳೇ ಹೆಚ್ಚು. ಹಾಗಾಗಿ ಉಚಿತ ಶಿಕ್ಷಣಭಾಗ್ಯ ಕಲ್ಪಿಸಿದರೆ ತಾವು ಜನ ಮಾನಸದಲ್ಲಿ ಶಾಶ್ವತವಾಗಿ ಉಳಿಯುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಅವರು ಮುಖ್ಯಮಂತ್ರಿಗಳನ್ನು ಕೋರಿದ್ದಾರೆ.

ಖದೀಮನ ಸೆರೆ: 1.5 ಲಕ್ಷ ಮೌಲ್ಯದ ಆಭರಣ ವಶ



ಮೈಸೂರು, ಅ.12(ಆರ್‌ಕೆ)-ಮೈಸೂರು ಕುವೆಂಪುನಗರ ಠಾಣೆ ಪೊಲೀಸರು, ಖದೀಮನ ಬಂಧಿಸಿ 1.5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಮತ್ತು ಬೆಳ್ಳಿ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಯರಗನಹಳ್ಳಿ ನಿವಾಸಿ ಕೃಷ್ಣಮೂರ್ತಿ(35) ಬಂಧಿತ ಆರೋಪಿ. ಶ್ರೀರಾಂಪುರದ ಎಸ್‌ಬಿಎಂ ಕಾಲೋನಿಯ ನಂಜುಂಡಸ್ವಾಮಿ ಎಂಬುವರ ಮನೆ ಬಾಗಿಲು ಮೀಟಿ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿದ್ದ ಆತ, ಅದನ್ನು ಮಾರಿ ಬಂದ ಹಣದಿಂದ ಸರಕು ಸಾಗಣೆ ವಾಹನವನ್ನು ಖರೀದಿಸಿದ್ದ.

ಪ್ರಕರಣ ದಾಖಲಿಸಿಕೊಂಡಿದ್ದ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಅರುಣ್ ತನಿಖೆ ಕೈಗೊಂಡು ಮನೆ ಕಳ್ಳನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಡಿಸಿಪಿ ಎಸ್. ಜಾಹ್ನವಿ ಅವರ ಮಾರ್ಗದರ್ಶನದಂತೆ ಕೆ.ಆರ್.ಉಪವಿಭಾಗದ ಎಸಿಪಿ ಎಸ್.ಇ. ಗಂಗಾಧರಸ್ವಾಮಿ ಮೇಲ್ವಿಚಾರಣೆಯಲ್ಲಿ ಕುವೆಂಪುನಗರ ಠಾಣೆ ಸಬ್ ಇನ್ಸ್‌ಪೆಕ್ಟರ್‌ಗಳಾದ ಗೋಪಾಲ್, ರಾಧಾ, ಸಿಬ್ಬಂದಿಗಳಾದ ಆನಂದ್, ಮಂಜುನಾಥ, ಹಜರತ್ ಅಲಿ, ಪುಟ್ಟಪ್ಪ, ಸುರೇಶ್ ಹಾಗೂ ನಾಗೇಶ್ ಅವರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಪತ್ತೆ ಮಾಡಿದ್ದಾರೆ.



ಗೃಹ ರಕ್ಷಕ ದಳದ ಕಮಾಂಡೆಂಟ್ ಆಗಿ ಡಾ.ಎಂ. ಕಾಂತರಾಜು ಅವರು ಗುರುವಾರ ಮೈಸೂರಿನ ಸರಸ್ವತಿಪುರಂನಲ್ಲಿರುವ ಕಚೇರಿಯಲ್ಲಿ ನಿರ್ಗಮಿತ ಕಮಾಂಡೆಂಟ್ ಡಾ. ಬಿ.ಎಸ್.ನಂದಿನಿ ಅವರಿಂದ ಅಧಿಕಾರ ವಹಿಸಿಕೊಂಡರು.

ನಾರಿ ಮಹಾಶಕ್ತಿ ಅನಾವರಣದೊಂದಿಗೆ ಯುವ ಸಂಭ್ರಮಕ್ಕೆ ಭಾವೈಕ್ಯತೆ ನೃತ್ಯ ವೈಭವದ ಮೆರಗು

● ಕಾಲೇಜು ವಿದ್ಯಾರ್ಥಿಗಳ ಕಲಾ ಪ್ರೌಢಿಮೆಗೆ ಸಾಕ್ಷಿಯಾದ ಯುವ ಸಂಗೀತ ವೇದಿಕೆ ● ನಾಡು-ನುಡಿ ಕಣ್ಣು ಮೆರೆಸಿದ ಯುವಚೇತನರು



ಮೈಸೂರು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ವಿದ್ಯಾರ್ಥಿಗಳಿಂದ ದೇಶಿ ಸಂಸ್ಕೃತಿ ನೃತ್ಯ ಪ್ರದರ್ಶನ.



ಎಂಎಂಕೆ ಇಂಡಿಪೆಂಡೆಂಟ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಮಹಿಳಾ ಸಬಲೀಕರಣ ನೃತ್ಯ ಪ್ರದರ್ಶನ.



ಹೆಗ್ಗಡದೇವನಕೋಟೆ ಶ್ರೀ ಆದಿಚುಂಚನಗಿರಿ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಭಾರತೀಯ ನೃತ್ಯ ಕಲೆಗಳ ಅನಾವರಣ.



ಬಳ್ಳಾರಿಯ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ವಿದ್ಯಾರ್ಥಿಗಳಿಂದ ಉಗ್ರನರಸಿಂಹ ದರ್ಶನ.

ಮೈಸೂರು, ಅ.12(ಎಂಕೆ)-'ಹೇ ನಾರಿ ನಿನಗ್ಯಾರೆ ಸಾಟಿ ಜಗದಲ್ಲಿ, ಅಪಾರ ಶಕ್ತಿಯು ನಿನದು ದೇವತೆಯೂ ನೀನು'... 'ತಾಯಾಗಿ, ಸತಿಯಾಗಿ, ಜಗಕೆ ಬೆಳಕಾಗಿರುವ ಶಕ್ತಿ ಸ್ವರೂಪಿಣಿ ನೀನು' ಎನ್ನುವ ಸ್ಫೂರ್ತಿ ಸಂದೇಶದ ಮೂಲಕ ನಾರಿ ಶಕ್ತಿಯ ಅನಾವರಣದೊಂದಿಗೆ ರಾಷ್ಟ್ರೀಯ ಭಾವೈಕ್ಯತೆಯ ನೃತ್ಯ ವೈಭವ ಯುವ ಸಂಭ್ರಮಕ್ಕೆ ಹೊಸ ಮೆರಗು ತಂದಿತು...!

ಮಾನಸಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ನಡೆಯುತ್ತಿರುವ ದಸರಾ ಯುವ ಸಂಭ್ರಮ ಸಾಂಸ್ಕೃತಿಕ ವೇದಿಕೆಯಲ್ಲಿ ಹೆಣ್ಣೆಂದರೆ ನಂಬಿಕೆ, ಹೆಣ್ಣೆಂದರೆ ಅಂಬಿಕೆ, ಅವಳು ಗಟ್ಟಿಗಿತ್ತಿ, ಸಾಧಕಿ ಎಂಬ ಪ್ರೇರಣಾತ್ಮಕ ನೃತ್ಯ ಸಂಯೋಜಿಸಿ ಮಹಿಳೆ ಅಬಲೆಯಲ್ಲ ಸಬಲೆ ಎಂಬುದನ್ನು ದೃಢೀಕರಿಸಲಾಯಿತು.

ಮಹಿಳಾ ಸಬಲೀಕರಣ ನೃತ್ಯ ಪರಿಕಲ್ಪನೆಯೊಂದಿಗೆ ಹೆಜ್ಜೆ ಹಾಕಿದ ಬನ್ನೂರಿನ ಬಾಲಕಿಯರ ಸಕಾರಿ ಪದವಿ ಪೂರ್ವ ಕಾಲೇಜು, ಹೆಚ್.ಡಿ.ಕೋಟೆಯ ಎಂಎಂಕೆ ಇಂಡಿಪೆಂಡೆಂಟ್ ಪದವಿ ಪೂರ್ವ ಕಾಲೇಜು ಹಾಗೂ ಹುಣಸೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಭಾರತೀಯ ಸೇನೆ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿಯೂ ಮಹಿಳೆ ಸಾಧಕಿಯಾಗಿ ಹೊರ ಹೊಮ್ಮಿದ್ದು, ಹೆಣ್ಣು ಕೀಳಲ್ಲಾ ಅವಳು ಹಿರಿಮೆ, ಅವಕಾಶ ಮತ್ತು ಪ್ರೋತ್ಸಾಹ ಬೇಕಾಗಿದೆ ಎಂಬುದನ್ನು ಭಾವನಾತ್ಮಕ ನೃತ್ಯ ರೂಪಕಗಳ ಮೂಲಕ ಎಲ್ಲರ ಮನಸ್ಸಿನಲ್ಲಿ ನಾಟುವಂತೆ ಮಾಡಿದರು.

ರಾಷ್ಟ್ರೀಯ ಭಾವೈಕ್ಯತೆ: ವಿವಿಧತೆಯಲ್ಲಿ ಏಕತೆ ಸಾರುವ ಭಾರತೀಯ ಸಾಂಸ್ಕೃತಿಕ ನೃತ್ಯ ಪ್ರಕಾರಗಳಾದ ಭರತನಾಟ್ಯ, ಕಥಕ್ಕಳಿ, ಕೂಚಿಪೂಡಿ, ಒಡಿಸ್ಸಿ, ಮೋಹಿನಿಯಾಟ್ಟಂ, ಕಥಕ್, ಮಣಿಪುರಿ, ಪಂಜಾಬಿ ಸೇರಿದಂತೆ ಕರಾವಳಿ ಹಾಗೂ ಜಾನಪದ ನೃತ್ಯ ಪ್ರಕಾರಗಳನ್ನು ಪ್ರಸ್ತುಪಡಿಸಿದ ಮೈಸೂರು ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಹೆಗ್ಗಡದೇವನ ಕೋಟೆ ಶ್ರೀ ಆದಿಚುಂಚನಗಿರಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ವಿಜಯನಗರದಲ್ಲಿನ ಡಿಎಂ ಟ್ರಿನಿಟಿ ಪಿಯು ಕಾಲೇಜು, ಚಾಮರಾಜ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಹಾಗೂ ಕೃಷ್ಣರಾಜಪೇಟೆಯ ಮಹಿಳಾ ಸರ್ಕಾರಿ ಕಾಲೇಜು ವಿದ್ಯಾರ್ಥಿನಿಯರು ಕಲಾ ವೈಭವ ಸೃಷ್ಟಿಸಿದರು.



ಟೆರಿಷಿಯನ್ ಕಾಲೇಜು ವಿದ್ಯಾರ್ಥಿಗಳಿಂದ ಕನ್ನಡ ಸಂಸ್ಕೃತಿ ನೃತ್ಯ

ಕನ್ನಡ ಝೇಂಕಾರ: 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು', 'ಕರುನಾಡೆ ಕೈ ಚಾಚಿದೆ ನೋಡಿ', 'ಕನ್ನಡವೇ ನಮ್ಮಮ್ಮ' ಎಂಬಿತ್ಯಾದಿ ಕನ್ನಡ ನಾಡು-ನುಡಿ ಕುರಿತು ಭರ್ಜರಿ ಸ್ಟೆಪ್ ಹಾಕಿದ ಯರಗನಹಳ್ಳಿಯಲ್ಲಿರುವ ಟೆರಿಷಿಯನ್ ಪದವಿ ಪೂರ್ವ ಕಾಲೇಜು ಹಾಗೂ ಬೆಟ್ಟದ ಪುರದ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ತುಂಬಿ ತುಳುಕುತ್ತಿದ್ದ ಬಯಲು ರಂಗಮಂದಿರವನ್ನು ಕನ್ನಡ ಝೇಂಕಾರ ಮೊಳಗಿಸಿದರು. ಹಾಗೆಯೇ ಪಿರಿಯಾಪಟ್ಟಣದ ಬಿಜಿಎಸ್ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಪರಿಸರ ಜಾಗೃತಿ ಮೂಡಿಸಿದರು.

ಜೈ ಭಜರಂಗಿ: ಗದೆ ಹಿಡಿದು ಘರ್ಜಿಸಿದ ಬೆಳವಾಡಿಯ ಎಸ್‌ವಿಇಐ ಕಾಲೇಜು ಹಾಗೂ ಬಳ್ಳಾರಿಯ ಶ್ರೀ ಮೇದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಭಜರಂಗಿ ಚಿತ್ರದ 'ಜೈ ಭಜರಂಗಿ' ಹಾಡಿಗೆ ಅಮೋಘ ನೃತ್ಯ ಪ್ರದರ್ಶನ ನೀಡಿದರಲ್ಲದೆ ಜೈ ಶ್ರೀರಾಮ್ ಘೋಷಣೆ ಮೊಳಗಿಸಿದರು. ಬಳಿಕ ಉಗ್ರನರಸಿಂಹನ ಅವತಾರ ದರ್ಶನ ಮಾಡಿಸಿದ ಬಳ್ಳಾರಿಯ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ವಿದ್ಯಾರ್ಥಿಗಳು ಯುವ ಮನಸ್ಸುಗಳಲ್ಲಿ ಭಕ್ತಿಯ ಸುಧೆ ಹರಿಸಿದರು.

ಇಂದು ತೆರೆ...

ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಮೊದಲ ಸಾಂಸ್ಕೃತಿಕ ಕಾರ್ಯಕ್ರಮವಾದ ಯುವ ಸಂಭ್ರಮಕ್ಕೆ ನಾಳೆ(ಅ.13) ತೆರೆಬೀಳಲಿದೆ. ಅ.6ರಿಂದ ಆರಂಭವಾದ ಸಂಭ್ರಮ ಯಶಸ್ವಿಯಾಗಿ ಮುನ್ನಡೆದಿದ್ದು, ರಾಜ್ಯದ ವಿವಿಧೆಡೆಯಿಂದ ಬಂದಿರುವ ನೂರಾರು ಕಾಲೇಜು ವಿದ್ಯಾರ್ಥಿಗಳು ಅಮೋಘ ನೃತ್ಯ ಪ್ರದರ್ಶನ ನೀಡಿದ್ದಾರೆ. ಕಡೆಯ ದಿನವೂ 55 ಕಾಲೇಜು ತಂಡಗಳ ನೃತ್ಯ ಪ್ರದರ್ಶನ ನೀಡಲಿವೆ.



ಹೊಯ್ಸಳ ಸಾಮ್ರಾಜ್ಯ ಪರಿಚಯ...

'ಶರವೇಗದ ಸರದಾರ' ಚಿತ್ರದ 'ಕನ್ನಡ ನಾಡಿನ ರನ್ನದ ರತುನ ಕೇಳೋ ಕತೆಯನ್ನ' ಹಾಡಿನೊಂದಿಗೆ ಹೊಯ್ಸಳ ಸಾಮ್ರಾಜ್ಯ ಸ್ಥಾಪನೆ ಕುರಿತು ಆಕರ್ಷಕ ನೃತ್ಯ ಸಂಯೋಜನೆ ಮೂಲಕ ಪರಿಚಯಿಸಿದ ಮದ್ದೂರಿನ ಮಹಿಳಾ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳು ಅಪಾರ ಮೆಚ್ಚುಗೆ ಪಡೆದರು.



ಬೆಳವಾಡಿ ಎಸ್‌ವಿಇಐ ಕಾಲೇಜು ವಿದ್ಯಾರ್ಥಿಗಳಿಂದ ಭಜರಂಗಿ ನೃತ್ಯ.




ಡಿಎಂ ಟ್ರಿನಿಟಿ ಪಿಯು ಕಾಲೇಜು ವಿದ್ಯಾರ್ಥಿಗಳಿಂದ ರಾಷ್ಟ್ರೀಯ ಭಾವೈಕ್ಯತೆ ನೃತ್ಯ.




ಯುವ ಸಂಭ್ರಮದಲ್ಲಿ ನೃತ್ಯ-ಸಂಗೀತದಲ್ಲಿ ಮಿಂದೇಳುತ್ತಿರುವ ಯುವ ಸಮೂಹ.

ಮೈಸೂರು ಅಭಿವೃದ್ಧಿಗೆ ಪಾಲಿಕೆಯೊಂದಿಗೆ ಉದ್ಯಮಿಗಳು ಕೈಜೋಡಿಸಿ

● ಶಾಸಕ ತನ್ವೀರ್‌ಸೇಠ್ ಮನವಿ ● ನವೀಕೃತ ಎಲ್ಜಿನ್ ಫೌಂಟೇನ್ ಸರ್ಕಲ್ ಉದ್ಘಾಟನೆ



ಮೈಸೂರಿನ ಬೆಂಗಳೂರು ರಸ್ತೆಯಲ್ಲಿರುವ ನವೀಕೃತ 'ಎಲ್ಜಿನ್ ಫೌಂಟೇನ್ ಸರ್ಕಲ್' ಅನ್ನು ಗುರುವಾರ ಉದ್ಘಾಟಿಸಲಾಯಿತು.



ಫೌಂಟೇನ್ ಸರ್ಕಲ್‌ನಲ್ಲಿ ಕಾರಂಜಿ ಚಿಮ್ಮುತ್ತಿರುವುದನ್ನು ಕಾಣಬಹುದು.

ಮೈಸೂರು,ಅ.12(ಪಿಎಂ)- ಮೈಸೂರು ನಗರದ ಸೌಂದರ್ಯ ಕಾಪಾಡುವ ನಿಟ್ಟಿನಲ್ಲಿ ಉದ್ಯಾನವನ ಮತ್ತು ವೃತ್ತಗಳನ್ನು ಅಭಿವೃದ್ಧಿಪಡಿಸಲು ಇಲ್ಲಿನ ಉದ್ಯಮಿಗಳು ಮೈಸೂರು ಮಹಾನಗರ ಪಾಲಿಕೆಯೊಂದಿಗೆ ಕೈಜೋಡಿಸಬೇಕೆಂದು ಶಾಸಕ ತನ್ವೀರ್ ಸೇಠ್ ಮನವಿ ಮಾಡಿದರು.

ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿ (ಪಿಪಿಪಿ) ಝುಡ್ ಮಾರ್ಕ್ ಕಂಪನಿ ವತಿಯಿಂದ ನವೀಕರಣಗೊಳಿಸಿರುವ ಮೈಸೂರಿನ ಬೆಂಗಳೂರು ರಸ್ತೆಯಲ್ಲಿರುವ 'ಎಲ್ಜಿನ್ ಫೌಂಟೇನ್ ಸರ್ಕಲ್' ಉದ್ಘಾಟಿಸಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಗರದ ಯಾವುದೇ ಭಾಗದಲ್ಲಿಯಾದರೂ ಉದ್ಯಮಿಗಳು ಪಿಪಿಪಿ ಮಾದರಿಯಲ್ಲಿ ನಗರದ ಅಭಿವೃದ್ಧಿಗಾಗಿ ನಗರಪಾಲಿಕೆಯೊಂದಿಗೆ ಕೈಜೋಡಿಸಬೇಕು ಎಂದು ಕೋರಿದರು.

ನನ್ನ ಕ್ಷೇತ್ರದಲ್ಲಿ ಮೊಟ್ಟ ಮೊದಲಿಗೆ ಪಿಪಿಪಿ ಅಡಿಯಲ್ಲಿ ಈ ವೃತ್ತ ನವೀಕರಣಗೊಂಡಿದ್ದು, ಇದು ಸಂತಸ ತಂದಿದೆ. ಇದನ್ನು 3 ವರ್ಷಗಳ ಕಾಲ ಝುಡ್ ಮಾರ್ಕ್ ಕಂಪನಿ ವತಿಯಿಂದಲೇ ನಿರ್ವಹಣೆ ಮಾಡಲಾಗುತ್ತದೆ. ಇದರಿಂದ ಪಾಲಿಕೆ ವೆಚ್ಚಗಳು ಉಳಿತಾಯವಾಗಲಿದೆ ಎಂದರು.

ಇದು ನಗರದ ಐತಿಹಾಸಿಕ ಸರ್ಕಲ್. ಈ ಹಿಂದೆ ಕೆಆರ್ ಸರ್ಕಲ್‌ನಲ್ಲಿ ಎಲ್ಜಿನ್ ಫೌಂಟೇನ್ ಸರ್ಕಲ್ ಇದ್ದಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪನೆಗಾಗಿ 1956ರಲ್ಲಿ ಇಲ್ಲಿಗೆ ಸ್ಥಳಾಂತರ ಮಾಡಲಾಯಿತು. ಮೈಸೂರು ನಗರದ ಪ್ರವೇಶ ದ್ವಾರದಲ್ಲಿರುವ ಈ ವೃತ್ತವು ಕಳೆದ ಹಲವು ವರ್ಷಗಳಿಂದ ಕತ್ತಲೆಯಲ್ಲಿತ್ತು. ಫೌಂಟೇನ್ ಕೆಲಸ ಮಾಡುತ್ತಿರಲಿಲ್ಲ. ವಿದ್ಯುತ್ ದೀಪಾಲಂಕಾರವೂ ಇರಲಿಲ್ಲ. ಇದೀಗ ಇದನ್ನು 18ರಿಂದ 20 ಲಕ್ಷ ರೂ. ವೆಚ್ಚದಲ್ಲಿ ನವೀಕರಣ ಮಾಡಲಾಗಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಟಿ.ಎನ್.ನರಸಿಂಹಮೂರ್ತಿ ವೃತ್ತ, ಟಿಪ್ಪು ವೃತ್ತ, ಎಫ್‌ಟಿಎಸ್ ವೃತ್ತ ಸೇರಿದಂತೆ ವಿವಿಧೆಡೆಗಳಲ್ಲಿ ಯಾವ ರೀತಿಯಲ್ಲಿ ಪಿಪಿಪಿಯಡಿ ಅಭಿವೃದ್ಧಿ ಮಾಡಬಹುದೆಂದು ಅವಲೋಕಿಸಲಾಗುವುದು. ಇಲ್ಲಿ ಅಪಘಾತಗಳು ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್ ಹಾಕಬೇಕೆಂಬುದು ನನ್ನ ಬಹು ದಿನಗಳ ಬೇಡಿಕೆಯಾಗಿದೆ. ಇದರಿಂದ ಅಪಘಾತ ತಡೆಗಟ್ಟಲು ಸಾಧ್ಯವಾಗಲಿದೆ ಎಂದರು.

ಮೈಸೂರಿನ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಇದರಿಂದ ಉದ್ಯೋಗ ಸೃಷ್ಟಿಯಾಗಲಿದೆ. ಸರ್ಕಾರಿ ಶಾಲೆಗಳ ಶೌಚಾಲಯ ನಿರ್ಮಾಣ ಮತ್ತು ನಿರ್ವಹಣೆಯನ್ನು ಪಾಲಿಕೆ ಅಥವಾ ಖಾಸಗಿಯವರ ಸಹಭಾಗಿತ್ವದಲ್ಲಿ ಕೈಗೊಳ್ಳಲು ಸರ್ಕಾರ ಕ್ರಮ ವಹಿಸಬೇಕು. ಅಲ್ಲದೆ, ಸುಲಭ ಶೌಚಾಲಯಗಳನ್ನು ನಗರದಲ್ಲಿ ಜನರಿಗೆ ಅಗತ್ಯವಿರುವೆಡೆ ನಿರ್ಮಿಸಲು ಆದ್ಯತೆ ನೀಡಬೇಕು. ಜೊತೆಗೆ ಮೂತ್ರ ವಿಸರ್ಜನೆಗೆ ಶುಲ್ಕ ಕೈಬಿಟ್ಟು ಉಚಿತ ಮಾಡಬೇಕು ಎಂದರು.

ಮಹಿಷ ದಸರಾ ಸಂಬಂಧ ಪ್ರತಿಕ್ರಿಯಿಸಿ, ನಾನು ಈ ಪೈಪೋಟಿಯಲ್ಲಿ ಬರುವವನಲ್ಲ. ಯಾರು ಏನೇ ಹೇಳಿದರೂ ಇತಿಹಾಸ ಇತಿಹಾಸವೇ ಆಗಿರುತ್ತದೆ. ಯಾರಿಗೂ ಅಪಮಾನ ಮಾಡಲು ಮತ್ತು ಪ್ರಚೋದಿಸಲು ನಾನು ಬಯಸುವುದಿಲ್ಲ. ಜೊತೆಗೆ ನನ್ನ ಕ್ಷೇತ್ರ ವ್ಯಾಪ್ತಿಯ ಹೊರಗಿನ ವಿಚಾರ ಇದು. ಅಲ್ಲದೆ, ನನಗೆ ಈವರೆಗೆ ಈ ಸಂಬಂಧ ಯಾವುದೇ ಮನವಿ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ಈ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ ಎಂದು ತಿಳಿಸಿದರು. ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಝುಡ್ ಮಾರ್ಕ್ ಕಂಪನಿಯ ಸಿಇಓ ಮೊಹಮ್ಮದ್ ಜುಬೇರ್ ಮತ್ತಿತರರು ಹಾಜರಿದ್ದರು.

ಮೈಸೂರನ್ನು ಫ್ಲೆಕ್ಸ್-ಬ್ಯಾನರ್ ಮುಕ್ತ ನಗರವಾಗಿಸಲು ಕ್ರಮ

ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್

ಮೈಸೂರು,ಅ.12(ಪಿಎಂ)- ಮುಂದಿನ ದಿನಗಳಲ್ಲಿ ಮೈಸೂರನ್ನು ಫ್ಲೆಕ್ಸ್ ಮತ್ತು ಬ್ಯಾನರ್ ಮುಕ್ತ ನಗರವನ್ನಾಗಿಸಲು ಉದ್ದೇಶಿಸಿದ್ದು, ಈ ಸಂಬಂಧ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ವಹಿಸಲಾಗುವುದು ಎಂದು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪಿಪಿಪಿ ಅಡಿ (ಖಾಸಗಿ ಸಹಭಾಗಿತ್ವ) ಝುಡ್ ಮಾರ್ಕ್ ಸಂಸ್ಥೆಯಿಂದ ಫೌಂಟೇನ್ ವೃತ್ತ ಮತ್ತು ಪೈವ್ ಲೈಟ್ ವೃತ್ತ ಎರಡನ್ನು ಅಭಿವೃದ್ಧಿಪಡಿಸಲಾಗಿದೆ. ಹೀಗೆ ಪಾಲಿಕೆಯೊಂದಿಗೆ ಕೈಜೊಡಿಸುವುದರಿಂದ ಪಾಲಿಕೆಗೆ ಹೊರೆ ತಗ್ಗಲಿದೆ. ಇದೇ ರೀತಿ ಬೇರೆ ವಾರ್ಡ್‌ಗಳಲ್ಲೂ ಅಭಿವೃದ್ಧಿಯಲ್ಲಿ ಸಹಕರಿಸಲು ಖಾಸಗಿ ಕಂಪನಿಗಳು ಮುಂದೆ ಬರುತ್ತಿವೆ. ಹೀಗೆ ಅಭಿವೃದ್ಧಿಪಡಿಸಿದ ಸ್ಥಳಗಳಲ್ಲಿ ಕೆಲ ಷರತ್ತುಗಳ ಪಾಲನೆಯೊಂದಿಗೆ ತಮ್ಮ ಜಾಹೀರಾತು ಪ್ರಕಟಿಸಲು ಅವಕಾಶವಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಕ್ಕರೆ ಅದೇ ಸ್ವರ್ಗ

ಆತ : (ಮನೆಯಲ್ಲಿ ನೆಮ್ಮದಿ ಸಿಗದೆ ದೇವಾಲಯಕ್ಕೆ ಬಂದು) "ಅರ್ಚನೆ ಮಾಡಿ ಸ್ವಾಮಿ"

ಅರ್ಚಕ : "ನಿಮ್ಮ ಹೆಸರಲ್ಲಿ ಅರ್ಚನೆ ಮಾಡ್ಲಾ?"

ಆತ : "ಬೇಡ ಸ್ವಾಮಿ. ಮನೇಲಿ ಅದು ಈಗಾಗಲೇ ಆಗಿದೆ. ದೇವರ ಹೆಸರಲ್ಲಿ ಅರ್ಚನೆ ಮಾಡಿ"

ಮೈಸೂರು ಮಿತ್ರ
ಶುಕ್ರವಾರ, 13 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ವಸ್ತ್ರ, ಒಡವೆಗಳಿಂದ ಅಲಂಕರಿಸಿಕೊಂಡದ್ದು ಮನುಷ್ಯನನ್ನು ಅಲಂಕರಿಸುವುದಿಲ್ಲ. ಸಂಸ್ಕಾರಯುಕ್ತವಾಗಿ ಆಡುವ ಮಾತೇ ಮನುಷ್ಯನಿಗೆ ಅಲಂಕಾರ. ಒಡವೆಗಳು ನಾಶವಾಗುತ್ತವೆ. ಆದರೆ ವಾಣಿಯೆಂಬ ಅಲಂಕಾರವೇ ನಾಶವಾಗದೇ ಇರುವುದು. –ಭರ್ತೃಹರಿ ನೀತಿ ಶತಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕನ್ನಡಿಯಲ್ಲಿರುವ ಗಂಟಿಗಿಂತ ಕೈಯಲ್ಲಿರುವ ಕಾಸೇಲೇಸು

ನಿಮ್ಮ ಪತ್ರಗಳು

ಆಚರಣೆ, ನಂಬಿಕೆಗಳನ್ನು ಪ್ರಶ್ನಿಸುವ ಅಥವಾ ವಿರೋಧಿಸುವ ಕೆಲಸ ಎಷ್ಟರ ಮಟ್ಟಿಗೆ ಸರಿ?

ಮಾನ್ಯರೇ,

ಇಲ್ಲಿಯವರೆಗೆ ಮೈಸೂರು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿಚಾರಗಳಿಗೆ ಹೆಚ್ಚು ಸುದ್ದಿಯಾಗುತ್ತಿತ್ತು. ಇದೀಗ ಬೇಡದ ಮತ್ತು ಅನಪೇಕ್ಷಿತ ವಿಚಾರಗಳಿಗೆ ಸುದ್ದಿಯಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಈಗ ಮೈಸೂರು 'ಮಹಿಷ ದಸರಾ'ಕ್ಕೆ ಸಂಬಂಧಿಸಿದಂತೆ ಸದ್ದು ಮಾಡುತ್ತಿದ್ದು, ಇದನ್ನು ಕೆಲವರು ತಮಗೆ ಬೇಕಾದಂತೆ ಬಳಸಿಕೊಳ್ಳುವ ಅಪಾಯವಿದೆ. ಜನರ ಕೆಲವು ವಿಚಾರಗಳಿಗೆ, ಸಂಪ್ರದಾಯಗಳಿಗೆ, ಆಚರಣೆಗಳಿಗೆ ಅವರವರ ನಂಬಿಕೆಗಳೇ ಆಧಾರವಾಗಿರುತ್ತವೆ. ಹಾಗೆಯೇ ಮೈಸೂರು 'ಮಹಿಷನ ಊರು' ಎಂದು ಒಂದಷ್ಟು ಜನ ಮತ್ತು ಚಾಮುಂಡೇಶ್ವರಿ 'ಮೈಸೂರಿನ ಅಧಿದೇವತೆ' ಎಂದು ಒಂದಷ್ಟು ಮಂದಿ ಅಂದುಕೊಂಡಿದ್ದಾರೆ. ಇದಕ್ಕೆ ಅವರವರ ನಂಬಿಕೆಗಳೇ ಆಧಾರವಾಗಿವೆ. ತಾವು ನಂಬಿರುವ ದೈವಗಳು, ದೇವತೆಗಳು ಅಥವಾ 'ದೈವ ಸ್ವರೂಪಿ' ವ್ಯಕ್ತಿಗಳನ್ನು ಪೂಜಿಸುವ, ಆರಾಧಿಸುವ ಸ್ವಾತಂತ್ರ್ಯವನ್ನು ನಮ್ಮ ದೇಶದ ಸಂವಿಧಾನವು ಕೊಡಮಾಡಿದೆ. ಜನರ ಎಲ್ಲಾ ನಂಬಿಕೆಗಳಿಗೂ ಆಧಾರ ಕೇಳಲಾಗುವುದಿಲ್ಲ. ಅದು ಸರಿಯೂ ಅಲ್ಲ. ಅಂದ ಮೇಲೆ ಯಾರಾದರೂ ಮಹಿಷನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರೆ ಅಥವಾ ಪೂಜಿಸಿದರೆ ಅದರಿಂದ ಯಾರಿಗೂ ಏನೂ ತೊಂದರೆ ಇಲ್ಲ. ಹಾಗೆಯೇ ನಾಡದೇವತೆ ಚಾಮುಂಡೇಶ್ವರಿಯ ಪೂಜೆ, ಆರಾಧನೆ ಅಥವಾ 'ಮೈಸೂರು ದಸರಾ' ವನ್ನು ಅವರೇನು ವಿರೋಧಿಸುತ್ತಿಲ್ಲ. ಅಗೌರವವನ್ನೂ ತೋರಿಸಿಲ್ಲ. ಹಾಗೆಯೇ ಮೈಸೂರಿನ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿಯವರು, ನಮಗೆ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಬಗ್ಗೆಯೂ ಗೌರವವಿದೆ, ಮಹಿಷನ ಬಗ್ಗೆಯೂ ಗೌರವ, ಅಭಿಮಾನವಿದೆ ಎಂಬ ವಿವೇಕಯುತ ಮಾತುಗಳನ್ನೇ ಆಡಿದ್ದಾರೆ. ಅವರ ಮಾತುಗಳನ್ನೂ ನಾವು ಕೇಳಿಸಿಕೊಳ್ಳುವುದು ವಿವೇಕಯುತವಾದ ನಡೆ. ಅಂದ ಮೇಲೆ 'ಮಹಿಷ ದಸರಾ' ವನ್ನು ಟೀಕಿಸುವ ಅಥವಾ ವಿರೋಧಿಸುವ ಕೆಲಸ ಯೋಗ್ಯವೇ? ಬೇರೆಯವರ ನಂಬಿಕೆಗಳನ್ನು ಪ್ರಶ್ನಿಸುವ ಮೂಲಕ ನಮ್ಮ ಸಂವಿಧಾನದ ಆಶಯಗಳನ್ನೇ ಪ್ರಶ್ನಿಸುವ ಹಾಗೆ ಕೆಲವರು ನಡೆದುಕೊಳ್ಳುತ್ತಿದ್ದಾರೆ. ಇದು ಸಲ್ಲದು.

ಅಷ್ಟಕ್ಕೂ ಹಿಂದೂ ಧರ್ಮದ ಮೂಲ ತಳಪಾಯ 'ವಸುದೈವ ಕುಟುಂಬಕಂ' (ಇಡೀ ಪ್ರಪಂಚವೇ ಒಂದು ಕುಟುಂಬ) ಎಂದು ನಾವೇ ಹೇಳಿಕೊಳ್ಳುತ್ತೇವೆ. ಅಂದ ಮೇಲೆ ನಮ್ಮ ದೇಶದ ಜನರೇ, ನಮ್ಮ ಸೋದರರ ರೀತಿಯಲ್ಲಿ ಜೊತೆಯಲ್ಲಿಯೇ ಬದುಕುತ್ತಿರುವವರ ಆಚರಣೆ, ನಂಬಿಕೆಗಳನ್ನು ಪ್ರಶ್ನಿಸುವ ಅಥವಾ ವಿರೋಧಿಸುವ ಕೆಲಸ ಎಷ್ಟರಮಟ್ಟಿಗೆ ಸರಿ?

–ರಾಜಶೇಖರಮೂರ್ತಿ, ಬೆಳಗನಹಳ್ಳಿ, ಹೆಚ್.ಡಿ.ಕೋಟೆ ತಾಲೂಕು.

ಕುವೆಂಪುನಗರದ ಅತಿರಥ ಉದ್ಯಾನವನಕ್ಕೆ ಕನಿಷ್ಠ ಸೌಲಭ್ಯ ಕಲ್ಪಿಸಿ

ಮಾನ್ಯರೆ,



ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲೊಂದಾದ ಕುವೆಂಪುನಗರದ ಇ ಆಂಡ್ ಎಫ್ ಬ್ಲಾಕ್‌ನ ಅಗ್ನಿಹಂಸ ರಸ್ತೆಯಲ್ಲಿರುವ ಅತಿರಥ ಉದ್ಯಾನವನವು ಯಾವುದೇ ಕನಿಷ್ಠ ಸೌಕರ್ಯವೂ ಇಲ್ಲದೆ ಪಾಳು ಬಿದ್ದಿದೆ. ಅತೀ ಹೆಚ್ಚು ಹಿರಿಯ ನಾಗರಿಕರು ವಾಸ ಮಾಡುವ ಈ ಬಡಾವಣೆಯ ಈ ಪಾರ್ಕ್‌ನಲ್ಲಿ ಹಿರಿಯ ನಾಗರಿಕರು ವಾಕಿಂಗ್ ಮಾಡಲು ವಾಕಿಂಗ್ ಪಾಥ್ ಇಲ್ಲ. ಮಕ್ಕಳಿಗೆ ಆಟ ಆಡಲು ಸಾಧನ ಸಲಕರಣೆಗಳು ಇಲ್ಲ ಎಲ್ಲಕ್ಕಿಂತ ಮುಖ್ಯವಾಗಿ ಶುದ್ಧ ಗಾಳಿ ಸಿಗಲು ಕನಿಷ್ಠ ಸ್ವಚ್ಛತೆಯೂ ಇಲ್ಲ. ಇದನ್ನು ನೋಡಿದರೆ ಇದೇನಿದು ಪಾರ್ಕೋ ಅಥವಾ ಗಿಡಗಂಟಿಗಳ ಆಶ್ರಯತಾಣವೋ ಎನಿಸುತ್ತದೆ. ಈ ಪಾರ್ಕ್‌ನಲ್ಲಿ ಬಿದ್ದಿರುವ ಕಸದಿಂದ ಮಳೆ ಬಿದ್ದಾಗ ಬರುವ ಕೆಟ್ಟ ವಾಸನೆಯಿಂದ, ರೋಗ–ರುಜಿನಗಳು ಹರಡುವ ಸಾಧ್ಯತೆ ಇರುತ್ತದೆ. ಈ ಭಾಗದ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಈ ಪಾರ್ಕ್ ಈ ಸ್ಥಿತಿಗೆ ಬಂದಿದೆ. ಈಗಲಾದರೂ ಈ ಭಾಗದ ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸಿ, ಕನಿಷ್ಠ ಸೌಲಭ್ಯವನ್ನಾದರೂ ಕಲ್ಪಿಸಿ.

–ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು

ಪಟಾಕಿ ಹೊಡೆಯುವ ಮುನ್ನ ಯೋಚಿಸಿ...

ಮಾನ್ಯರೆ,

ತಮಿಳುನಾಡು ಗಡಿಯ ಆನೇಕಲ್ ತಾಲೂಕಿನ ಅತ್ತಿಬೆಲೆಯಲ್ಲಿ ಶನಿವಾರ ಸಂಭವಿಸಿದ ಪಟಾಕಿ ದುರಂತದಲ್ಲಿ ಹಲವಾರು ಮಂದಿ ಮೃತಪಟ್ಟಿರುವ ಘಟನೆ ದುರದೃಷ್ಟಕರ. ಸಾಮಾನ್ಯವಾಗಿ ಪ್ರತಿವರ್ಷ ದೀಪಾವಳಿ ಸಮಯದಲ್ಲಿ ಈ ರೀತಿಯ ಅಗ್ನಿ ಅವಘಡಗಳು ಒಂದಿಲ್ಲೊಂದು ಪ್ರದೇಶದಲ್ಲಿ ನಡೆಯುತ್ತಲೇ ಇರುವುದು ಆತಂಕಪಡುವ ಸಂಗತಿ.

ಕತ್ತಲೆಯನ್ನು ಹೋಗಲಾಡಿಸಿ ಮನೆ ಹಾಗೂ ಮನದ ಕತ್ತಲೆಯನ್ನು ನಿವಾರಿಸಿ ಬೆಳಕನ್ನು ಉಂಟು ಮಾಡುವ ಹಬ್ಬವೇ ದೀಪಾವಳಿ. ಆದರೆ ಪಟಾಕಿ ಇಲ್ಲದ ದೀಪಾವಳಿಯನ್ನು ಇಂದು ಊಹಿಸುವುದೇ ಕಷ್ಟವಾಗಿದೆ. ಕೇವಲ ದೀಪಗಳ ಬೆಳಗುವಿಕೆಯಿಂದ ಸುಂದರಗೊಳ್ಳುತ್ತಿದ್ದ ಸಂಜೆಗೆ ಯಾವಾಗ ಪಟಾಕಿ ತಳಕು ಹಾಕಿಕೊಂಡಿತೋ ಗೊತ್ತಿಲ್ಲ. ಆದರೆ ಪಟಾಕಿಗಳು ಕೆಲವು ನಿಮಿಷಗಳ ಖುಷಿ ಹಾಗೂ ಸಂಭ್ರಮವನ್ನು ಮಾತ್ರ ನೀಡುವುದಂತೂ ನಿಜ. ಆದರೆ ಈ ಸಂಭ್ರಮದ ಬಳಿಕ ಸೃಷ್ಟಿಯಾಗುವ ಪಟಾಕಿಯ ಹೊಗೆ, ವಿಷಕಾರಿ ಅನಿಲಗಳು, ವಿಷಕಾರಿ ವಸ್ತುಗಳು, ಮೊದಲಾದವು ಹಲವು ರೀತಿಯಲ್ಲಿ ವಾತಾವರಣವನ್ನು ಕಲುಷಿತಗೊಳಿಸುತ್ತದೆ. ಪಟಾಕಿ ಸುಟ್ಟಾಗ ದೊರಕುವ ಬೆಳಕು ಹಾಗೂ ಸದ್ದು ಆ ಕ್ಷಣಕ್ಕೆ ಸಂಭ್ರಮ ಮೂಡಿಸಿದರೂ, ಈ ಬೆಳಕು ಅಡಗಿದ ಬಳಿಕ ಏಳುವ ಹೊಗೆ ಅತ್ಯಂತ ವಿಷಕಾರಿಯಾಗಿರುತ್ತದೆ.

ಹಬ್ಬಗಳು ನಮ್ಮ ಮೈಮನ ಸ್ವಚ್ಛಗೊಳಿಸಿ ದೈನಂದಿನ ಬದುಕಿಗೆ ಕಳೆ ತುಂಬುವ ಕೆಲಸ ಮಾಡಬೇಕಿದೆ. ಆದರೆ ಪಟಾಕಿಗಳನ್ನು ಸುಡುವುದರಿಂದ ಇಷ್ಟೆಲ್ಲ ತೊಂದರೆ, ಫಜೀತಿ ಹಾಗೂ ಅನಾಹುತಗಳು ಇರುವುದನ್ನು ಅರಿತು, ಈ ಬಾರಿಯ ದೀಪಾವಳಿಯಲ್ಲಿ ದೀಪಗಳನ್ನು ಮಾತ್ರ ಬೆಳಗಿಸಿ ಸಂಭ್ರಮ ಸಡಗರ ಪಡೋಣ. ಹಾನಿಕಾರಕ ಪಟಾಕಿಗಳಿಂದ ದೂರವಿರೋಣ!


– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಮನಸ್ಸಿದ್ದರೆ ಮಾರ್ಗ...



ಅಬ್ದುಲ್ ಕಲಾಂ



ಸಚಿನ್ ತೆಂಡೂಲ್ಕರ್



ರೋಹಿತ್ ಶರ್ಮ

> "ಸಮಯವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ಮಾತ್ರ ಸಾಧನೆ ಮಾಡಲು ಸಾಧ್ಯ. ಗಂಟೆಗಟ್ಟಲೆ ವ್ಯರ್ಥವಾಗಿ ಬೇಡದ ವಿಚಾರಗಳ ಬಗ್ಗೆ ಮಾತನಾಡುತ್ತಾ ಸಮಯ ಕಳೆಯಲು, ಬೇರೆಯವರ ವಿಚಾರಗಳನ್ನು ಉಪ್ಪು–ಹುಳಿ ಖಾರ ಸೇರಿಸಿ ಅವರ ಬೆನ್ನ ಹಿಂದೆ ಮಾತನಾಡುತ್ತಾ ಕಾಲಹರಣ ಮಾಡುವುದರ ಬದಲು ನಮಗಿರುವ ಸಮಯವನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡಲ್ಲಿ ಸಾಧನೆಯ ಹಾದಿ ಸುಲಭವಾಗುತ್ತದೆ.

ಅವನ ಅದೃಷ್ಟ ಚೆನ್ನಾಗಿದೆ. ಹಾಗಾಗಿ ಅವನು ಮುಟ್ಟಿದ್ದೆಲ್ಲಾ ಚಿನ್ನ. ಬಿಡು ನನ್ನ ಟೈಮೇ ಸರಿ ಇಲ್ಲ , ಅಂದ್ಕೊಂಡಂಗೆ ಏನು ನಡೆಯಲ್ಲ ... ನನ್ನಣೆ ಬರಹವೇ ಇಷ್ಟು...!

ಹದಿಹರೆಯದ ವಿದ್ಯಾರ್ಥಿಗಳ ಈ ಬಗೆಯ ನಿರುತ್ಸಾಹದ ನುಡಿಗಳನ್ನು ಕೇಳಿದಾಗ, ಸದಾ ಪುಟಿಯಬೇಕಾಗಿರುವ ವಿದ್ಯಾರ್ಥಿಗಳೇ ಈ ತರಹ ನಕಾರಾತ್ಮಕವಾಗಿ ಚಿಂತಿಸಿದರೆ ಮುಂದೆ ಜೀವನವನ್ನು ಹೇಗೆ ಎದುರಿಸಬಲ್ಲರು ಎಂದು ಆಲೋಚನೆ ಎದುರಾದಾಗ ಆತಂಕವು ಮನವನ್ನು ಕಲಕುತ್ತದೆ.

ಹೌದು, ಸಾಮಾನ್ಯವಾಗಿ ಅಸಾಧ್ಯವಾದುದನ್ನು ಸಾಧಿಸಿ ತೋರಿಸಿದಾಗ ಇದು ಅವರಿಂದ ಮಾತ್ರ ಸಾಧ್ಯ, ಯಾವುದೇ ಕಾರ್ಯಗಳನ್ನು ಮಾಡುವ ಮುನ್ನ ನಮ್ಮಿಂದ ಇದೆಲ್ಲಾ ಸಾಧ್ಯವಾಗದು ಎಂದು ಅನ್ನಿಸುವುದು ಸಹಜ. ಆದರೆ ಪ್ರಯತ್ನಗಳಿಲ್ಲದೆ ರತ್ನಗಳನ್ನು ಸಂಪಾದಿಸಲಾಗದು ಎಂಬ ವಿಚಾರ ಹೊಳೆಯಬೇಕು. ಇತ್ತೀಚಿನ ದಿನಗಳಲ್ಲಂತೂ ಕೆಲವು ವಿದ್ಯಾರ್ಥಿಗಳು 'ಪಠ್ಯಕ್ರಮ ಜಾಸ್ತಿ ಸರ್, ಓದೋದು, ಆಟ ಆಡೋದು ಇದಕ್ಕೆ ಸಮಯವಿಲ್ಲ ಇನ್ನೂ ಬೇರೆ ಕೆಲಸಗಳಿಗೆ ಹೇಗೆ ಗಮನ ಹರಿಸೋದು ಹೇಳಿ' ಎಂಬ ತೇಲಿಕೆಯ ಉತ್ತರವನ್ನು ಕೊಡುವವರೇ ಕಂಡುಬರುತ್ತಾರೆ. ಸಾಧನೆ ಮಾಡಬೇಕೆಂದು ಹೊರಟವರಿಗೆ ಗುರಿಯ ಗಮ್ಯತೆಯೆಡೆಗೆ ಗಮನವಿರಬೇಕೆ ವಿನಹಃ ಮಧ್ಯೆ ಎದುರಾಗುವ ಅಡೆತಡೆಗಳ ಮೇಲಲ್ಲ. ಹಾಗಾದರೆ ಸಾಧನೆ ಮಾಡಲು ಬೇಕಾದ ಪ್ರಮುಖ ಅಂಶಗಳೇನು ಎಂಬುದನ್ನು ನೋಡೋಣ.

ಸ್ವ ಸಾಮರ್ಥ್ಯ – ಗುರಿಯ ಕಡೆಗೆ ತಲುಪಲು ಮೊದಲು ನಮ್ಮ ಮೇಲೆ ನಮಗೆ ನಂಬಿಕೆ ಇರಬೇಕು. ಇಲ್ಲದಿದ್ದರೆ ಅಂತವರಿಂದ ಏನೂ ಕೆಲಸವಾಗದು. ತನ್ನ ಗುರಿ ಏನು, ಸಾಮರ್ಥ್ಯ ಏನು ಎಂಬುದನ್ನು ಪತ್ತೆ ಹಚ್ಚಿ ಅದರೆಡೆಗೆ ಗಮನಹರಿಸಿದಾಗ ಮಾತ್ರ ನಾವಂದುಕೊಂಡ ಸಮಯದಲ್ಲಿ ನಮ್ಮ ಗುರಿ ತಲುಪಲು ಸಾಧ್ಯವಾಗುತ್ತದೆ. ಪ್ರಸ್ತುತ ದಿನಗಳಲ್ಲಿ ಕುಂಟುನೆಪಗಳನ್ನು ಹೇಳುತ್ತಾ ತಮ್ಮ ಸ್ವ–ಸಾಮರ್ಥ್ಯವನ್ನು ಮರೆತು ಬಾಳುತ್ತಿರುವ ಯುವ ಸಮೂಹ ನಮ್ಮ ಎದುರಿಗಿದೆ. ಅಂತಹ ಯುವ ಸಮೂಹದವರು ಹಿಂದೆ ಎಲ್ಲೋ ಓದಿದ ಕಥೆ ನೆನಪಿಗೆ ಬರುತ್ತೆ...;

ಕಥೆ: ಇಲಿಯೊಂದು ಮರದಡಿಯಲ್ಲಿ ವಾಸವಾಗಿತ್ತು. ಒಮ್ಮೆ ಬೆಕ್ಕು ಇಲಿಯನ್ನು ಬೆನ್ನಟ್ಟಿ ಬಂತು, ಪ್ರಾಣ ಭಯದಿಂದ ಇಲಿ ಓಡಿ ತಪ್ಪಿಸಿಕೊಂಡಿತು. ತಕ್ಷಣ ಇಲಿಗೆ ನಾನು ಬೆಕ್ಕಾಗಿದ್ದರೆ ಚೆನ್ನಾಗಿರುತ್ತಿತ್ತು ಎಂದು ಯೋಚಿಸಿತು, ಆ ಕ್ಷಣ ಇಲಿ ಬೆಕ್ಕಾಗಿ ಮಾರ್ಪಾಡು ಹೊಂದಿತು. ಬೆಕ್ಕಾಗಿ ಮಾರ್ಪಾಡಾದ ಇಲಿಯು ಸಂತೋಷದಿಂದ ಕಾಲ ಕಳೆಯುತ್ತಲಿತ್ತು. ಒಮ್ಮೆ ನಾಯಿಯೊಂದು ಅದೇ ಬೆಕ್ಕನ್ನು ಅಟ್ಟಿಸಿಕೊಂಡು ಬಂತು, ಮತ್ತದೇ ಸನ್ನಿವೇಶ ಈಗ ಬೆಕ್ಕು ನಾಯಿಯಾದರೆ ಚೆನ್ನಾಗಿರಬಹುದೆಂದು ಭಾವಿಸಿತು, ತಕ್ಷಣವೇ ನಾಯಿಯಾಯಿತು. ಮುಂದೆ ನಾಯಿಯನ್ನು ಹುಲಿಯೊಂದು ಅಟ್ಟಿಸಿಕೊಂಡು ಬಂದು ಮತ್ತದೇ ಸನ್ನಿವೇಶ ಈಗ ನಾಯಿ ನಾನು ಹುಲಿಯಾಗಿದ್ರೆ ಚೆನ್ನಾಗಿರಬಹುದೆಂದು ಭಾವಿಸಿತು, ತಕ್ಷಣವೇ ಹುಲಿಯಾಯಿತು. ಹುಲಿಯಾಗಿ ಕಾಡಿನಲ್ಲಿ ರಾಜಾರೋಷವಾಗಿ ಜೀವನ ಸಾಗಿಸುತ್ತಿತ್ತು. ಕೆಲವು ದಿನಗಳ ನಂತರ ಬೇಟೆಗಾರನೊಬ್ಬ ಹುಲಿಗೆ ಬಾಣ ಬಿಡುವುದನ್ನು ನೋಡಿ ನಾನು ಬೇಟೆಗಾರನಾದರೆ ಚೆಂದ ಎಂದು ಹುಲಿ ಭಾವಿಸಿತು ಆ ಕ್ಷಣವೇ ಬೇಟೆಗಾರನಾಗಿ ಬದಲಾಯಿತು. ಒಮ್ಮೆ ಬೇಟೆಯಾಡಲು ಮರದಡಿಯಲ್ಲಿ ಕುಳಿತಾಗ ಆ ಬೇಟೆಗಾರನಿಗೆ ಮರದ ನೆರಳು, ಮರದಲ್ಲಿನ ಹಣ್ಣು ನೋಡಿ ಮರವಾಗಿದ್ದರೆ ಎಲ್ಲರಿಗೂ ಆಶ್ರಯ ನೀಡಬಹುದು, ಹಸಿವು ನೀಗಿಸಬಹುದು ಎಂದು ಚಿಂತಿಸಿದ. ತಕ್ಷಣ ಬೇಟೆಗಾರ ಮರವಾದ. ಮರವಾದ ಕೆಲವು ದಿನಗಳ ನಂತರ ಇಡೀ ಮರದ ಬುಡವೇ ಅಲುಗಾಡಿದಂತೆ ಭಾಸವಾಯಿತು. ಮರ ಅದೇನೆಂದು ಗಮನಿಸಿದಾಗ ಇಡೀ ಮರವನ್ನೇ ಕೊರೆಯುತ್ತಿರುವ ಇಲಿಯನ್ನು ನೋಡಿದಾಗ ಮರಕ್ಕೆ ಆಶ್ಚರ್ಯವಾಯಿತು.ಇಡೀ ಮರವನ್ನೇ ಉರುಳಿಸುವ ಶಕ್ತಿ ಇಲಿಗಿದೆ, ಹಾಗಾದರೆ ನಾನು ಮೊದಲಿನಂತೆ ಇಲಿಯಾಗಬೇಕೆಂದು ಚಿಂತಿಸಿತು. ತಕ್ಷಣವೇ ಮೊದಲಿನಂತೆ ಇಲಿಯಾಯಿತು. ಇಲಿಗೆ ಬೆಕ್ಕು, ನಾಯಿ, ಹುಲಿ, ಬೇಟೆಗಾರ, ಮರ ಕೊನೆಗೆ ಅನಿವಾರ್ಯ ಇಲಿಯಾಗಿ ಬದಲಾದ ನಂತರವಷ್ಟೇ ತನ್ನ ಸಾಮರ್ಥ್ಯ ಅರಿವಾದದ್ದು.

ಕಥೆಯನ್ನು ಓದಿದ ನಂತರ ಇದೆಲ್ಲವೂ ಸಾಧ್ಯವೇ, ನಡೆಯುವಂತದ್ದೆ ಎಂಬುದನ್ನು ಪ್ರಾಯೋಗಿಕ ನೆಲೆಯಲ್ಲಿ ಚರ್ಚಿಸದೇ ಅಥವಾ ನಾವು ಇಲಿಯಾಗಿಯೇ ಇರಬೇಕಾ ಬದಲಾಗಬಾರದಾ ಎಂದು ಸಂಕುಚಿತವಾಗಿ ಆಲೋಚಿಸದೆ ಕಥೆಯಲ್ಲಿನ ಅಂತಸ್ಸತ್ವ ಅರಿತಾಗ ಮಾತ್ರ ಹೊಸ ಭರವಸೆಯೊಂದು ಮೂಡುತ್ತದೆ. ನಮ್ಮಲ್ಲಿ ಅಗಾಧವಾದ ಶಕ್ತಿ ಅಡಗಿದೆ. ಆದರೆ ಅದನ್ನು ಅರಿಯದೇ ಬೇರೆ ಯಾರಲ್ಲೋ ಇರುವ ಶಕ್ತಿಯನ್ನು ನೋಡಿ ಮತ್ಸರ ಪಡುತ್ತಾ ಅಥವಾ ಆ ಶಕ್ತಿ ತಮಗಿಲ್ಲ ಎಂದು ಕೊರಗುತ್ತಿರುವವರಿಗೆಲ್ಲಾ ಸ್ವಾ–ಸಾಮರ್ಥ್ಯವನ್ನು ಪರಿಚಯಿಸುವಂತಹ ಬಗೆಯನ್ನು ಈ ಕಥೆ ತಿಳಿಸುತ್ತದೆ.

ಸಮಯದ ಸದುಪಯೋಗ – ಸಮಯವನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡಾಗ ಮಾತ್ರ ನಾವು ಏನಾದರೂ ಸಾಧಿಸಲು ಸಾಧ್ಯ. ಯಾವಾಗಲೂ ಸೋಲಿಗೆ ಕಾರಣಗಳನ್ನು ನೀಡಿ, ಕುಂಟು ನೆಪಗಳನ್ನು ಹೇಳುತ್ತಾ ತಮ್ಮಲ್ಲಿನ ಅಗಾಧವಾದ ಶಕ್ತಿಯನ್ನು ಮರೆತು ಹೋಗಿರುವವರು ಗಮನಿಸಲೇಬೇಕಾದ ವಿಚಾರವೊಂದಿದೆ. ಅದು ಸಮಯದ ಮಹತ್ವವನ್ನು ಕಡೆಗಣಿಸಿರೋದು. ಇದನ್ನು ಹೇಳುವಾಗ ನನಗೆ ಇತ್ತೀಚಿನ ಕಾರ್ಯಕ್ರಮವೊಂದರಲ್ಲಿ ಜನಪ್ರಿಯ ನಟರಾದ **ರಮೇಶ್ ಅರವಿಂದ್** ಹೇಳಿದ ವಿಚಾರವೊಂದು ನೆನಪಿಗೆ ಬರುತ್ತದೆ. ಸಮಯದ ಮಹತ್ವ ಕುರಿತು ಅವರಾಡಿದ ಮಾತು ಗಮನಾರ್ಹ.

ಏನೂ ಸಾಧನೆ ಮಾಡದೆ ಸುಮ್ಮನೆ ನೆಪಗಳನ್ನು ಹೇಳುತ್ತಾ ಜೀವನ ನಡೆಸುವ ಜನರಿಗೂ, ಅಸಾಧ್ಯ ಎಂದು ಅಂದುಕೊಂಡಿದ್ದನ್ನು ಸಾಧ್ಯ ಎಂದೂ ಮಾಡಿ ತೋರಿಸಿದವರಿಗೂ ಇದ್ದ ಒಂದು ಸಾಮಾನ್ಯ ಅಂಶ ಅಂದರೆ ಅದು ಸಮಯ. ಹೌದು ಸಾಧನೆ ಮಾಡಿದವರಿಗೆ 26 ಗಂಟೆಯಾಗಲೀ, 25 ಗಂಟೆಯಾಗಲೀ ಇರಲಿಲ್ಲ. ಅವರಿಗೂ, ನಮಗೂ ಇರುವುದು ಒಂದೇ ಸಮಯ ಅದು ಕೇವಲ 24 ಗಂಟೆ. ಆ ಸಮಯವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ಮಾತ್ರ ಸಾಧನೆ ಮಾಡಲು ಸಾಧ್ಯ. ಗಂಟೆಗಟ್ಟಲೆ ವ್ಯರ್ಥವಾಗಿ ಬೇಡದ ವಿಚಾರಗಳ ಬಗ್ಗೆ ಮಾತನಾಡುತ್ತಾ ಸಮಯ ಕಳೆಯಲು, ಬೇರೆಯವರ ವಿಚಾರಗಳನ್ನು ಉಪ್ಪು–ಹುಳಿ ಖಾರ ಸೇರಿಸಿ ಅವರ ಬೆನ್ನ ಹಿಂದೆ ಮಾತನಾಡುತ್ತಾ ಕಾಲಹರಣ ಮಾಡುವುದರ ಬದಲು ನಮಗಿರುವ ಸಮಯವನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡಲ್ಲಿ ಸಾಧನೆಯ ಹಾದಿ ಸುಲಭವಾಗುತ್ತದೆ.

ಸತತ ಪ್ರಯತ್ನ: ಕೆಲವೊಮ್ಮೆ ನಮ್ಮಲ್ಲಿ ಸಾಧನೆ ಮಾಡ ಹೊರಟವನಿಗೆ ಬೆಕ್ಕಿಗಿಂತ ಹೆಚ್ಚಾಗಿ ಜನರೇ ಅಡ್ಡ ಬರುತ್ತಾರೆ. ಆದರೆ ಈ ಅಡೆತಡೆಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೇ ನಮ್ಮದೇ ದಾರಿಯಲ್ಲಿ ಸಾಗಿದರೆ ಖಂಡಿತವಾಗಿ ಯಶಸ್ಸು ಸಿಕ್ಕೇ ಸಿಗುತ್ತದೆ. ಸೋತಾಗ ಕುಗ್ಗದೇ ಮತ್ತೆ ಮತ್ತೆ ಅಭ್ಯಾಸ ಮಾಡಿದ್ದಲ್ಲಿ ಗೆಲುವು ಸಿಕ್ಕೆ ಸಿಗುತ್ತದೆ. ಪ್ರಯತ್ನ ಮಾಡದೇ ಸೋಲನ್ನೊಪ್ಪಿಕೊಳ್ಳಬಾರದು. ಸೋಲು ಗೆಲುವಿಗೆ ಮುನ್ನುಡಿ ಬರೆಯಬಲ್ಲದು.ಈ ಮಾತನ್ನು ಹೇಳುವಾಗ ವರ್ಷಗಳ ಹಿಂದೆ ದಿನಪತ್ರಿಕೆಯಲ್ಲಿ ಓದಿದ ವಿಚಾರವೊಂದು ನೆನಪಿಗೆ ಬರುತ್ತದೆ

ತನ್ನ ಆರನೇ ವಯಸ್ಸಿನಲ್ಲಿ ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡ ಹುಡುಗಿ ಅವಳ ಅಂಧತ್ವವನ್ನೇ ಸವಾಲಾಗಿ ಸ್ವೀಕರಿಸಿ ತನ್ನ ಬದುಕನ್ನು ದಿಟ್ಟವಾಗಿ ಎದುರಿಸಿ ಕಬ್ಬಿಣದ ಕಡಲೆ ಎಂದು ಹಲವರು ಭಾವಿಸಿರುವ ಐ.ಎ.ಎಸ್ ಪರೀಕ್ಷೆಯನ್ನು ಪಾಸುಮಾಡಿ (ಅದು 124ನೇ ಶ್ರೇಣಿಯಲ್ಲಿ) ದೇಶದ ಮೊದಲ ಅಂಧ ಐ.ಎ.ಎಸ್. ಅಧಿಕಾರಿಯಾಗಿ ಕೇರಳದ ತಿರುವನಂತಪುರದ ಉಪ ವಿಭಾಗಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಪ್ರಾಂಜಲ್ ಪಾಟೀಲ್ ಅವರ ಬದುಕು ಎಂತವರಿಗಾದರೂ ಸ್ಫೂರ್ತಿ ನೀಡುವಂತದ್ದು.

ಕಣ್ಣು ಕಳೆದುಕೊಂಡೆ, ನನ್ನ ಬದುಕೆಲ್ಲ ಕತ್ತಲಾಯಿತು ಎಂದು ನೆಪ ಹೇಳದೆ , ವಿಧಿಯನ್ನು ಹಳಿಯುತ್ತಾ ಕಾಲ ಕಳೆಯದೆ ತನ್ನ ಅಂಧತ್ವವನ್ನೇ ಸವಾಲಾಗಿ ಸ್ವೀಕರಿಸಿ ಐ.ಎ.ಎಸ್ ಪರೀಕ್ಷೆ ಪಾಸು ಮಾಡಿದ ಪ್ರಾಂಜಲ್ ಪಾಟೀಲ್ ಅವರ ಯಶೋಗಾಥೆಯನ್ನು ಕೇಳಿದ ಮೇಲೆ, ಅವರ ಬಗ್ಗೆ ಓದಿದ ಮೇಲೆ ತಿಳಿದ ವಿಚಾರವೆಂದರೆ ಮನಸ್ಸು ಮಾಡಿ ತನ್ನ ಗುರಿಯೆಡೆಗೆ, ಸಾಧನೆ ಕಡೆಗೆ ಗಮನ ಹರಿಸಿದರೆ ಪ್ರತಿಯೊಬ್ಬರೂ ಏನಾದರೂ ಸಾಧಿಸಬಹುದು ಎಂಬ ಮಾತು ನಿಜವೆನಿಸಿತು.

ಕಠಿಣ ಅಭ್ಯಾಸ: ಡಾ. ಅಬ್ದುಲ್ ಕಲಾಂ ಒಂದು ಕಡೆ ಹೇಳಿದ ಮಾತು ನೆನಪಿಗೆ ಬರುತ್ತದೆ. 'ನಿದ್ದೆ ಮಾಡುವಾಗ ಕಾಣುವುದು ಕನಸಲ್ಲ, ಸದಾ ಜಾಗ್ರತೆ ಮೂಡಿಸಿ ನಿದ್ರಿಸದಂತೆ ಮಾಡುವುದು ನಿಜವಾದ ಕನಸು' ಅಂದರೆ ನಾವಂದುಕೊಂಡ ಕೆಲಸಗಳು ನಡೆಯಬೇಕಾಗಿದ್ದರೆ ಅದರೆಡೆಗೆ ಗಮನಹರಿಸಬೇಕಾಗುತ್ತದೆ. ಕಠಿಣವಾದ ಪರಿಶ್ರಮವನ್ನು ಹಾಕಬೇಕಾಗುತ್ತದೆ. ಸೋಮಾರಿತನ ಸಾಧಕನ ಮೊದಲ ಶತ್ರುವಾಗಿರುತ್ತದೆ. ಸೋಮಾರಿತನವನ್ನು ಹೋಗಲಾಡಿಸಿದ್ದಲ್ಲಿ ಏನು ಬೇಕಾದರೂ ಮಾಡಬಹುದು.

ಉದಾಹರಣೆಗೆ: ಜಮೈಕಾದ ಚಿರತೆ ಎಂದೇ ಖ್ಯಾತನಾಗಿದ್ದ ಉಸೇನ್ ಬೋಲ್ಟ್ ಅವರ ಬದುಕನ್ನೇ ನೋಡಿ. ಅವರು ನಾಲ್ಕು ವರ್ಷಕ್ಕೊಮ್ಮೆ ಒಲಂಪಿಕ್ಸ್ ನಡೆಯೋದು, ಆಗ ಅಭ್ಯಾಸ ಮಾಡಿದ್ರೆ ಸಾಕು, ಈಗ ಆರಾಮಾಗಿರಬಹುದು ಎಂದು ಕಾಲ ಕಳೆಯುತ್ತಾ, ಸಮಯವನ್ನು ಮರೆತ್ತಿದ್ದರೆ ಅವರನ್ನು ಜಮೈಕಾದ ಚಿರತೆ ಎಂದು ಕರೆಯಲು ಸಾಧ್ಯವಾಗುತ್ತಿತ್ತೇ. ಅತಿ ಕಡಿಮೆ ಸೆಕೆಂಡಿಗೆ ನೂರು ಮೀಟರ್ ಓಟವನ್ನು ಗೆದ್ದು ವಿಶ್ವಮಟ್ಟದಲ್ಲಿ ಖ್ಯಾತನಾಗಿರಲು ಸಾಧ್ಯವಾಗುತ್ತಿತ್ತೇ ಕಠಿಣ ಶ್ರಮ, ನಿರಂತರ ಪ್ರಯತ್ನ , ಗುರಿಯೆಡೆಗೆ ಹೆಚ್ಚಿನ ಗಮನ ಇವೆಲ್ಲಾ ಯಾರಲ್ಲಿ ಆಳವಾಗಿ ಬೇರೂರಿವುದೋ ಅವರಿಂದ ಮಾತ್ರ ಯಾವುದೇ ಸಾಧನೆ ಮಾಡಲು ಸಾಧ್ಯ.


ಇನ್ನಾದರೂ ಕುಂಟುನೆಪಗಳನ್ನು ಹೇಳುವುದನ್ನು ಬಿಟ್ಟು ನೀವು ಏನಾಗಬೇಕೆಂದು ಬಯಸಿರುವಿರಿ, ನಿಮ್ಮ ಗುರಿ ಏನು ಎಂಬುದನ್ನು ನಿರ್ಧರಿಸಿ. ಆ ಗುರಿಯೆಡೆಗೆ ಗಮನಹರಿಸಿ. ಖಂಡಿತವಾಗಿ ನಿಮ್ಮಿಂದ ಮಾತ್ರ ಗುರಿ ತಲುಪಲು ಸಾಧ್ಯವೇ ಹೊರತು ಮತ್ತ್ಯಾರಿಂದಲೂ ಸಾಧ್ಯವಾಗದು.

ಈ ಭೂಮಿಯ ಮೇಲೆ ಉಪಯೋಗಕ್ಕೆ ಬಾರದ ಯಾವ ವಸ್ತುವೂ ಇಲ್ಲ, ವ್ಯಕ್ತಿಯೂ ಇಲ್ಲ. ಪ್ರತಿಯೊಬ್ಬರಲ್ಲೂ ತಮ್ಮದೇ ಆದ ಸಾಮರ್ಥ್ಯಗಳಿರುತ್ತವೆ. ಅದನ್ನು ಒಳ್ಳೆಯ ವಿಚಾರದ ಕಡೆಗೆ ಕೊಂಡೊಯ್ಯುವ ಕೆಲಸವನ್ನು ಮಾಡಬೇಕು. ಸಾಧಿಸುವ ಮನುಷ್ಯರಿಗೆ ಮೊದಲು ತಮ್ಮ ಬಗ್ಗೆ ತಮಗೆ ಆತ್ಮವಿಶ್ವಾಸ ಇದ್ದರೆ ಸಾಕು , ಇಡೀ ಜಗತ್ತನ್ನೇ ಬೇಕಾದರೂ ಗೆಲ್ಲಲು ಸಾಧ್ಯ. ಈ ಮಾತನ್ನು ಹೇಳುವಾಗ ನೈಜ ಘಟನೆ ಎಂದು ಹೇಳಲಾಗುವ ಕ್ರಿಕೆಟ್ ದೇವರು ಎಂದು ಪ್ರಸಿದ್ಧರಾದ ಸಚಿನ್‌ರ ಜೀವನದ ಒಂದು ಘಟನೆ ನೆನಪಾಗುತ್ತದೆ. ಸಚಿನ್ ಆಗ ತಾನೇ ಕ್ರಿಕೆಟ್ ಆಡುತ್ತಿದ್ದ ದಿನಗಳವು. ಒಮ್ಮೆ ವ್ಯಕ್ತಿಯೊಬ್ಬರು ಕೇಳಿದರಂತೆ ಕ್ರಿಕೆಟ್‌ನಲ್ಲಿ ನೀನು ಸುನೀಲ್ ಗವಾಸ್ಕರ್ ಆಗುವೆಯಾ? ಎಂದು ಕೇಳಿದರಂತೆ (ಇದೇ ಪ್ರಶ್ನೆಯನ್ನು ಇವತ್ತಿನ ಕ್ರಿಕೆಟ್ ಅಭಿಮಾನಿಗಳಿಗೆ ಕೇಳಿದರೆ ಕೊಹ್ಲಿ ಎಂತಲೋ ಶರ್ಮ ಎಂದೋ ಉತ್ತರಿಸುವರು ಅಥವಾ ಅವರಿಗಿಷ್ಟವಾದ ಕ್ರಿಕೆಟ್ ಆಟಗಾರರ ಹೆಸರು ಹೇಳಬಹುದು) ಆಗಿನ ಕಾಲಘಟ್ಟದಲ್ಲಿ ಹೆಚ್ಚು ಚಾಲ್ತಿಯಲ್ಲಿ ಇದ್ದ ಹೆಸರು ಗವಾಸ್ಕರ್ ಹೆಸರು. ಆಗ ಸಚಿನ್ ಕೊಟ್ಟ ಉತ್ತರ ಇದು – ಸಚಿನ್ ಆಗುವೆ; ಅದರಲ್ಲೂ ಮುಖ್ಯವಾಗಿ ಸಚಿನ್ ರಮೇಶ್ ತೆಂಡೂಲ್ಕರ್ ಆಗುವೆ ಎಂದೂ ಉತ್ತರ ಕೊಟ್ಟರಂತೆ. ಇದು ಸಚಿನ್‌ರ ಆತ್ಮವಿಶ್ವಾಸಕ್ಕೆ ಹಿಡಿದ ಕೈಗನ್ನಡಿಯಂತಿದೆ. ಮಾತಿನಲ್ಲಿ ಅಷ್ಟೇ ಅಲ್ಲ ಅದನ್ನು ಮಾಡಿಯೂ ತೋರಿಸಿ ಹಿಂದಿನ, ಇಂದಿನ ಹಾಗೂ ಮುಂದಿನ ತಲೆಮಾರಿನ ನೆನಪಲ್ಲಿ ಸಚಿನ್ ಉಳಿಯುವಂತಾಗಿ ಬೆಳೆದಿದ್ದು ಈಗ ಇತಿಹಾಸ.

ಹೀಗೆಯೇ ಪ್ರತಿಯೊಬ್ಬರಲ್ಲೂ ಸಾಧಿಸುವ ಹುಮ್ಮಸ್ಸು, ಧೈರ್ಯ, ಛಲ, ಹಠ ಇರುತ್ತದೆ. ಆ ನಿಟ್ಟಿನಲ್ಲಿ ಪ್ರಯತ್ನಿಸಬೇಕಷ್ಟೇ ನಾನು ಮಾಡಬಲ್ಲೆ, ನನ್ನಿಂದಲೂ ಸಾಧ್ಯ ಎಂಬ ನುಡಿಯನ್ನು ಹೇಳಿಕೊಳ್ಳುತ್ತಾ ಸಕಾರಾತ್ಮಕವಾಗಿ (ಪಾಸಿಟಿವ್) ಚಿಂತಿಸಿ. ನನ್ನಿಂದಲೂ ಸಾಧನೆ ಮಾಡುವುದು ಸಾಧ್ಯ. ನಮ್ಮೊಳಗೆ ಅಗಾಧವಾದ ಶಕ್ತಿಗಳನ್ನು ತುಂಬಿಕೊಂಡ ವ್ಯಕ್ತಿಯೊಬ್ಬ ಅಡಗಿ ಕುಳಿತ್ತಿದ್ದಾನೆ, ಅವನನ್ನು ಸಮಾಜದ ಎದುರು ನಿಲ್ಲಿಸಬೇಕಾದವರು ನಾವೇ ಆಗಿರುತ್ತೇವೆ ಹೊರತು ಬೇರೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಸ್ವಲ್ಪ ಯೋಚಿಸಿ ನೋಡಿ ಇದೇ ಹತ್ತು – ಹದಿನೈದು ವರ್ಷಗಳ ಹಿಂದೆ ವಿರಾಟ್ ಕೊಹ್ಲಿ ಆಗಲೀ, ರೋಹಿತ್ ಶರ್ಮರ ಹೆಸರಾಗಲೀ ತಿಳಿಯದಿದ್ದ ಅನೇಕರು ಇಂದು ಆ ಮಹಾನ್ ಆಟಗಾರರು ಮಾಡಿರುವ ಸಾಧನೆಯನ್ನು ನೋಡಿ ಮೂಗಿನ ಮೇಲೆ ಕೈ ಬೆರಳಿಟ್ಟುಕೊಂಡಿದ್ದಾರೆ. ಸಚಿನ್ ಮಾಡಿರುವ ದಾಖಲೆಗಳನ್ನು ಒಂದೊಂದಾಗಿ ಮುರಿಯುತ್ತಿರುವ ವಿರಾಟ್ ಕೊಹ್ಲಿ, ಏಕದಿನ ಪಂದ್ಯಗಳಲ್ಲಿ ಮೂರು ದ್ವಿಶತಕಗಳನ್ನು ಬಾರಿಸಿ ಚಾಲ್ತಿಗೆ ಬರುತ್ತಿರುವ ರೋಹಿತ್ ಶರ್ಮಾ. ಇದನ್ನು ಅವಲೋಕಿಸುವಾಗ ಕಂಡುಬಂದ ಅಂಶವೆಂದರೆ ಮನಸ್ಸಿಟ್ಟು, ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದರೆ, ಯಾವುದೇ ನೆಪಗಳನ್ನು ಹೇಳದೆ ಶ್ರದ್ಧೆಯಿಂದ ಪ್ರಯತ್ನಪಟ್ಟರೆ ಫಲವಂತೂ ಸಿಕ್ಕೇ ಸಿಗುತ್ತದೆ. ಕೆಲವರಿಗೆ ಆದಷ್ಟು ಬೇಗ, ಮತ್ತೆ ಕೆಲವರಿಗೆ ತಡವಾಗಬಹುದು ಆದರೆ ಫಲವಂತೂ ಸಿಗುತ್ತದೆ. "ನಿಮ್ಮಿಂದ ಅಸಾಧ್ಯವಾದುದು ಏನೂ ಇಲ್ಲ ಪ್ರಯತ್ನಿಸಿ ನೋಡಿ ಖಂಡಿತವಾಗಿ ನೀವು ಸಾಧಿಸಬಲ್ಲಿರಿ".

ಮಹಿಷ ದಸರಾ ಹೊಸದೇನಲ್ಲ...

ವಿಜಯಪುರ, ಅ.12– ಮೈಸೂರಲ್ಲಿ ಮಹಿಷ ದಸರಾ ಆಚರಣೆ ಹೊಸದೇನಲ್ಲ. ಈ ಹಿಂದೆಯೂ ಕೂಡ ನಡೆದಿದೆ ಎಂದು ಮೈಸೂರಿನ ಕೆ.ಆರ್.ಕ್ಷೇತ್ರದ ಮಾಜಿ ಶಾಸಕ ಎ.ಎಸ್. ರಾಮದಾಸ್ ತಿಳಿಸಿದ್ದಾರೆ.



ಮಹಿಷ ದಸರಾಕ್ಕೆ ಈಗ ಬಣ್ಣ ಕೊಡಲಾಗಿದೆ. ಇದು ಸರಿಯಲ್ಲ. ನಾನು ಸಚಿವನಾಗಿದ್ದಾಗಲೂ ಮಹಿಷ ದಸರಾ ಆಚರಣೆ ಮಾಡುವವರು ನನ್ನ ಬಳಿ ಬಂದು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಚಾಮುಂಡೇಶ್ವರಿ ಬೆಟ್ಟದಲ್ಲಿರುವ ಮಹಿಷ ಪ್ರತಿಮೆ ಮುಂದೆ 4–5 ಜನ ನಿಂತು ಫೋಟೋ ತೆಗೆಸಿಕೊಂಡು ಹೋಗುತ್ತಿದ್ದರು ಎಂದು ರಾಮದಾಸ್ ತಿಳಿಸಿದರು.

ಗಾಜಾ ಪಟ್ಟಿ ಇಸ್ರೇಲ್ ಸೇನೆ ವಶಕ್ಕೆ; ಪ್ಯಾಲೆಸ್ಟೇನ್ ಬೆನ್ನಲ್ಲೇ ಲೆಬನಾನ್, ಸಿರಿಯಾದಿಂದಲೂ ದಾಳಿ

ಟೆಲ್ ಅವೀವ್, ಅ.12– ಹಮಾಸ್ ಉಗ್ರರ ದಾಳಿ ಬೆನ್ನಲ್ಲೇ ಪ್ಯಾಲೆಸ್ಟೇನ್ ಮೇಲೆ ಮುಗಿಬಿದ್ದಿರುವ ಇಸ್ರೇಲ್ ಸೇನೆ ಯುದ್ಧ ಆರಂಭವಾದ 5 ದಿನಗಳಲ್ಲೇ ಗಾಜಾ ಪಟ್ಟಿಯನ್ನು ತನ್ನ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದೆ.

ಪ್ಯಾಲೆಸ್ಟೇನ್‌ನ ಹಮಾಸ್ ಉಗ್ರರ ದಾಳಿಯಿಂದ ಕಂಗೆಟ್ಟಿರುವ ಇಸ್ರೇಲ್ ಮೇಲೆ ಇದೀಗ ಬಹುರಾಷ್ಟ್ರೀಯ ದಾಳಿ ನಡೆಯುತ್ತಿದ್ದು, ಪ್ಯಾಲೆಸ್ತೀನ್‌ನೊಂದಿಗಿನ ಯುದ್ಧ ಚಾಲ್ತಿಯಲ್ಲಿರುವಂತೆ ಮತ್ತೊಂದು ಬದಿಯಲ್ಲಿ ಲೆಬನಾನ್ ಮತ್ತು ಸಿರಿಯಾ ದೇಶಗಳೂ ಕೂಡ ಗಡಿಯಲ್ಲಿ ಇಸ್ರೇಲ್ ಸೇನೆ ಮೇಲೆ ದಾಳಿ ನಡೆಸಿವೆ. ಇಸ್ರೇಲ್ ಹಾಗೂ ಹಮಾಸ್ ಉಗ್ರರ ನಡುವಿನ ಸಮರವು ದಿನೇ ದಿನೇ ಕಾವೇರುತ್ತಿದೆ. ಇಸ್ರೇಲ್ ಮೇಲೆ ಪ್ಯಾಲೆಸ್ಟೇನ್ ಉಗ್ರರು, ಗಾಜಾ ಪಟ್ಟಿ ಮೇಲೆ ಇಸ್ರೇಲ್ ಸೇನೆಯು ನಿರಂತರವಾಗಿ ದಾಳಿ ನಡೆಸುತ್ತಿದೆ. ಹಮಾಸ್ ಉಗ್ರರನ್ನು ನಿರ್ನಾಮ ಮಾಡಿಯೇ ತೀರುತ್ತೇವೆ ಎಂದು ಪಣ ತೊಟ್ಟಿರುವ ಇಸ್ರೇಲ್ ಈಗ ತನ್ನ ದಾಳಿ ತೀವ್ರಗೊಳಿಸಿದೆ.

3 ಸಾವಿರ ದಾಟಿದ ಸಾವಿನ ಸಂಖ್ಯೆ: ಎರಡೂ ದೇಶಗಳಲ್ಲಿ ನಡೆಯುತ್ತಿರುವ ದಾಳಿಯಿಂದಾಗಿ ಮೃತಪಟ್ಟವರ ಸಂಖ್ಯೆ 3 ಸಾವಿರ ದಾಟಿದೆ ಎಂದು ತಿಳಿದುಬಂದಿದೆ. ಗಾಜಾ ಪಟ್ಟಿ ಮೇಲೆ ಇಸ್ರೇಲ್ ನಿರಂತರವಾಗಿ ದಾಳಿ ನಡೆಸುತ್ತಿರುವ ಕಾರಣ ಸಾವಿನ ಸಂಖ್ಯೆ ದಿಢೀರ್ ಏರಿಕೆಯಾಗಿದೆ ಎನ್ನಲಾಗಿದೆ. ಇಸ್ರೇಲ್‌ನಲ್ಲೂ ಸಾವಿರಕ್ಕೂ ಅಧಿಕ ನಾಗರಿಕರು ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ನಾವು ಯುದ್ಧ ಆರಂಭಿಸಿಲ್ಲ. ಆದರೆ ಮುಗಿಸುತ್ತೇವೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಈಗಾಗಲೇ ಘೋಷಿಸಿದ್ದಾರೆ.

ಲೆಬನಾನ್, ಸಿರಿಯಾದಿಂದಲೂ ಇಸ್ರೇಲ್ ಮೇಲೆ ದಾಳಿ: ಪ್ಯಾಲೆಸ್ಟೇನ್‌ನ ಹಮಾಸ್ ಉಗ್ರರ ಮೇಲಿನ ಇಸ್ರೇಲ್ ಸೇನಾ ದಾಳಿ ಮುಂದುವರೆದಿರುವಂತೆಯೇ ಇತ್ತ ನಿನ್ನೆ ಸಂಜೆ ಸಿರಿಯಾ ಮತ್ತು ಲೆಬನಾನ್ ಪಡೆಗಳೊಂದಿಗೂ ಇಸ್ರೇಲ್ ತೀವ್ರ ಗುಂಡಿನ ಚಕಮಕಿ ನಡೆದಿದೆ. ಸಿರಿಯಾದಿಂದ ಇಸ್ರೇಲಿ ಭೂ ಪ್ರದೇಶದ ಮೇಲೆ ಹಲವು ರಾಕೆಟ್ ದಾಳಿಗಳು ಕೂಡ ನಡೆಯುತ್ತಿದ್ದು, ಸಿರಿಯಾ ದಾಳಿಗೆ ಇಸ್ರೇಲ್ ಸೇನೆ ಕೂಡ ತನ್ನ ಫಿರಂಗಿ ಮತ್ತು ಮಾರ್ಟರ್ ಶೆಲ್‌ಗಳೊಂದಿಗೆ ತಕ್ಕ ಉತ್ತರ ನೀಡುತ್ತಿದ್ದಾರೆ ಎಂದು ಇಸ್ರೇಲಿ ಸೇನೆ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶುಕ್ರವಾರ 13 ಅಕ್ಟೋಬರ್ 2023

ಮೊಬೈಲ್‌ಗಳಿಗೆ ಬಂತು ತುರ್ತು ಎಚ್ಚರಿಕಾ ಸಂದೇಶ!

ಭಯ ಬೇಡ... ಇದು ಸರ್ಕಾರದ ಪ್ರಾಯೋಗಿಕ ಎಚ್ಚರಿಕಾ ಸಂದೇಶ; ವಿಪತ್ತಿನ ವೇಳೆ ಅನಿವಾರ್ಯತೆಗೆ ಈ ಪರೀಕ್ಷೆ

ಮೈಸೂರು, 12(ಬಿಎಲ್‌ಯು)– ಮೊಬೈಲ್‌ನಲ್ಲಿ ಗಾಬರಿ ಹುಟ್ಟಿಸುವಂತಹ ಬೀಪ್ ಸೌಂಡ್, ನೋಡಿದರೆ ಎಮರ್ಜೆನ್ಸಿ ಅಲರ್ಟ್. ಏನು ಮಾಡಬೇಕೆಂದು ತೋಚದಂತಹ ಪರಿಸ್ಥಿತಿ. ಈ ಎಮರ್ಜೆನ್ಸಿ ಅಲರ್ಟ್‌ನಲ್ಲಿರುವ ವಿಚಾರ ಓದಿದರೆ ಏನೂ ಅರ್ಥವಾಗದು. ಕೆಳಗಿರುವ ಓಕೆಯನ್ನು ಒತ್ತಬೇಕೊ.... ಬೇಡವೊ... ಎಂಬ ಗಾಬರಿ.... ಗೊಂದಲ.....

ಗುರುವಾರ ಬೆಳಗ್ಗೆ ಮೈಸೂರು ಸೇರಿದಂತೆ ದೇಶದ ಕೋಟ್ಯಾಂತರ ಜನರಿಗೆ ಆದ ಅನುಭವವಿದು.

ಸೆಲ್ ಬ್ರಾಡ್ ಕಾಸ್ಟಿಂಗ್ ಅಲರ್ಟ್ ಸಿಸ್ಟಂ ಅಂದರೇನು...?

ವಿಪತ್ತಿನ ವೇಳೆ ಜನರ ಪ್ರಾಣ ಉಳಿಸುವ ನಿಟ್ಟಿನಲ್ಲಿ ತುರ್ತು ಸಂವಹನವೇ ಈ ಸೆಲ್ ಬ್ರಾಡ್ ಕಾಸ್ಟ್ ಅಲರ್ಟ್. ಈ ರೀತಿಯ ಸಂದೇಶದಿಂದ ಎಚ್ಚರಿಕೆಯ ದಕ್ಷತೆ ಹಾಗೂ ಪರಿಣಾಮಕಾರಿಯ ಮಹತ್ವ ಅಳೆಯುವ ದೃಷ್ಟಿಯಿಂದ ಈ ಪರೀಕ್ಷಾ ಪ್ರಯೋಗ ನಡೆಸಲಾಗಿದೆ.

ಭೂಕಂಪ, ಸುನಾಮಿ, ಪ್ರವಾಹ ಸೇರಿದಂತೆ ಹಲವು ಗಂಭೀರ ಸ್ವರೂಪದ ಪರಿಸ್ಥಿತಿಯಲ್ಲಿ ಸರ್ಕಾರ ದೂರ ಸಂಪರ್ಕ ಇಲಾಖೆಯ ಮೂಲಕ ಈ ರೀತಿಯ ಸಂದೇಶಗಳನ್ನು ಕಳುಹಿಸುತ್ತದೆ. ಈ ಸಂದೇಶದ ಮೂಲಕ ಜನರು ಎಚ್ಚೆತ್ತುಕೊಳ್ಳಲು ಅನುಕೂಲವಾಗುತ್ತದೆ. ಇದರ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ದೂರ ಸಂಪರ್ಕ ಇಲಾಖೆಯು ಪರೀಕ್ಷಾರ್ಥವಾಗಿ ಸೆಲ್ ಬ್ರಾಡ್ ಕಾಸ್ಟ್ ಅಲರ್ಟ್ ಅನ್ನು ಇಂದು ಕಳುಹಿಸಿದೆ.

ಭಾರತ ಸರ್ಕಾರದ ದೂರಸಂಪರ್ಕ ಇಲಾಖೆಯು ಸೆಲ್ ಬ್ರಾಡ್ ಕಾಸ್ಟಿಂಗ್ ಸಿಸ್ಟಂ ಮೂಲಕ ಕಳುಹಿಸಿದ ಮಾದರಿ ಪರೀಕ್ಷಾ ಸಂದೇಶವಿದು.

ತುರ್ತು ಎಚ್ಚರಿಕೆ ವ್ಯವಸ್ಥೆಯನ್ನು ಪರೀಕ್ಷಿಸಲು ದೂರ ಸಂಪರ್ಕ ಇಲಾಖೆ ಎಲ್ಲಾ ಮೊಬೈಲ್‌ಗಳಿಗೆ ಈ ಸಂದೇಶವನ್ನು ರವಾನಿಸಿತು.

ಸಾರ್ವಜನಿಕ ಸುರಕ್ಷತೆ ಹೆಚ್ಚಿಸಿ, ತುರ್ತು ಸಂದರ್ಭಗಳಲ್ಲಿ ಯಾವ ರೀತಿ ಎಚ್ಚರಿಕೆಯನ್ನು ಜನರಲ್ಲಿ ಜಾಗೃತಗೊಳಿಸಲು ದೂರ ಸಂಪರ್ಕ ಇಲಾಖೆಯು ಪರೀಕ್ಷಾರ್ಥ ಈ ಮೆಸೇಜ್ ಕಳುಹಿಸಿತ್ತು. ಈ ರೀತಿಯ ಮೆಸೇಜ್ ಬರುತ್ತದೆ ಎಂದು ದೂರ ಸಂಪರ್ಕ ಇಲಾಖೆಯು ಕಳೆದ ಮೂರು ದಿನಗಳಿಂದ ಹಲವು ರೀತಿಯ ಮಾಧ್ಯಮಗಳ ಮೂಲಕ ಮಾಹಿತಿ ನೀಡಿತ್ತು. ಆದರೆ ಈ ಮಾಹಿತಿ ಬಹಳಷ್ಟು ಜನರ ಅರಿವಿಗೆ ಬಾರದ ಕಾರಣ ಈ ಸಂದೇಶ ಬಂದ ಕ್ಷಣದಲ್ಲಿ ಆತಂಕಕ್ಕೀಡಾಗಿದ್ದರು.

ಇಸ್ರೇಲ್ ಹಾಗೂ ಪ್ಯಾಲೆಸ್ತೇನ್ ಯುದ್ಧದ ರಣಕಹಳೆ ಮೊಳಗಿದಾಗ ಬಂದ ಸೈರನ್‌ನಂತೆ ಬೀಪ್ ಸೌಂಡ್ ಬಂದಿತು. ಕೂಡಲೇ ಮೊಬೈಲ್ ತೆರೆದು ನೋಡಿದರೆ ಅದರಲ್ಲಿ ಎಮರ್ಜೆನ್ಸಿ ಅಲರ್ಟ್ ಎಂದು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸಂದೇಶವಿತ್ತು. ಅಲ್ಲಿರುವ ವಿಚಾರ ಓದಿದಾಗ ಗಾಬರಿಯಲ್ಲಿ ಕೆಲವರಿಗೆ ಏನು ಅರ್ಥವಾಗದ ಸ್ಥಿತಿ ನಿರ್ಮಾಣವಾಗಿತ್ತು. ಮೊಬೈಲ್ ಬೀಪ್ ಸೌಂಡ್ ಮಾಡುತ್ತಲೇ ಇತ್ತು. ಸಂದೇಶದಲ್ಲಿರುವ ಓಕೆ ಒತ್ತಬೇಕೇ ಬೇಡವೇ, ಒತ್ತಿದರೆ ಏನಾದರೂ ತೊಂದರೆ ಆಗುವುದೇ ಎಂಬ ಗೊಂದಲವೂ ಕಾಡಿತು. ತರುವಾಯ ಸಾವಕಾಶದಿಂದ ಸಂದೇಶ ಓದಿದಾಗ ದೂರ ಸಂಪರ್ಕ ಇಲಾಖೆಯವರು ಕಳುಹಿಸಿರುವ ಸಂದೇಶ ಎಂಬ ವಿಚಾರ ತಿಳಿಯಿತು. ಆದರೆ ಓದು ಬಾರದ ಬಹಳಷ್ಟು ಜನರು ಆತಂಕಕ್ಕೀಡಾಗಿದ್ದರು.

ಸಂದೇಶ ಹೀಗಿದೆ....

Emergency alert : Extreme

ಇದು ಭಾರತ ಸರ್ಕಾರದ ದೂರಸಂಪರ್ಕ ಇಲಾಖೆಯಿಂದ ಸೆಲ್ ಬ್ರಾಡ್ ಕಾಸ್ಟಿಂಗ್ ಸಿಸ್ಟಮ್ ಮೂಲಕ ಕಳುಹಿಸಲಾದ ಮಾದರಿ ಪರೀಕ್ಷಾ ಸಂದೇಶವಾಗಿದೆ. ನಿಮ್ಮ ಕಡೆಯಿಂದ ಯಾವುದೇ ಕ್ರಿಯೆಯ ಅಗತ್ಯವಿಲ್ಲದ ಕಾರಣ ದಯವಿಟ್ಟು ಈ ಸಂದೇಶವನ್ನು ನಿರ್ಲಕ್ಷಿಸಿ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಜಾರಿಗೊಳಿಸುತ್ತಿರುವ ಪ್ಯಾನ್-ಇಂಡಿಯಾ ತುರ್ತು ಎಚ್ಚರಿಕೆ ವ್ಯವಸ್ಥೆಯನ್ನು ಪರೀಕ್ಷಿಸಲು ಈ ಸಂದೇಶವನ್ನು ಕಳುಹಿಸಲಾಗಿದೆ. ಇದು ಸಾರ್ವಜನಿಕ ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ತುರ್ತು ಸಂದರ್ಭಗಳಲ್ಲಿ ಸಕಾಲಿಕ ಎಚ್ಚರಿಕೆಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಶತಮಾನೋತ್ಸವ ಆಚರಣೆ: ಮೈಸೂರು ಮೆಡಿಕಲ್ ಕಾಲೇಜು ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪನೆ

ಸಂಸ್ಥೆಯ 1962ನೇ ತಂಡದ ವಿದ್ಯಾರ್ಥಿಗಳಿಂದ ಸ್ತುತ್ಯಾರ್ಹ ಕಾರ್ಯ, ಪೀಠ ನಿರ್ಮಾಣಕ್ಕೆ ಗುದ್ದಲಿ ಪೂಜೆ, ನವೆಂಬರ್‌ನಲ್ಲಿ ಪ್ರತಿಮೆ ಅನಾವರಣ



ರೂಪುಗೊಳ್ಳುತ್ತಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ



ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠ ನಿರ್ಮಾಣಕ್ಕೆ ಗುದ್ದಲಿ ಪೂಜೆ ನಡೆಸಿದ ಮೈಸೂರು ಮೆಡಿಕಲ್ ಕಾಲೇಜು ವೈದ್ಯರು.

ಮೈಸೂರು, ಅ.12(ಆರ್‌ಕೆ)–ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC & RI) ಆವರಣದಲ್ಲಿ ಇದರ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪಿಸಲು ಹಳೇ ವಿದ್ಯಾರ್ಥಿಗಳು ಮುಂದಾಗಿದ್ದಾರೆ.

ಸಂಸ್ಥೆಯ 1962ನೇ ತಂಡದ ಹಳೇ ವಿದ್ಯಾರ್ಥಿಗಳೇ ಪ್ರಾಯೋಜಕತ್ವ ನೀಡಿ ಕಾಲೇಜಿನ ಆವರಣದ ಎರಡು ಗೇಟ್‌ಗಳ ನಡುವೆ ಕೆ.ಆರ್.ಆಸ್ಪತ್ರೆ ಇಂದಿರಾ ಕ್ಯಾಂಟಿನ್ ಎದುರು ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪಿಸಲು ಗುರುವಾರ ಪೀಠ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ, ಸಂಸ್ಥೆಯ 1962ರ ತಂಡದ ವಿದ್ಯಾರ್ಥಿಗಳಾದ ವೈದ್ಯ ಡಾ.ವಿ.ಲಕ್ಷ್ಮೀನಾರಾಯಣ, ಪ್ಲಾಸ್ಟಿಕ್ ಸರ್ಜನ್ ಡಾ.ಉದಯ ಶಂಕರ್, ಸರ್ಜನ್ ಡಾ.ದಿನೇಶ್, ತಜ್ಞ ಹಿರಿಯ ವೈದ್ಯರಾದ ಡಾ.ಸಿ.ಡಿ.ಶ್ರೀನಿವಾಸ ಮೂರ್ತಿ, ಡಾ.ಸಿ.ಜಿ.ನರಸಿಂಹನ್, ಡಾ.ಆಶಾ ಶೇಖರ್ ಸೇರಿದಂತೆ ಹಲವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪ್ರತಿಮೆಯನ್ನು ಕೋಲಾರದಲ್ಲಿ ಕೃಷ್ಣ ಶಿಲೆಯಿಂದ ರೂಪಿಸಲಾಗುತ್ತಿದ್ದು, ಅರ್ಧ ಅಡಿ ಬೇಸ್‌ನೊಂದಿಗೆ 7 ರಿಂದ 8 ಅಡಿ ಎತ್ತರವಿರಲಿದೆ. ಅದರಲ್ಲಿ ಕೃಷ್ಣರಾಜ ಒಡೆಯರ್ ಅವರ ಜನನ–ಮರಣದ ದಿನ, 'ರಾಜರ್ಷಿ' ಎಂದು ನಮೂದಿಸಲಾಗುತ್ತಿದೆ. ಒಂದೂವರೆ ಟನ್ ತೂಕ ವಿರುವ ಪ್ರತಿಮೆಯು ಶಿಲ್ಪಿ ಜಗನ್ನಾಥ್ ಆಚಾರ್ಯ ಅವರಿಂದ ಸಿದ್ಧಗೊಳ್ಳುತ್ತಿದೆ.

ಪೀಠವು 6X60 ಅಡಿ ವಿಸ್ತಾರ ಹಾಗೂ 2 ಅಡಿ ಎತ್ತರದಲ್ಲಿ ನಿರ್ಮಾಣವಾಗಲಿದ್ದು, ಪ್ರಜೆಗಳಿಗೆ ಉಚಿತ ಆರೋಗ್ಯ ಸೇವೆ ಒದಗಿಸಲೆಂದು ಕೆ.ಆರ್., ಚೆಲುವಾಂಬ, ಪಿಕೆಟಿಬಿಯಂತಹ ಆಸ್ಪತ್ರೆಗಳನ್ನು ನಿರ್ಮಿಸಿ ವೈದ್ಯಕೀಯ ಪದವಿ ನೀಡುವ ಸಲುವಾಗಿ ಮೈಸೂರು ಮೆಡಿಕಲ್ ಕಾಲೇಜು ಸ್ಥಾಪಿಸಿದ ನಾಲ್ವಡಿ ಅವರ ಸ್ಮರಣೆಗಾಗಿ ಕಾಲೇಜಿನ ಹಳೇ ವಿದ್ಯಾರ್ಥಿಗಳು ಸಂಸ್ಥೆಯ ಶತಮಾನೋತ್ಸವ ಆಚರಣೆ ಸಂದರ್ಭ ಪ್ರತಿಮೆ ನಿರ್ಮಿಸುತ್ತಿರುವುದು ಪ್ರಶಂಸನೀಯವಾಗಿದೆ.

ಕಾಲೇಜು ಕಟ್ಟಡದ ಮುಂಭಾಗವೇ ಒಡೆಯರ್ ಪ್ರತಿಮೆ ನಿರ್ಮಿಸಲುದ್ದೇಶಿಸಲಾಗಿತ್ತಾದರೂ, ಅಲ್ಲಿ ಈಗಾಗಲೇ ಇರುವ ಕಾರಂಜಿ, ಅಶೋಕ ಸ್ತಂಭಕ್ಕೆ ಅಡ್ಡಿಯಾಗುವುದರಿಂದ ಕಾಲೇಜಿನ ಆವರಣದ ಎರಡೂ ಗೇಟುಗಳ ನಡುವೆ ಉದ್ಯಾನದಲ್ಲಿ ಕೆ.ಆರ್.ಆಸ್ಪತ್ರೆಗಭಿಮುಖವಾಗಿ ಸ್ಥಾಪಿಸಲು ನಿರ್ಧರಿಸಲಾಯಿತು. ನವೆಂಬರ್ ಮಾಹೆಯಲ್ಲಿ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರಿಂದ ಕೃಷ್ಣರಾಜ ಒಡೆಯರ್ ಪ್ರತಿಮೆ ಅನಾವರಣಗೊಳಿಸಲು ಹಳೆ ವಿದ್ಯಾರ್ಥಿಗಳು ಉದ್ದೇಶಿಸಿದ್ದು, ಈ ಕಾರ್ಯ ನೆರವೇರಿಸಲು ಪ್ರಮೋದಾದೇವಿ ಅವರು ಸಮ್ಮತಿಸಿದ್ದಾರೆ ಎನ್ನಲಾಗಿದೆ.



ಮೈಸೂರು ರೇಸ್ ಕ್ಲಬ್ ಅಧ್ಯಕ್ಷರಾಗಿ ಆಯ್ಕೆಯಾದ ನಿವೃತ್ತ ಕೆಎಎಸ್ ಅಧಿಕಾರಿ ಕೆ.ಎಂ.ಚಂದ್ರೇಗೌಡರು ಹಾಗೂ ಇತರರನ್ನು ಡಿಸಿ ಡಾ.ರಾಜೇಂದ್ರ ಅವರ ಸಮ್ಮುಖದಲ್ಲಿ ಭೈರವ ಗ್ರೂಪ್ ಮಾದೇವ, ಎಸ್.ಎಂ.ಕೃಷ್ಣ ಬಳಗದ ವಿಕ್ರಾಂತ್ ಪಿ.ದೇವೇಗೌಡ, ಶ್ಯಾಮಲಾ ಗ್ರೂಪ್‌ನ ಆನಂದ್, ನಾಗೇಂದ್ರ, ಅಭಿಷೇಕ್, ಮೋಹನ್, ಶಂಕರ್, ವಿಜಿ ಅಭಿನಂದಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡ ಗೋಕುಲ್ ಗೋವರ್ಧನ್ ಅವರನ್ನು ನಗರಪಾಲಿಕೆ ಮಾಜಿ ಸದಸ್ಯ, ಪಿಜಿ ಜನಸ್ಪಂದನ ಫೌಂಡೇಷನ್ ಅಧ್ಯಕ್ಷ ಪ್ರಶಾಂತ್‌ಗೌಡ ಅಭಿನಂದಿಸಿದರು. ಈ ವೇಳೆ ಕೃಷ್ಣಾನಂದ ಗೋಗಿರಿ ಸ್ವಾಮೀಜಿ, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಚಾಮರಾಜ ಕ್ಷೇತ್ರ ಬಿಜೆಪಿ ಅಧ್ಯಕ್ಷ ಸೋಮಶೇಖರ್, ಮುಖಂಡರಾದ ಹನೋಜ್ ಸರಸ್ವತಿ, ಪರಮೇಶ್‌ಗೌಡ, ಮಹೇಶ್ ಗರಡಿ, ಕಿರಣ್ ಜಯರಾಮೇಗೌಡ, ರಾಂಪ್ರಸಾದ್, ರಾಜೇಂದ್ರ, ಸುದರ್ಶನ್, ಪ್ರಮೋದ್, ಗುರುಪ್ರಸಾದ್, ಗುರುರಾಜ್‌ಶೆಟ್ಟಿ, ಪ್ರಶಾಂತ್, ನಿತಿನ್, ಸಚಿನ್, ಶ್ರೀನಿವಾಸ್, ಸಂಜಯ್‌ಗೌಡ, ಪ್ರಭು, ನಂದಕುಮಾರ್ ಇದ್ದರು.

ಗುತ್ತಿಗೆದಾರರ ಸಂಘದಿಂದ 40% ಕಮಿಷನ್ ಆರೋಪ

ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ನೇತೃತ್ವದ ವಿಚಾರಣಾ ಆಯೋಗ ರಚನೆ

- 26–7–2019ರಿಂದ 31–3–2023ರವರೆಗಿನ ಕಾಮಗಾರಿಗಳ ತನಿಖೆ
- ವಿವಿಧ ಇಲಾಖೆಯಲ್ಲಿ ನಡೆದಿರುವಂತಹ ಕಾಮಗಾರಿ ವಿಚಾರಣೆ

ಬೆಂಗಳೂರು,ಅ.12(ಕೆಎಂಶಿ)– ರಾಜ್ಯ ಗುತ್ತಿಗೆದಾರರ ಸಂಘ ಮಾಡಿದ್ದ ಶೇ.40ರಷ್ಟು ಕಮಿಷನ್ ಆರೋಪದ ಬಗ್ಗೆ ತನಿಖೆ ನಡೆಸಲು ಸರ್ಕಾರವು ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ನೇತೃತ್ವದಲ್ಲಿ ವಿಚಾರಣಾ ಆಯೋಗ ನೇಮಿಸಿದೆ.

26.07.2019ರಿಂದ 31.03.2023ರ ಅವಧಿಯಲ್ಲಿ ನಡೆದಿರುವ ಕಾಮಗಾರಿಗಳನ್ನು ಆಯೋಗದ ತನಿಖೆಗೆ ಒಳಪಡಿಸಲಿದೆ. ಕರ್ನಾಟಕ ಸ್ಟೇಟ್ ಕಂಟ್ರಾಕ್ಟರ್ ಅಸೋಸಿಯೇಷನ್ ಸಲ್ಲಿಸಿರುವ ಮನವಿಯಲ್ಲಿನ ಆರೋಪಗಳ ಕುರಿತು ತನಿಖೆಯನ್ನು ನಡೆಸಲು ಅನುವಾಗುವಂತೆ Commission of Inquiry Act 1952 (Central Act LX of 1952) ರ ನಿಯಮ 3ರ ಉಪ–ನಿಯಮ 1ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಸರ್ಕಾರವು ಈ ಆಯೋಗವನ್ನು ನೇಮಿಸಿದೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷರಾದ ಡಿ.ಕೆಂಪಣ್ಣ ಪ್ರಧಾನಮಂತ್ರಿಗಳಿಗೆ ಹಾಗೂ ನಿಕಟಪೂರ್ವ ಮುಖ್ಯಮಂತ್ರಿಗಳಿಗೆ ಮನವಿ ಪತ್ರಗಳನ್ನು ಸಲ್ಲಿಸಿ ರಾಜ್ಯದಲ್ಲಿ ಪ್ರಮುಖ ಕಾಮಗಾರಿಗಳನ್ನು ನಡೆಸುವ ಇಲಾಖೆಗಳಲ್ಲಿ ನಡೆಯುತ್ತಿರುವ ಪ್ಯಾಕೇಜ್ ಪದ್ಧತಿ, ಬಾಕಿ ಮೊತ್ತ ಬಿಡುಗಡೆ ಮತ್ತು ಟೆಂಡರ್ ಪ್ರಕ್ರಿಯೆ, ಇತ್ಯಾದಿಗಳಲ್ಲಿ 40%ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಲಂಚಗುಳಿತನ, ಭ್ರಷ್ಟಾಚಾರ ನಡೆಯುತ್ತಿರುವುದಾಗಿ ವಿವರಿಸಿದ್ದರು.

ಈ ಹಿನ್ನೆಲೆಯಲ್ಲಿ ತನಿಖಾ ಆಯೋಗವು ಹೆಚ್ಚಿನ ಪ್ರಮಾಣದಲ್ಲಿ ಕಾಮಗಾರಿಗಳನ್ನು ನಡೆಸುವ ಇಲಾಖೆಗಳಾದ ಲೋಕೋಪಯೋಗಿ, ಜಲ ಸಂಪನ್ಮೂಲ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಸಣ್ಣ ನೀರಾವರಿ ಇಲಾಖೆಗಳಲ್ಲಿ ಟೆಂಡರ್ ಪ್ರಕ್ರಿಯೆ, ಪ್ಯಾಕೇಜ್ ಪದ್ಧತಿ, ಪುನರ್‌ಅಂದಾಜು (Revised Estimate), ಬಾಕಿ ಮೊತ್ತ ಬಿಡುಗಡೆ ಇತ್ಯಾದಿ ವಿಷಯಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ಸ್ಥಳ ಹಾಗೂ ದಾಖಲಾತಿಗಳ ಪರಿಶೀಲನೆಯೊಂದಿಗೆ ವಿವರವಾದ ತನಿಖೆ ನಡೆಸಿ, ಲೋಪ–ದೋಷಗಳ ಮಾಹಿತಿ ಹಾಗೂ ತತ್ಸಂಬಂಧಿತ ಆರೋಪಿತರ ಸ್ಪಷ್ಟ ಗುರುತಿಸುವಿಕೆಯ ಸಹಿತ ಪರಿಪೂರ್ಣ ತನಿಖೆ ನಡೆಸಲಾಗುವುದು. ಆಯೋಗವು ಮೇಲಿನ ಕಾರ್ಯ ವ್ಯಾಪ್ತಿಯ ಜೊತೆಗೆ ಅಧ್ಯಕ್ಷರು, ಕರ್ನಾಟಕ ಸ್ಟೇಟ್ ಕಂಟ್ರಾಕ್ಟರ್ ಅಸೋಸಿಯೇಷನ್ ಇವರ ಮನವಿಗಳು, ದೂರು ಅರ್ಜಿಗಳಲ್ಲಿನ ಎಲ್ಲಾ ಅಂಶಗಳನ್ನೂ ಸವಿವರವಾಗಿ ತನಿಖಾ ವ್ಯಾಪ್ತಿಯಲ್ಲಿ ಪರಿಶೀಲಿಸಲಾಗುವುದು.

ಅಲ್ಲದೆ ಯೋಜನೆ, ಕಾಮಗಾರಿಗಳಿಗೆ ನಿಯಮಾನುಸಾರ ಆಡಳಿತಾತ್ಮಕ ಅನುಮೋದನೆ, ಅನುಷ್ಠಾನಗೊಳಿಸಲಾದ ಕಾಮಗಾರಿ, ಯೋಜನೆಗಳ ಗುಣಮಟ್ಟ, ಕಾಮಗಾರಿಗಳ ಅಂದಾಜಿನಲ್ಲಿನ ಪರಿಮಾಣ ವಾಸ್ತವಿಕವಾಗಿದೆಯೇ ಅಥವಾ ಕೃತಕವಾಗಿ ಹೆಚ್ಚಿಸಲಾಗಿದೆಯೇ. ಹೆಚ್ಚಿಸಿದ್ದಲ್ಲಿ, ಅವುಗಳ ಪ್ರಮಾಣ ಮತ್ತು ಹಣಕಾಸಿನ ಬದ್ಧತೆಯ ಜೊತೆಗೆ ಯಾವ ಹಂತದಲ್ಲಿ ಹೆಚ್ಚಿಸಲಾಗಿದೆ ಎಂಬುದನ್ನು ಪರೀಕ್ಷಿಸುವುದು.

ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಉಂಟಾಗಿರುವ ಹೆಚ್ಚುವರಿ ವ್ಯತ್ಯಾಸದ ಅನಿವಾರ್ಯತೆ ಮತ್ತು ಅಗತ್ಯತೆ; ಅನಿವಾರ್ಯವಾಗಿದ್ದಲ್ಲಿ, ಮೂಲ ಅಂದಾಜಿನಲ್ಲಿ ಕೈಬಿಡಲು ಕಾರಣಗಳು ಹಾಗೂ ಇವುಗಳಿಗೆ ಸಕ್ಷಮ ಪ್ರಾಧಿಕಾರವು ಅನುಮೋದನೆ ನೀಡಿರುತ್ತದೆ. ಯಾವುದಾದರೂ ಕಾಮಗಾರಿಗಳನ್ನು ನಿರ್ವಹಿಸದೆಯೇ ಬಿಲ್ಲು ಪಾವತಿ ಮಾಡಲಾಗಿದೆಯೇ ಅಥವಾ ಅನುಷ್ಠಾನವಾದ ಕಾಮಗಾರಿಗಳ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಬಿಲ್ಲು ಪಾವತಿಸಲಾಗಿದೆಯೇ.

ಈ ಕಾಮಗಾರಿಗಳ ಟೆಂಡರ್‌ಗಳನ್ನು ಕರೆಯುವಾಗ ಕೆಲವೇ ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಹಾಗೂ ಉಳಿದ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸದಂತೆ ಷರತ್ತುಗಳನ್ನು ರೂಪಿಸಲಾಗಿತ್ತೇ ಎಂಬ ಅಂಶಗಳು, ಕಾಮಗಾರಿ ಪ್ರಾರಂಭಿಸುವ ಮೊದಲು ಸಾಮಗ್ರಿಗಳು, ಉಪಕರಣಗಳು ಇತ್ಯಾದಿಗಳ ಗುಣಮಟ್ಟ ಪರೀಕ್ಷೆಯನ್ನು ನಿರ್ದಿಷ್ಟಪಡಿಸಿ ಅಧಿಕೃತ ಏಜೆನ್ಸಿಗಳಿಂದ ಮಾಡಿಸಲಾಗಿದೆಯೇ, ಒಟ್ಟಾರೆ ಕಾಮಗಾರಿಗಳ ಕುರಿತಾದ ಟೆಂಡರ್ ಪ್ರಕ್ರಿಯೆ ಮತ್ತು ಅನುಷ್ಠಾನ ಪ್ರಕ್ರಿಯೆಗಳಲ್ಲಿ ಉಂಟಾಗಿರಬಹುದಾದ ಇತರೆ ಯಾವುದಾದರೂ ಲೋಪದೋಷಗಳು. ಪರಿಶೀಲನೆ ವೇಳೆ ಆಯೋಗದ ಗಮನಕ್ಕೆ ಬರುವ ಇನ್ನಾವುದೇ ಗಂಭೀರ ವಿಷಯಗಳನ್ನು ವಿಚಾರಣಾ ಆಯೋಗವು ಪರಾಮರ್ಶಿಸುವುದು.

ಸಾರ್ವಜನಿಕರು ಯಾವುದೇ ರೀತಿಯ ಸಲಹೆ, ಆಕ್ಷೇಪಣೆ, ಅಹವಾಲು, ದಾಖಲೆಗಳು, ಹೇಳಿಕೆಗಳಿದ್ದಲ್ಲಿ ನ.10ರೊಳಗೆ ಕಚೇರಿ ವೇಳೆಯಲ್ಲಿ ವಿಳಾಸ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್, ವಿಚಾರಣಾ ಆಯೋಗ, 3ನೇ ಮಹಡಿ, ಲೋಕೋಪಯೋಗಿ ಇಲಾಖೆ ಮುಖ್ಯಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560001ಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅಥವಾ ಇ–ಮೇಲ್ justicenmda sinquir ycommission@ gmail.comಗೆ ಸಲ್ಲಿಸುವುದು.

ನಗರಪಾಲಿಕೆ ಅಧಿಕಾರಿಗಳ ಕಾರ್ಯಾಚರಣೆ

10 ಲಕ್ಷ ರೂ. ಮೌಲ್ಯದ 9 ಟನ್ ಪ್ಲಾಸ್ಟಿಕ್ ಪತ್ತೆ



ಮೈಸೂರು, ಅ.12(ಆರ್‌ಕೆ)–ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ ಮೈಸೂರು ನಗರಪಾಲಿಕೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ನಿಷೇಧಿತ ಸುಮಾರು 10 ಲಕ್ಷ ರೂ. ಮೌಲ್ಯದ 9 ಟನ್ ಪ್ಲಾಸ್ಟಿಕ್ ಅನ್ನು ಪತ್ತೆ ಮಾಡಿ ವಶಪಡಿಸಿಕೊಂಡಿದ್ದಾರೆ. ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್‌ರೊಂದಿಗೆ ಸಂತೆಪೇಟೆಯ ಅಂಗಡಿಗಳ ಗೋದಾಮಿನ ಮೇಲೆ ದಾಳಿ ನಡೆಸಿದ ಅಧಿಕಾರಿಗಳು, ಯಶಸ್ವಿ ಭಂಡಾರ, ರಾಜೇಂದ್ರ ಟ್ರೇಡರ್ಸ್, ಭಾಗ್ಯಲಕ್ಷ್ಮಿ ಎಂಟರ್ ಪ್ರೈಸಸ್, ರಮೇಶ್ ಏಜೆನ್ಸೀಸ್ ಹಾಗೂ ಇನ್ನಿತರ ಅಂಗಡಿಗಳ ಮಾಲೀಕರು ಅಕ್ರಮವಾಗಿ ದಾಸ್ತಾನು ಮಾಡಿದ್ದ ಪ್ಲಾಸ್ಟಿಕ್ ಅನ್ನು ವಶಕ್ಕೆ ಪಡೆದರು.

ಪರಿಸರದ ಮೇಲೆ ಪರಿಣಾಮ ಬೀರುವ ಪ್ಲಾಸ್ಟಿಕ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳನ್ನು ತಂದು ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದರು ಎಂಬುದು ದೃಢಪಟ್ಟ ಹಿನ್ನೆಲೆಯಲ್ಲಿ ಕರ್ನಾಟಕ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಸ್ಥಳ ಮಹಜರು ನಡೆಸಿ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಗ್ಗೆ 6.45ರಿಂದ ಸಂಜೆ 4 ಗಂಟೆವರೆಗೆ ನಡೆದ ಕಾರ್ಯಾಚರಣೆಯಲ್ಲಿ ಪತ್ತೆಯಾದ ಪ್ಲಾಸ್ಟಿಕ್‌ಗಳನ್ನು ವಿದ್ಯಾರಣ್ಯಪುರಂನ ಎಕ್ಸೆಲ್ ಪ್ಲಾಂಟ್‌ನಲ್ಲಿರುವ ಜಗನ್ನಾಥ್ ಟೆಕ್ ಪ್ರೈವೇಟ್ ಲಿಮಿಟೆಡ್ ಮೂಲಕ ಟೈಲ್ಸ್‌ನಂತಹ ಕಟ್ಟಡ ಸಾಮಗ್ರಿ ತಯಾರಿಸಲು ಬಳಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸಂದರ್ಭ ಮಾತನಾಡಿದ ಶಾಸಕ ಹರೀಶ್‌ಗೌಡ, ಪ್ಲಾಸ್ಟಿಕ್ ಅನ್ನು ಸಾಗಣೆ ಹಂತದಲ್ಲೇ ಚೆಕ್‌ಪೋಸ್ಟ್‌ಗಳಲ್ಲಿ ತಡೆದು ದಂಡ ವಿಧಿಸಿ, ಜಪ್ತಿ ಮಾಡಬೇಕು. ಆಗಿಂದಾಗ್ಗೆ ಅಂಗಡಿ, ಗೋದಾಮುಗಳ ಮೇಲೆ ದಾಳಿ ನಡೆಸಿ ಮಾರಾಟ ನಿಯಂತ್ರಿಸುವ ಮೂಲಕ ಪ್ಲಾಸ್ಟಿಕ್ ಮುಕ್ತ ಮೈಸೂರು ಮಾಡಬೇಕೆಂದೂ ಸಲಹೆ ನೀಡಿದರು.

ದಸರಾ ಸಂಗೀತ ಕಾರ್ಯಕ್ರಮಗಳಲ್ಲಿ ಕರೋಕೆ ನಿಷೇಧಿಸುವಂತೆ ಆಗ್ರಹಿಸಿ ಕಲಾವಿದರ ಪ್ರತಿಭಟನೆ



ಮೈಸೂರು,ಅ.12(ಎಂಟಿವೈ)– ದಸರಾ ಮಹೋತ್ಸವದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜರುಗುವ ಸಂಗೀತ ಕಾರ್ಯಕ್ರಮಗಳಲ್ಲಿ ಕರೋಕೆ ನಿಷೇಧಿಸುವಂತೆ ಒತ್ತಾಯಿಸಿ ಮೈಸೂರು ಕಲಾವಿದರ ಅಸೋಸಿಯೇಷನ್, ಕಲಾ ಬಳಗಗಳ ಒಕ್ಕೂಟದ ಕಲಾವಿದರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿನ ನೂತನ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಬಳಿ ಗುರುವಾರ ಪ್ರತಿಭಟನೆ ನಡೆಸಿದ ಕಲಾವಿದರು, ದಸರಾ ಸಾಂಸ್ಕೃತಿಕ ಪರಂಪರೆ ಹೊಂದಿದೆ. ಆದರೆ, ಅನೇಕ ವೇದಿಕೆಗಳಲ್ಲಿ ಕರೋಕೆ ಬಳಸುತ್ತಿದ್ದಾರೆ. ಯುವ ದಸರಾ, ಯುವ ಸಂಭ್ರಮ, ಅರಮನೆ ವೇದಿಕೆ ಮತ್ತು ಇನ್ನಿತರ ಮುಖ್ಯ ವೇದಿಕೆಗಳಲ್ಲಿಯೇ ಕರೋಕೆ ಬಳಸುತ್ತಿರುವುದು ಖಂಡನೀಯ. ಕರೋಕೆ ಬಳಕೆ ಮೈಸೂರಿನ ಪಾರಂಪರಿಕ ಇತಿಹಾಸ ಹಾಳು ಮಾಡುತ್ತಿದೆ. ಮೈಸೂರು ಹಾಗೂ ದಸರಾಗೆ ಮಾಡುವ ಅತೀ ದೊಡ್ಡ ಕಳಂಕ ತಂದೊಡ್ಡಿದೆ. ಇದರೊಂದಿಗೆ ನೈಜ ಕಲಾವಿದರಿಗೆ ಅನ್ಯಾಯ ಮಾಡಿದಂತಾಗುತ್ತಿದೆ. ಅಲ್ಲದೆ ಮೈಸೂರಿನ ಪ್ರತಿಭೆಗಳಿಗೆ ಹಾಗೂ ಕಲಾವಿದರಿಗೆ ಅವಕಾಶ ನೀಡದೆ ಇರುವುದು ಖಂಡನೀಯ ಎಂದು ಕಿಡಿಕಾರಿದರು.

ನೂರಾರು ವರ್ಷಗಳಿಂದ ನಡೆಯುತ್ತಿರುವ ದಸರಾ ಕಾರ್ಯಕ್ರಮಗಳಲ್ಲಿ ಮೈಸೂರಿನ ಸ್ಥಳೀಯ ಕಲಾವಿದರಿಗೆ ಅವಕಾಶ ನೀಡದೇ ಇರುವುದು ಕಲಾವಿದರಿಗೆ ಮಾಡುತ್ತಿರುವ ಅತೀ ದೊಡ್ಡ ಅನ್ಯಾಯ. ಸರ್ಕಾರದ ವತಿಯಿಂದಲೇ ಕರೋಕೆ ರದ್ದು ಮಾಡಬೇಕು. ದಸರಾ ಕಾರ್ಯಕ್ರಮಗಳನ್ನು ಇವೆಂಟ್ ಮ್ಯಾನೇಜ್‌ಮೆಂಟ್‌ಗೆ ವಹಿಸಿರುವುದರಿಂದ ಕಲಾವಿದರು, ಧ್ವನಿವರ್ಧಕದವರಿಗೆ, ವೇದಿಕೆ ಸಿದ್ಧಪಡಿಸುವವರಿಗೆ ಇದು ಮಾರಕವಾಗಿದೆ. ಹೀಗಾಗಿ ದಸರಾ ಕಾರ್ಯಕ್ರಮಗಳಲ್ಲಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸುವ ಸಂಗೀತ ಕಾರ್ಯಕ್ರಮದಲ್ಲಿ ಕರೋಕೆ ನಿಷೇಧಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ಕಲಾವಿದರ ಅಸೋಸಿಯೇಷನ್ ಅಧ್ಯಕ್ಷ ರಘುನಾಥ್, ಪ್ರಧಾನ ಕಾರ್ಯದರ್ಶಿ ಗುರುದತ್, ಕಲಾವಿದರಾದ ಷಣ್ಮುಗ ಸಜ್ಜಾ, ರೋಷನ್ ಸೂರ್ಯ, ರಾಜೇಶ್ ಪಡಿಯಾರ್, ರವಿಕಿರಣ್, ಬಾಲಣ್ಣ, ಸೌಭಾಗ್ಯ ಪ್ರಭು, ವಿನ್ಸೆಂಟ್, ಪ್ರದೀಪ್ ಗಾಂಧಿನಗರ, ಪ್ರದೀಲ್ ಕಿಗ್ಗಾಲ್, ರಾಮಚಂದ್ರು, ಸಂತೋಷ್, ಜಗದೀಶ್, ನಾಗಲಿಂಗೇಶ್, ಪೃಥ್ವಿ, ರವಿಕುಮಾರ್, ಬಾಬು ಹಲವರು ಭಾಗವಹಿಸಿದ್ದರು.

ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಆಗ್ರಹಿಸಿ ಎಸ್‌ಡಿಪಿಐ ಪ್ರತಿಭಟನೆ



ಮೈಸೂರು, ಅ.12 (ಎಂಟಿವೈ)– ರಾಜ್ಯ ಸರ್ಕಾರ ಕಾಂತರಾಜು ಸಮಿತಿ ವರದಿ ಜಾರಿಗೊಳಿಸಿ, ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡುವಂತೆ ಆಗ್ರಹಿಸಿ ಎಸ್‌ಡಿಪಿಐ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಡಾ.ಅಂಬೇಡ್ಕರ್(ಎಫ್‌ಟಿಎಸ್) ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಎಸ್‌ಡಿಪಿಐ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ಕಾಂತರಾಜ್ ಅವರು ನೀಡಿರುವ ವರದಿಯನ್ನು ಜಾರಿಗೊಳಿಸಿ, ಮುಸ್ಲಿಂ ಸಮುದಾಯಕ್ಕೆ ನೀಡಿರುವ ಪ್ರವರ್ಗ 2ಬಿ ಇಂದ ಪ್ರತ್ಯೇಕ ಶೇ.8ರಷ್ಟು ಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಮುಸ್ಲಿಂ ಸಮುದಾಯಕ್ಕೆ ನೀಡಿದ್ದ ಯಾವುದೇ ಭರವಸೆಗಳನ್ನು ಈಡೇರಿಸದೆ ವಂಚಿಸಲು ಯತ್ನಿಸುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬರಲು ಮುಸ್ಲಿಂ ಮತ್ತು ದಲಿತ ಸಮುದಾಯ ಪ್ರಮುಖ ಕಾರಣ. ಚುನಾವಣೆ ವೇಳೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದ ಮೊದಲ ಕ್ಯಾಬಿನೆಟ್‌ನಲ್ಲೇ ಬಿಜೆಪಿ ರದ್ದುಪಡಿಸಿದ್ದ 2ಬಿ ಮೀಸಲಾತಿ ಪುನರ್ ಪ್ರತಿಷ್ಠಾಪನೆ ಮಾಡುವುದಾಗಿ ಭರವಸೆ ನೀಡಿದ್ದರು. ಈಗ 10 ಕ್ಯಾಬಿನೆಟ್ ಮೀಟಿಂಗ್ ನಡೆದಿದ್ದರೂ ಕಾಂತರಾಜ್ ವರದಿ ಬಗ್ಗೆ ಪ್ರಸ್ತಾಪಿಸುತ್ತಿಲ್ಲ. ಪ್ರಕರಣ ನ್ಯಾಯಾಲಯದಲ್ಲಿದೆ ಎಂದು ಸಬೂಬು ಹೇಳುತ್ತಿದ್ದಾರೆ ಎಂದು ಕಿಡಿಕಾರಿದರು.

ಒಂದು ವೇಳೆ ಕಾಂತರಾಜು ವರದಿ ಅಂಗೀಕರಿಸಿ ಸಮುದಾಯಗಳಿಗೆ ಅನುಕೂಲ ಮಾಡಿದ್ದಲ್ಲಿ ಮುಸ್ಲಿಂ ತುಷ್ಟೀಕರಣ ಎಂದು ಬಿಜೆಪಿ ಐಟಿ ಸೆಲ್ ಗುಲ್ಲೆಬ್ಬಿಸುತ್ತದೆ ಎಂಬ ಭಯ ಸಿಎಂ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಅವರಿಗೆ ಕಾಡುತ್ತಿದೆ. ಆದರೆ, ಜನ ಜಾಗೃತರಾಗಿದ್ದಾರೆ. ಕಳೆದ ಬಾರಿ ಕೋಮುವಾದಿ ಸರ್ಕಾರದಿಂದ ತೀವ್ರ ಅನ್ಯಾಯಕ್ಕೆ ಒಳಗಾಗಿದ್ದ ಮುಸ್ಲಿಂ ಮತ್ತು ದಲಿತ ಸಮುದಾಯ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿತ್ತು. ಬಿಹಾರದಲ್ಲಿ ಜಾತಿ ಗಣತಿ ವರದಿ ಪ್ರಕಟವಾಗಿದೆ. ಕಾಂಗ್ರೆಸ್ ಕೂಡ ತಾನು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಜಾತಿ ಗಣತಿ ಮಾಡಿಸುವುದಾಗಿ ಹೇಳಿದೆ. ಆದರೆ ರಾಜ್ಯದಲ್ಲಿ ಈಗಾಗಲೇ ವರದಿ ತಯಾರಾಗಿದೆ. ಇದನ್ನು ಅಂಗೀಕರಿಸಿ ತುಳಿತಕ್ಕೆ ಒಳಗಾದ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ದೇವನೂರು ಪುಟ್ಟನಂಜಯ್ಯ, ಹರಿಹರ ಆನಂದಸ್ವಾಮಿ, ಮೌಲಾನ ನೂರುದ್ದೀನ್, ರಫತ್ ಖಾನ್, ತನ್ವೀರ್ ಪಾಷ, ಅಲ್ತಾಫ್ ಅಹಮದ್, ಸ್ವಾಮಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಶುಕ್ರವಾರ 13 ಅಕ್ಟೋಬರ್ 2023

ಸರ್ಕಾರ ಕರ್ನಾಟಕ ಸಂಘಕ್ಕೆ ರಾಜ್ಯೋತ್ಸವ ಪ್ರಶಸ್ತಿ ನೀಡಲಿ

• ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ ಮನವಿ • ಕರ್ನಾಟಕ ಸಂಘ ಪ್ರಶಸ್ತಿಗಳು, ಪುರಸ್ಕೃತರು, ಕಾರ್ಯಕ್ರಮಗಳು ಪುಸ್ತಕ ಲೋಕಾರ್ಪಣೆ

ಮಂಡ್ಯ, ಅ.12– ಜಿಲ್ಲೆಯ ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಯಲ್ಲಿ ಕರ್ನಾಟಕ ಸಂಘ ಇಡೀ ರಾಜ್ಯಕ್ಕೆ ಮಾದರಿಯಾಗಿದ್ದು, ಸಾಂಸ್ಕೃತಿಕ ಕ್ಷೇತ್ರದ ಅಗ್ರಣ್ಯ ರೂವಾರಿಯಾಗಿರುವ ಕರ್ನಾಟಕ ಸಂಘಕ್ಕೆ ಈ ಬಾರಿ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಮನವಿ ಮಾಡಿದರು.

ನಗರದ ಕರ್ನಾಟಕ ಸಂಘದ ಆವರಣದಲ್ಲಿರುವ ಕೆವಿಎಸ್ ಸಭಾಂಗಣದಲ್ಲಿ ನಡೆದ ಲೇಖಕ ಲೋಕೇಶ್ ಚಂದಗಾಲು ರಚಿಸಿರುವ 'ಕರ್ನಾಟಕ ಸಂಘದ ಪ್ರಶಸ್ತಿಗಳು, ಪುರಸ್ಕೃತರು, ಕಾರ್ಯಕ್ರಮಗಳು' ಪುಸ್ತಕ ಬಿಡುಗಡೆ ಹಾಗೂ ಸಂಘದ ಖಜಾಂಚಿ ದಿ.ಪ್ರೊ.ಎನ್.ಎಸ್.ರಮೇಶ್ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

ಅಂದಿನ ಕಾಲದಲ್ಲೇ ಕರ್ನಾಟಕ ಸಂಘ ಕುವೆಂಪು ಅವರ 'ರಾಮಾಯಣ ದರ್ಶನಂ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಅವರ ಗ್ರಂಥವನ್ನು ಆನೆ ಮೇಲೆ ಮಂಡ್ಯದಲ್ಲಿ ಮೆರವಣಿಗೆ ಮಾಡಿತ್ತು. ಜೊತೆಗೆ ಕುವೆಂಪು ಅವರಿಗೆ ಬೆಳ್ಳಿ ಕರಂಡಕವನ್ನು ಉಡುಗೊರೆ ನೀಡಿತ್ತು. ಆ ಕರಂಡಕವನ್ನು ಕುವೆಂಪು ಅವರು ವಾಪಸ್ ಕರ್ನಾಟಕ ಸಂಘಕ್ಕೆ ಕೊಟ್ಟಿದ್ದರು. ಅಂದಿನಿಂದಲೂ ಕರ್ನಾಟಕ ಸಂಘ ರಾಜ್ಯದಲ್ಲಿ ಮಾದರಿ ಸಂಘವಾಗಿ ಬೆಳೆಯುತ್ತಾ ಬಂದಿದೆ ಎಂದು ಸ್ಮರಿಸಿದರು.

ಈವರೆಗೆ ಸುಮಾರು 30 ದತ್ತಿ ಪ್ರಶಸ್ತಿಗಳು ಇಲ್ಲಿ ಯಶಸ್ವಿಯಾಗಿ ನಡೆಯುತ್ತಾ ಬಂದಿದ್ದು, ನಾಡಿನ ಯಾವುದೇ ಮೂಲೆಗೆ ಹೋದರೂ ಕರ್ನಾಟಕ ಸಂಘದ ಬಗ್ಗೆ ಮಾತನಾಡುತ್ತಾರೆ. ಮಂಡ್ಯದಲ್ಲಿ ಸಂಘದ ಕಟ್ಟಡ ಎಷ್ಟೇ ಭವ್ಯವಾಗಿ ನಿರ್ಮಾಣವಾಗುತ್ತಿದ್ದರೂ, ಜಿಲ್ಲೆಯ ಸಾಹಿತ್ಯಾಸಕ್ತರ ತಲೆಯಲ್ಲಿ ಹಳೇ ಸಂಘದ ಕಟ್ಟಡವೇ ಇದೆ. ಈ ಸಂಘದ ಎಲ್ಲಾ ಸಾಧನೆಗೆ ನಾಂದಿ ಹಾಡಿದವರು ಸಂಘದ ಮಾಜಿ ಖಜಾಂಚಿ ದಿ.ಡಾ.ಎನ್.ಎಸ್.ರಮೇಶ್. ಅವರು ಕರ್ನಾಟಕ ಸಂಘದಲ್ಲಿ ತೊಡಗಿಸಿಕೊಳ್ಳದಿದ್ದರೆ ಮಂಡ್ಯದ ಕರ್ನಾಟಕ ಸಂಘ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ ಎಂದು ಶ್ಲಾಘಿಸಿದರು.



ಕರ್ನಾಟಕ ಸಂಘ ಚಟುವಟಿಕೆಯ ಕೇಂದ್ರವಾಗಲು ರಮೇಶ್ ಅವರೇ ಕಾರಣವಾಗಿದ್ದು, ಸಾಂಸ್ಕೃತಿಕ ಸಂಘಟನೆಯೊಂದು ಮೌಲ್ಯಯುತ, ಶಕ್ತಿಯುತವಾಗಿ ಬೆಳೆಯಲು ರಮೇಶ್‌ರಂತಹ ವ್ಯಕ್ತಿಗಳ ಅವಶ್ಯಕತೆ ಇದೆ ಎಂದು ಅಭಿಪ್ರಾಯಿಸಿದರು.

ಲೋಕೇಶ್ ಚಂದಗಾಲು ರಚಿಸಿರುವ ಕರ್ನಾಟಕ ಸಂಘದ ಪ್ರಶಸ್ತಿಗಳು, ಪುರಸ್ಕೃತರು, ಕಾರ್ಯಕ್ರಮಗಳು ಎಂಬ ಪುಸ್ತಕ ಉತ್ತಮವಾಗಿ ರಚನೆಯಾಗಿದೆ. ಲೇಖಕ ಲೋಕೇಶ್ ಕರ್ನಾಟಕ ಸಂಘವನ್ನು ಬಹಳ ಹತ್ತಿರದಿಂದ ನೋಡಿದ್ದು, ಸಂಘದ ಹುಟ್ಟು, ಬೆಳವಣಿಗೆ, ಏಳ್ಗೆ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಈ ಸಂಘದ ಪಾತ್ರವನ್ನು ಬಹಳ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ ಎಂದು ಬಣ್ಣಿಸಿದರು.

ಮೂಲತಃ ಮಂಡ್ಯ ತಾಲೂಕಿನ ಚಂದಗಾಲು ಗ್ರಾಮದ ಲೋಕೇಶ್ ಕನ್ನಡ ಪ್ರಾಧ್ಯಾಪಕರಾಗಿ, ಸಾಹಿತ್ಯಾಭಿರುಚಿ ಉಳ್ಳವರಾಗಿ, ರಾಜ್ಯದ ಸಾವಿರಾರು ಖಾಸಗಿ ಶಿಕ್ಷಕರು ಸರ್ಕಾರದ ಸಹಾಯ ಧನಕ್ಕೆ ಒಳಪಡಲು ನಡೆಸಿದ ಹೋರಾಟದಲ್ಲಿ ಪಾಲ್ಗೊಂಡು ಒಳ್ಳೆಯ ಹೆಸರು ಮಾಡಿದ್ದು, ಪ್ರೊ.ಬಿ.ಜಯಪ್ರಕಾಶ್‌ಗೌಡರ ಗರಡಿಯಲ್ಲಿ ಪಳಗಿ ಕರ್ನಾಟಕ ಸಂಘದ ನಿರ್ದೇಶಕ, ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ಜಿಲ್ಲೆಯ ಅನೇಕ ಸಾಹಿತಿಗಳ ಮಾರ್ಗದರ್ಶನದಲ್ಲಿ ಪ್ರಸ್ತುತ ಉತ್ತಮ ಲೇಖಕರಾಗಿ ಬೆಳೆದಿದ್ದಾರೆ ಎಂದು ಶ್ಲಾಘಿಸಿದರು.

ವೇದಿಕೆಯಲ್ಲಿ ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ.ಭೈರಮಂಗಲ ರಾಮೇಗೌಡ, ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಹೆಚ್.ವಿ.ಜಯರಾಂ, ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಹರೀಶ್‌ಕುಮಾರ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

> ‘ನಾನು ರಚಿಸಿದ 2ನೇ ಪುಸ್ತಕ ಇದಾಗಿದ್ದು, ಇದಕ್ಕೂ ಮುನ್ನ ನಾನು ಹೋರಾಟಗಾರ ಎನ್.ರಾಜು ಕುರಿತು ರಚಿಸಿದ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಗಿತ್ತು. ಕೇವಲ ಎರಡೇ ತಿಂಗಳಲ್ಲಿ ನನ್ನ ಮೊದಲ ಪುಸ್ತಕ ರಚಿಸಿದ್ದೆ. ಆದರೆ ಎರಡನೇ ಪುಸ್ತಕ ರಚಿಸಲು ಬಹಳ ಶ್ರಮ ಹಾಗೂ ಮಾಹಿತಿ ಕಲೆ ಹಾಕಬೇಕಾಯಿತು. ಇದಕ್ಕೂ ಮುನ್ನ ನಾನು ಸಾಹಿತಿ ಮೀರಾ ಶಿವಲಿಂಗಯ್ಯ ರಚನೆಯ ಆಲದಮರ ಗ್ರಂಥಕ್ಕೆ ಅಂತಿಮ ರೂಪ ಕೊಡುವ ಮಹತ್ವದ ಜವಾಬ್ದಾರಿ ಯಶಸ್ವಿಯಾಗಿ ನಿಭಾಯಿಸಿದ್ದೆ. ಸಾಹಿತಿ ಡಾ.ಹೆಚ್.ಎಸ್.ಮುದ್ದೇಗೌಡರ ಆತ್ಮಕಥನ ನಡೆದ ಹಾದಿಯ ನಂಟು ಎಂಬ ಮಹತ್ವದ ಕೃತಿಗೂ ಸಹ ಉಪಶೀರ್ಷಿಕೆ ನೀಡಿ ಮಹತ್ವದ ಜವಾಬ್ದಾರಿ ನಿಭಾಯಿಸಿದ್ದೆ. ಈ ಎಲ್ಲಾ ಅನುಭವಗಳು ನಾನು ಸ್ವತಂತ್ರವಾಗಿ 2 ಪುಸ್ತಕಗಳನ್ನು ಹೊರತರಲು ಕಾರಣವಾಯಿತು. - **ಲೋಕೇಶ್ ಚಂದಗಾಲು, ಲೇಖಕ.**

ವಿಶ್ವಕರ್ಮ ಸಮಾಜವನ್ನು ಎಸ್‌ಟಿಗೆ ಸೇರಿಸಲು ಹೋರಾಟಕ್ಕೆ ಮುಂದಾಗಿ

ವಿಧಾನಪರಿಷತ್ ಸದಸ್ಯ ಕೆ.ಪಿ.ನಂಜುಂಡಿ ಕರೆ

ಕೆ.ಆರ್.ಪೇಟೆ, ಅ.12– ವಿಶ್ವಕರ್ಮ ಸಮಾಜವನ್ನು ಎಸ್‌ಟಿ ವರ್ಗಕ್ಕೆ ಸೇರಿಸಲು ಸಮಾಜದವರು ಸಂಘಟಿತ ಹೋರಾಟಕ್ಕೆ ಮುಂದಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಅಧ್ಯಕ್ಷ ಕೆ.ಪಿ.ನಂಜುಂಡಿ ಕರೆ ನೀಡಿದರು.



ಪಟ್ಟಣದ ಜಯಮ್ಮ ಶಿವಲಿಂಗೇಗೌಡ ಸಮುದಾಯ ಭವನದಲ್ಲಿ ತಾಲೂಕು ವಿಶ್ವಕರ್ಮ ಸಂಘಟನೆಗಳ ಒಕ್ಕೂಟದಿಂದ ನಡೆದ ತಾಲೂಕು ಮಟ್ಟದ ವಿಶ್ವಕರ್ಮ ಜಯಂತಿಯಲ್ಲಿ ಮಾತನಾಡಿ, ವಿಶ್ವಕರ್ಮ ಸಮುದಾಯ ಸಂಘಟಿತರಾಗದಿದ್ದಲ್ಲಿ ಉಳಿಗಾಲವಿಲ್ಲ ಎಂದು ಎಚ್ಚರಿಸಿದರು.

1976ರಲ್ಲಿ ಮುಖ್ಯಮಂತ್ರಿಯಾಗಿದ್ದ ಡಿ.ದೇವರಾಜ ಅರಸು ಅವರು ಹಾವನೂರು ಆಯೋಗ ರಚನೆ ಮಾಡಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿದರು. ಇದರಿಂದ ಸಣ್ಣ ಸಣ್ಣ ಜಾತಿಗಳಿಗೆ ಅನುಕೂಲವಾಯಿತು. ಈ ವೇಳೆ ನಮ್ಮ ಸಮುದಾಯದ ಮುಖಂಡರು ಸಂಘಟಿತರಾಗಿ ಹೋರಾಟ ಮಾಡಿದ್ದರೆ ನಮ್ಮ ಸಮಾಜವು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತಿತ್ತು ಎಂದ ಅವರು, ನಮ್ಮ ಹೋರಾಟದ ಫಲವಾಗಿ ವಿಶ್ವಕರ್ಮ ಜಯಂತಿ ಆಚರಣೆ ಆರಂಭವಾಯಿತು. ಇದರಿಂದ ಅಲ್ಪಮಟ್ಟಿನ ಅಭಿವೃದ್ಧಿ ಸಾಧ್ಯವಾಗಿದೆ. ನಮ್ಮ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ವಿಶ್ವಕರ್ಮ ಸಮುದಾಯವನ್ನು ಎಸ್‌ಟಿ ವರ್ಗಕ್ಕೆ ಸೇರಿಸಬೇಕು ಎಂದು ಒತ್ತಾಯಿಸಿದರು.

ಸಂಸದೆ ಸುಮಲತಾ ಮಾತನಾಡಿ, ಪ್ರಧಾನಿ ಮೋದಿಯವರು ಪಿಎಂ ವಿಶ್ವಕರ್ಮ ಯೋಜನೆ ಜಾರಿಗೆ ತಂದಿದ್ದಾರೆ. ಅದನ್ನು ಸಮುದಾಯದವರು ಸದುಪಯೋಗಪಡಿಸಿಕೊಳ್ಳಬೇಕು. ಜಲಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರಿಗೆ 192 ಕೋಟಿ, ಗ್ರಾಮ ಸಡಕ್ ಯೋಜನೆಗೆ 20 ಕೋಟಿ, ಎಸ್‌ಸಿಪಿ, ಎಸ್‌ಟಿಪಿ 32ಕೋಟಿ, ಆದರ್ಶ ಗ್ರಾಮ ಸೇರಿದಂತೆ ಒಟ್ಟು 245 ಕೋಟಿ ಅನುದಾನವನ್ನು ಕೆ.ಆರ್.ಪೇಟೆ ತಾಲೂಕಿಗೆ ನೀಡಿದ್ದೇನೆ. ತಾಲೂಕು ಕೇಂದ್ರದಲ್ಲಿ ನಿರ್ಮಾಣವಾಗುವ ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರ ಸಂಘದ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡುವ ಭರವಸೆ ನೀಡಿದರು.

ಮಾಜಿ ಸಚಿವ ಡಾ.ನಾರಾಯಣಗೌಡ, ಶಾಸಕ ಹೆಚ್.ಟಿ.ಮಂಜು, ಅರಕಲಗೂಡಿನ ಶ್ರೀವಿಶ್ವಕರ್ಮ ಮಹಾಸಂಸ್ಥಾನ ಮಠದ ಶ್ರೀಗುರುಶಿವ ಸುಜ್ಞಾನತೀರ್ಥ ಸ್ವಾಮೀಜಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಮಾಜಿ ಶಾಸಕ ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೆ.ಶ್ರೀನಿವಾಸ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ಮುಖಂಡ ಸಚ್ಚಿದಾನಂದ, ರಾಜ್ಯ ವಿಶ್ವಕರ್ಮ ಯುವಮಿಲನ್ ಅಧ್ಯಕ್ಷ ವಿಕ್ರಮ್ ಆಚಾರ್ಯ, ರಾಜ್ಯ ಸಹಕಾರ ಮಾರಾಟ ಮಹಾಮಂಡಲದ ನಿರ್ದೇಶಕ ಎಸ್.ಎಲ್.ಮೋಹನ್, ತಾಪಂ ಮಾಜಿ ಅಧ್ಯಕ್ಷ ಜವರಾಯಿಗೌಡ, ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ಕೆಪಿಸಿಸಿ ಸದಸ್ಯ ಸುರೇಶ್ ಸೇರಿದಂತೆ ಇನ್ನಿತರರಿದ್ದರು.

ಗ್ಯಾರಂಟಿಗಳ ಹೆಸರಲ್ಲಿ ಸರ್ಕಾರದಿಂದ ಕತ್ತಲು ಭಾಗ್ಯ

ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್‌ನಾರಾಯಣ ಕಿಡಿ

ಮಂಡ್ಯ, ಅ.12– ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಹೆಸರಿನಲ್ಲಿ ರಾಜ್ಯದ ಜನತೆಗೆ ಕತ್ತಲು ಭಾಗ್ಯ ನೀಡಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ಕಿಡಿಕಾರಿದರು.



ಗುರುವಾರ ತಾಲೂಕಿನ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೇವಿನಹಳ್ಳಿ ಗ್ರಾಪಂನ ಎ.ಹುಲ್ಕೆರೆ ಗ್ರಾಮದಲ್ಲಿ ರೈತರೊಂದಿಗೆ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುತ್ತಿತ್ತು. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಉಚಿತ ವಿದ್ಯುತ್ ಹೆಸರಿನಲ್ಲಿ ಬಿಟ್ಟಿ ಭಾಗ್ಯ ಕೊಟ್ಟು ಜನರಿಗೆ ಕತ್ತಲೆ ಭಾಗ್ಯ ನೀಡಿ ಸಂಕಷ್ಟಕ್ಕೆ ಸಿಲುಕಿಸಿದೆ. ಸಿದ್ದರಾಮಯ್ಯ ರೈತರನ್ನು ಉದ್ಧಾರ ಮಾಡಲ್ಲ. ರೈತರಿಗೆ ಒಳ್ಳೆಯದಾಗುವ ಕೆಲಸ ಮಾಡಿ ಎಂದು ಆಗ್ರಹಿಸಿದರು. ನೀರಿನ ವಿವಾದದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ರೈತರಿಗೆ ಬೆಳೆ ಪರಿಹಾರ ನೀಡಿ, ಸಾಲ ಮನ್ನಾ ಮಾಡಬೇಕು. ರೈತರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯ ಸಿಗಬೇಕು. ಗ್ರಾಮಗಳು ಅಭಿವೃದ್ಧಿಯಾದರೇ ದೇಶ ಅಭಿವೃದ್ಧಿಯಾಗಲಿದ್ದು, ಇದಕ್ಕಾಗಿ ನಾವು ಪಣ ತೊಟ್ಟಿದ್ದೇವೆ. ರೈತರು ಲಾಭದಾಯಕ ಬೆಳೆ ಬೆಳೆಯಲು ಮುಂದಾಗಬೇಕು. ರೈತವಾರು, ಜಮೀನುವಾರು ಬೆಳೆಗೆ ಸಹಕಾರ ಕೊಡಲು ನಾವು ಸಿದ್ಧ ಎಂದರು.

ಈ ವೇಳೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಪಿ.ಉಮೇಶ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಮುಖಂಡರಾದ ಸಚ್ಚಿದಾನಂದ, ಡಾ.ಇಂದ್ರೇಶ್, ಎಸ್.ಪಿ.ಸ್ವಾಮಿ, ತಾಲೂಕು ಅಧ್ಯಕ್ಷ ರಮೇಶ್, ಪ್ರಧಾನ ಕಾರ್ಯದರ್ಶಿ ಬಿ.ಸಿ.ಸಂತೋಷ್ ಕುಮಾರ್ ಇದ್ದರು.

ಹುಟ್ಟುಹಬ್ಬ ಆಚರಿಸಿಕೊಳ್ಳದಿರಲು ಸಿ.ಎಸ್.ಪುಟ್ಟರಾಜು ನಿರ್ಧಾರ

ಮಂಡ್ಯ, ಅ.12– ರಾಜ್ಯ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಡಿಕೆಯಷ್ಟು ಮಳೆ ಬರದೇ ಬರ ಪರಿಸ್ಥಿತಿ ಎದುರಾಗಿರುವುದರಿಂದ ಈ ಬಾರಿ ತಮ್ಮ ಜನ್ಮ ದಿನ ಆಚರಿಸಿಕೊಳ್ಳುತ್ತಿಲ್ಲ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರತಿವರ್ಷ ಮಹಾಲಯ ಅಮಾವಾಸ್ಯೆಯಂದು ನನ್ನ ಹುಟ್ಟುಹಬ್ಬ ಆಚರಿಸಲಾಗುತ್ತಿತ್ತು. ಆದರೆ, ಈ ಬಾರಿ ಜಿಲ್ಲಾದ್ಯಂತ ಬರ ಪರಿಸ್ಥಿತಿ ಎದುರಾಗಿರುವುದರಿಂದ ಅ.14ರ ಶನಿವಾರ ಮಹಾಲಯ ಅಮಾವಾಸ್ಯೆಯಂದು ಹುಟ್ಟುಹಬ್ಬ ಆಚರಿಸಿಕೊಳ್ಳುವುದು ಸೂಕ್ತವಲ್ಲ. ಹೀಗಾಗಿ ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಹಿತೈಷಿಗಳು ನನ್ನ ಹುಟ್ಟುಹಬ್ಬ ಆಚರಿಸಬೇಡಿ.



ಹುಟ್ಟುಹಬ್ಬಕ್ಕೆ ಶುಭ ಕೋರಿ ಯಾರೂ ಸಹ ಫ್ಲೆಕ್ಸ್, ಬ್ಯಾನರ್‌ಗಳನ್ನು ಹಾಕಬಾರದೆಂದು ಪುಟ್ಟರಾಜು ಅವರು ಮನವಿ ಮಾಡಿದ್ದಾರೆ.

ಸರ್ಕಾರ ಜಾನಪದ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕು

ಮೈಸೂರು ಜಿಪಂ ಮಾಜಿ ಅಧ್ಯಕ್ಷ ಮರೀಗೌಡ ಅಭಿಮತ



ಮೈಸೂರು, ಅ.12– ಸರ್ಕಾರ ಗ್ರಾಮೀಣ ಭಾಗದಲ್ಲಿ ನಶಿಸಿ ಹೋಗುತ್ತಿರುವ ಜಾನಪದ ಕಲೆಯನ್ನು ಉಳಿಸಲು ಜಾನಪದ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕೆಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಮರೀಗೌಡ ಒತ್ತಾಯಿಸಿದರು.

ಮೈಸೂರು ತಾಲೂಕು ಡಿ. ಸಾಲುಂಡಿಯ ಸ್ಯಾಂಡಲ್‌ರೋಸ್ ಕಾನ್ವೆಂಟ್‌ನಲ್ಲಿ ಕನ್ನಡ ಜಾನಪದ ಪರಿಷತ್ ಮೈಸೂರು ಜಿಲ್ಲೆಯ ವತಿಯಿಂದ ನಡೆದ ವಿಶ್ವ ಜಾನಪದ ದಿನಾಚರಣೆ ಹಾಗೂ ವಿಶ್ವ ಬುಡಕಟ್ಟು ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಅವಿದ್ಯಾವಂತರಾದ ನಮ್ಮ ಹಿರಿಯರು ರಾಗಿ ಬೀಸುವಾಗ, ನಾಟಿ ಮಾಡುವಾಗ, ಮದುವೆ ಸಮಾರಂಭಗಳಲ್ಲಿ ಹಾಡುತ್ತಿದ್ದ ಜಾನಪದ ಹಾಡುಗಳು ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹೋಗಿ ಇಂಪಾಗಿ ಕೇಳಿಸುತ್ತಿದ್ದವು. ಇಂದು ಆಧುನಿಕತೆ, ತಂತ್ರಜ್ಞಾನ ಬೆಳೆದಂತೆ ಟಿ.ವಿ., ಮೊಬೈಲ್ ಬಂದ ಮೇಲೆ ಜಾನಪದ ಕಲೆ, ಕಲಾವಿದರು ಮರೆಯಾಗುತ್ತಿದ್ದಾರೆ. ಇಂದಿಗೂ ಜಾನಪದ ಹಾಡುಗಳನ್ನು ಕೇಳುವಾಗ ನಮ್ಮ ಮನಸ್ಸು ಉಲ್ಲಾಸಗೊಳ್ಳುತ್ತದೆ. ಮಲೆಮಹದೇಶ್ವರ ಹಾಡುಗಳು, ಮಂಟೇಸ್ವಾಮಿ ಹಾಡುಗಳು, ಜಾನಪದ ಕಲಾವಿದರ ಬಾಯಲ್ಲಿ ನಲಿದಾಡುತ್ತಿವೆ. ಆದ್ದರಿಂದ ಸರ್ಕಾರ ಜಾನಪದ ಕಲೆಯನ್ನು ಉಳಿಸಲು ಮುಂದಾಗಬೇಕು ಹಾಗೂ ಶಾಲಾ ಮಕ್ಕಳಿಗೆ ಜಾನಪದ ಗೀತೆ, ಕಲೆಯ ಬಗ್ಗೆ ತರಬೇತಿಯನ್ನು ನೀಡಬೇಕು ಎಂದರು.

ಸಮಾರಂಭದಲ್ಲಿ ಸಾಹಿತಿ ಬನ್ನೂರು ಕೆ. ರಾಜು, ಜಾನಪದ ಪರಿಷತ್ ಜಿಲ್ಲಾ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಬಸವೇಶ್ವರ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಶೋಭಾಶಿವರಾಜು, ಸಮಾಜ ಸೇವಕರಾದ ರಘುರಾಮ್ ವಾಜಪೇಯಿ, ಡಾ. ಬೇಸೂರು ಮೋಹನ್ ಪಾಳೇಗಾರ್, ಡಾ. ವಿನೋದ್, ಕಾರ್ಯದರ್ಶಿ ದೊರೆಸ್ವಾಮಿ, ಶಿವಕುಮಾರ್ ಹಾಜರಿದ್ದರು. ಇದೇ ಸಂದರ್ಭದಲ್ಲಿ ಸೋಬಾನೆ ಹಾಡುಗಾರರಾದ ಚಿಕ್ಕಹೆಣ್ಣಮ್ಮ, ರೇವಮ್ಮ, ಮಹಾದೇವಪ್ಪ ಚಂದ್ರ ಗಂಗಮ್ಮ, ಹರ್ಷ, ಲಿಂಗಪ್ಪ ಕೃಷ್ಣಮೂರ್ತಿ, ಕೆ.ಎಸ್.ಆರ್.ಟಿ.ಯ ಜವರೇಗೌಡರನ್ನು ಸನ್ಮಾನಿಸಲಾಯಿತು.

ಜೆಡಿಎಸ್ ಒಂದು ಜಾತಿ, ಒಂದು ಭಾಗಕ್ಕೆ ಸೀಮಿತವಾದ ಪಕ್ಷ ಅಲ್ಲ: ಜಿ.ಟಿ.ದೇವೇಗೌಡ

ಹುಬ್ಬಳ್ಳಿ, ಅ.12–ಜೆಡಿಎಸ್ ಒಂದು ಜಾತಿಗೆ ಇಲ್ಲವೇ ಒಂದು ಭಾಗಕ್ಕೆ ಸೀಮಿತವಾದ ಪಕ್ಷವಲ್ಲ. ಈ ಪಕ್ಷವು ಎಲ್ಲಾ ಜಾತಿ, ಧರ್ಮ ಹಾಗೂ ಎಲ್ಲಾ ಭಾಗಗಳಲ್ಲೂ ಬಲಿಷ್ಠವಾಗಿದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.



ಹುಬ್ಬಳ್ಳಿ ನಗರದಲ್ಲಿ ಹುಬ್ಬಳ್ಳಿ–ಧಾರವಾಡ ಜಿಲ್ಲೆ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪಕ್ಷದ ಮುಖಂಡರು, ಕಾರ್ಯಕರ್ತರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್‌ನವರ ಪಿತೂರಿಯಿಂದ ಜೆಡಿಎಸ್ ಅನ್ನು ಒಂದು ಜಾತಿ ಹಾಗೂ ಒಂದು ಭಾಗಕ್ಕೆ ಸೀಮಿತವಾದ ಪಕ್ಷ ಎಂದು ಬಿಂಬಿಸಲಾಗಿತ್ತು. ಆದರೆ ಜೆಡಿಎಸ್ ಪಕ್ಷದ 'ಪುನಶ್ಚೇತನ ಪರ್ವ' ಕಾರ್ಯಕ್ರಮದ ಮೂಲಕ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕದಲ್ಲಿ ತಾವು ಪ್ರವಾಸ ಮಾಡಿದಾಗ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿರುವ ಕಾರ್ಯಕರ್ತರನ್ನು ನೋಡಿದರೆ ಜೆಡಿಎಸ್ ಎಲ್ಲಾ ಜಾತಿ ಜನಾಂಗ, ಧರ್ಮ ಹಾಗೂ ರಾಜ್ಯದ ಎಲ್ಲಾ ಭಾಗಗಳಲ್ಲೂ ಇನ್ನೂ ಗಟ್ಟಿಯಾಗಿದೆ ಎಂಬುದು ಖಚಿತವಾಗಿದೆ ಎಂದರು.

ಈ ಭಾಗದ ನಾಯಕರಾದ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗ್ಡೆ, ಎಸ್.ಆರ್.ಬೊಮ್ಮಾಯಿ, ಬಸವರಾಜ ಬೊಮ್ಮಾಯಿ, ಮಾಜಿ ಸಚಿವರಾದ ಬಸವರಾಜ ಹೊರಟ್ಟಿ ಆರ್.ವಿ.ದೇಶಪಾಂಡೆ ಸಂತೋಷ್ ಲಾಡ್, ಆರ್.ಯಾವಗಲ್ ಮುಂತಾದ ನಾಯಕರು ಯಾವ ಪಕ್ಷದ ಮುಖಾಂತರ ರಾಜಕೀಯ ಪ್ರಾರಂಭಿಸಿದರು, ಈಗಿನ ಮುಖ್ಯಮಂತ್ರಿಗಳು ಯಾವ ಪಕ್ಷದ ಮೂಲಕ ರಾಜ್ಯಕ್ಕೆ, ಜನತೆಗೆ ಚಿರಪರಿಚಿತರಾದರು. ಜೆಡಿಎಸ್ ಅಸ್ತಿತ್ವದ ಬಗ್ಗೆ ಮಾತನಾಡುವವರು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ಕೋವಿಡ್ ಸಂದರ್ಭದಿಂದ ದೇಶದ 80 ಕೋಟಿ ಜನರಿಗೆ ತಲಾ 5 ಕೆ.ಜಿ. ಅಕ್ಕಿ ಕೊಡುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಪ್ರತೀ ಕುಟುಂಬಕ್ಕೆ 5 ಕೆ.ಜಿ. ಅಕ್ಕಿ ನೀಡುತ್ತಿರುವುದಾಗಿ ಹೇಳುತ್ತಿರುವ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾದರೂ ಇದುವರೆವಿಗೂ ಒಂದು ಕಾಳು ಅಕ್ಕಿಯನ್ನು ಕೂಡ ನೀಡಿಲ್ಲ. ಗೃಹ ಜ್ಯೋತಿ ಯೋಜನೆಯಡಿ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವುದಾಗಿ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಘೋಷಿಸಿ, ಈಗ ಪ್ರತಿ ಕುಟುಂಬದ ಸರಾಸರಿ 53 ಯೂನಿಟ್ ಅಷ್ಟೇ ಎಂದು ಹೇಳುತ್ತಿರುವ ಸರ್ಕಾರ, 200 ಯೂನಿಟ್ ಎಲ್ಲಿ ಫ್ರೀ ಕೊಡುತ್ತಿದೆ ಎಂದು ಪ್ರಶ್ನಿಸಿದರು.

ಕಳೆದ ಸರ್ಕಾರದಲ್ಲಿ ಸೋಲಾರ್ ಮೂಲಕ ವಿದ್ಯುತ್ ಉತ್ಪಾದನೆ ಮಾಡಿ ರೈತರಿಗೆ ಪ್ರತಿ ದಿನ 7 ಗಂಟೆ ನಿರಂತರ ವಿದ್ಯುತ್ ನೀಡಲಾಗುತ್ತಿತ್ತು ಆದರೆ ಈಗ ಎರಡು ಗಂಟೆ ವಿದ್ಯುತ್ ನೀಡಲು ಸಹ ಸರ್ಕಾರ ಹೆಣಗಾಡುತ್ತಿದೆ, ರಾಜ್ಯದಲ್ಲಿ ಭೀಕರ ಬರಗಾಲವಿದ್ದು ಸರ್ಕಾರ ಘೋಷಿಸಿರುವಂತೆ ಬರಪೀಡಿತ 195 ತಾಲೂಕುಗಳ ಸುಮಾರು 40 ಲಕ್ಷ ಹೆಕ್ಟರ್ ಪ್ರದೇಶ ಬೆಳೆ ಹಾನಿಯಾಗಿ, ಅಂದಾಜು 4 ಸಾವಿರ ಕೋಟಿ ರೂ. ನಷ್ಟವಾಗಿದೆ. ಆದರೆ ಇದುವರೆಗೂ ರಾಜ್ಯ ಸರ್ಕಾರ ಒಂದು ರೂ. ಪರಿಹಾರವನ್ನು ಬಿಡುಗಡೆ ಮಾಡಿಲ್ಲ ಎಂದರು. ರೈತರ ಆತ್ಮಹತ್ಯೆ ಈ ಸರ್ಕಾರದ 6ನೇ ಗ್ಯಾರಂಟಿ ಎಂದು ವ್ಯಂಗ್ಯವಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಹುಬ್ಬಳ್ಳಿ ನಗರದಲ್ಲಿರುವ ಪ್ರಸಿದ್ಧ ಸಿದ್ಧಾರೂಢ ಮಠಕ್ಕೆ ಕೋರ್ ಕಮಿಟಿ ಸದಸ್ಯರೊಂದಿಗೆ ಭೇಟಿ ನೀಡಿ ಸ್ವಾಮೀಜಿಗಳ ಗದ್ದುಗೆ ದರ್ಶನ ಪಡೆದು, ಹಜರತ್ ಸೈಯ್ಯದ್ ಫತಾಹ ಶಾಹ ವಲಿ ದರ್ಗಾಕ್ಕೂ ಭೇಟಿ ನೀಡಿ ಚಾದರ್ ಅರ್ಪಿಸಿ ಆಶೀರ್ವಾದ ಪಡೆದರು.

ಕಾರ್ಯಕ್ರಮದಲ್ಲಿ ಕೋರ್ ಕಮಿಟಿ ಸಂಚಾಲಕರಾದ ವೈಎಸ್‌ವಿ ದತ್ತ, ಸದಸ್ಯರಾದ ಆಲ್ಕೋಡ್ ಹನುಮಂತಪ್ಪ, ಹೆಚ್.ಕೆ.ಕುಮಾರಸ್ವಾಮಿ, ಬಂಡೆಪ್ಪ ಕಾಶಂಪೂರ್, ನಾಡಗೌಡ, ರಾಜೂಗೌಡ, ಸುರೇಶಗೌಡ, ಕೃಷ್ಣಾರೆಡ್ಡಿ, ಪ್ರಸನ್ನಕುಮಾರ್, ದೊಡ್ಡಪ್ಪಗೌಡ ಪಾಟೀಲ್, ವೀರಭದ್ರಪ್ಪ ಹಾಲರವಿ, ತಿಮ್ಮರಾಯಪ್ಪ, ಸುನಿತಾ ಚೌವ್ಹಾಣ್, ಸಿ.ವಿ.ಚಂದ್ರಶೇಖರ್, ಸುಧಾಕರ್ ಶೆಟ್ಟಿ, ಹುಬ್ಬಳ್ಳಿ –ಧಾರವಾಡ ಮಹಾನಗರ, ಧಾರವಾಡ ಜಿಲ್ಲೆ, ಹಾವೇರಿ, ಗದಗ, ಹಾಗೂ ಉತ್ತರ ಕನ್ನಡ ಜಿಲ್ಲೆಗಳ, ಜಿಲ್ಲಾಧ್ಯಕ್ಷರುಗಳು, ಪಕ್ಷದ ಅಭ್ಯರ್ಥಿಗಳು, ತಾಲೂಕು ಅಧ್ಯಕ್ಷರುಗಳು, ಪದಾಧಿಕಾರಿಗಳು, ಮುಖಂಡರುಗಳು, ಅಸಂಖ್ಯಾತ ಕಾರ್ಯಕರ್ತರು ಉಪಸ್ಥಿತರಿದ್ದರು.

ವಿಶ್ವವಿಖ್ಯಾತ ಬೃಂದಾವನಕ್ಕೆ ಗುಂಡಿಗಳ ಸ್ವಾಗತ

ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲು ಆಗ್ರಹ

• ವಿನಯ್ ಕಾರೇಕುರ

ಶ್ರೀರಂಗಪಟ್ಟಣ, ಅ.12– ದೇಶ ವಿದೇಶಿಗರ ಸ್ವರ್ಗ ಎಂದೇ ಕರೆಸಿಕೊಳ್ಳುವ ತಾಲೂಕಿನ ಬೃಂದಾವನ ಉದ್ಯಾನವನ ಹಾಗೂ ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಪ್ರವಾಸಿಗರಿಗೆ ಗುಂಡಿಗಳ ಸ್ವಾಗತ ಕೋರುತ್ತಿವೆ.



2023ರ ವಿಶ್ವವಿಖ್ಯಾತ ದಸರಾಕ್ಕೆ ಕೆಲವೇ ದಿನಗಳು ಬಾಕಿ ಇದ್ದು, ಇದಕ್ಕಾಗಿ ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತ ಸಜ್ಜಾಗುತ್ತಿದೆ. ಎಂದಿನಂತೆ ಈ ವರ್ಷವೂ ದೇಶ ವಿದೇಶಗಳಿಂದ ದಸರಾ ಮಹೋತ್ಸವ ಕಣ್ತುಂಬಿಕೊಳ್ಳಲು ಪ್ರವಾಸಿಗರು ಆಗಮಿಸುವ ನಿರೀಕ್ಷೆ ಇದೆ. ಇದಕ್ಕಾಗಿ ಮೈಸೂರು ಮದುವಣಗಿತ್ತಿಯಂತೆ ಶೃಂಗಾರಗೊಳ್ಳುತ್ತಿದೆ. ದಸರಾಗೆ ಆಗಮಿಸುವ ಬಹುಪಾಲು ಪ್ರವಾಸಿಗರೂ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಶ್ರೀರಂಗನಾಥಸ್ವಾಮಿ, ನಿಮಿಷಾಂಬ, ದರಿಯಾ ದೌಲತ್, ಗುಂಬಜ್, ಟಿಪ್ಪು ಡೆತ್‌ಸ್ಪಾಟ್, ರಂಗನತಿಟ್ಟು ಪಕ್ಷಿಧಾಮಕ್ಕೆ ಭೇಟಿ ನೀಡಿ ಸಂಜೆ ವೇಳೆಗೆ ಇಲ್ಲಿನ ಬೃಂದಾವನ ಉದ್ಯಾನವನ ಹಾಗೂ ಕೆಆರ್‌ಎಸ್‌ಗೆ ಆಗಮಿಸುತ್ತಾರೆ. ಇಲ್ಲಿಗೆ ಬರುವ ಪ್ರವಾಸಿಗರಿಗೆ ಮಾರ್ಗಮಧ್ಯೆ ಇರುವ ಪೇಪರ್ ಮಿಲ್ ಸರ್ಕಲ್‌ನಿಂದಲೇ ಆಳೆತ್ತರದ ಗುಂಡಿಗಳು ಸ್ವಾಗತ ಕೋರುತ್ತವೆ. ಅಲ್ಲದೇ ಮೈಸೂರಿನಿಂದ ನೇರವಾಗಿ ಕೆಆರ್‌ಎಸ್‌ಗೆ ಬರುವ ಪ್ರವಾಸಿಗರಿಗೆ ರಿಂಗ್ ರಸ್ತೆ ಆದ ನಂತರ ವಿಕ್ರಾಂತ್ ಫ್ಯಾಕ್ಟರಿ ರಸ್ತೆಯಲ್ಲೇ ಹತ್ತಾರು ಗುಂಡಿಗಳು ಸ್ವಾಗತ ಕೋರುತ್ತವೆ. ಇದರಿಂದ ಈ ರಸ್ತೆಗಳಲ್ಲಿ ನಿತ್ಯ ಅಪಘಾತ ಹಾಗೂ ಸಾವು ನೋವುಗಳು ಸರ್ವೇ ಸಾಮಾನ್ಯವಾಗಿವೆ.

ವಿಶ್ವವಿಖ್ಯಾತ ಕೆಆರ್‌ಎಸ್ ಸಂಪರ್ಕಿಸುವ ರಸ್ತೆಗಳಲ್ಲಿ ಇಷ್ಟೊಂದು ಗುಂಡಿಗಳಿರುವುದು ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಇನ್ನು ಬೃಂದಾವನ ಗಾರ್ಡನ್ ಟಿಕೆಟ್ ಪಾಯಿಂಟ್‌ನಿಂದ ರಾಯಲ್ ಆರ್ಕಿಡ್ ಹೋಟೆಲ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯಂತು ಕೆರೆಯಂತಾಗಿದೆ. ಈ ರಸ್ತೆಯಲ್ಲಿ ಹೆಚ್ಚಾಗಿ ಮುಖ್ಯಮಂತ್ರಿ, ಸಚಿವರು ಸೇರಿದಂತೆ ವಿಐಪಿ, ವಿವಿಐಪಿಗಳು ಓಡಾಡಿದರೂ ರಸ್ತೆಗಳ ದುರಸ್ತಿಗೆ ಮುಂದಾಗದಿರುವುದು ನಿರ್ಲಕ್ಷ್ಯತನಕ್ಕೆ ಸಾಕ್ಷಿಯಾಗಿದೆ.



ಕಾವೇರಿ ನೀರಾವರಿ ನಿಗಮ ಬೃಂದಾವನ ಗಾರ್ಡನ್ ಪ್ರವೇಶಕ್ಕೆ ವ್ಯಕ್ತಿಗೆ 50 ರೂ. ಪ್ರವೇಶ ನಿಗದಿಪಡಿಸಿದ್ದು, ಲಕ್ಷಾಂತರ ರೂ. ಆದಾಯ ಗಳಿಸುತ್ತಿದೆ. ನಿತ್ಯ ಸಾವಿರಾರು ಮಂದಿ ಪ್ರವಾಸಿಗರಿಂದ ಶುಲ್ಕ ಸಂಗ್ರಹಿಸುವ ನಿಗಮವು ರಸ್ತೆ ದುರಸ್ತಿಗೆ ಮುಂದಾಗಿಲ್ಲ.

ಮೂಲ ಸೌಲಭ್ಯಗಳ ಕೊರತೆ: ಬೃಂದಾವನದಲ್ಲಿರುವ 2 ಶೌಚಾಲಯಗಳು ಶುಚಿತ್ವವಿಲ್ಲದೇ ಗಬ್ಬು ನಾರುತ್ತಿದ್ದು, ಪ್ರವಾಸಿಗರು ಮೂಗು ಮುಚ್ಚಿಕೊಂಡು ಶೌಚಾಲಯಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕಿದೆ. ಮಳೆ ಬಂದರೆ ಪ್ರವಾಸಿಗರು ರಕ್ಷಣೆ ಪಡೆಯಲು ವಿಶ್ರಾಂತಿ ಕೊಠಡಿಗಳ ಕೊರತೆ ಇದೆ. ಅಲ್ಲದೇ 2 ರಾಜ್ಯಗಳ ಜನರಿಗೆ ಕುಡಿಯುವ ನೀರು ಒದಗಿಸುವ ಅಣೆಕಟ್ಟೆಯಲ್ಲಿ ಪ್ರವಾಸಿಗರು ಕುಡಿಯಲು ನೀರು ಸಿಗುವುದಿಲ್ಲ. ಬದಲಿಗೆ ಪ್ರವಾಸಿಗರು ಬಿಸ್ಲೇರಿ ಖರೀದಿಸಿ ಕುಡಿಯಬೇಕಿದೆ. ಇನ್ನು ಅತೀ ಸೂಕ್ಷ್ಮ ಪ್ರದೇಶವಾಗಿರುವ ಬೃಂದಾವನ ಹಾಗೂ ಅಣೆಕಟ್ಟೆಗೆ ಭೇಟಿ ನೀಡುವ ಪ್ರವಾಸಿಗರ ಕಣ್ಗಾವಲಿಗೆ ಹಾಕಲಾಗಿದ್ದ ಸಿಸಿಟಿವಿ, ಲಗೇಜ್ ಸ್ಕ್ಯಾನರ್‌ಗಳು ಕೆಟ್ಟು ಹೋಗಿ ಹಲವು ವರ್ಷಗಳೇ ಕಳೆದರೂ ಇವುಗಳ ದುರಸ್ತಿಗೆ ಅಧಿಕಾರಿಗಳು ಮುಂದಾಗಿಲ್ಲ. ಅಲ್ಲದೇ ಬಾಡಿ ಸ್ಕ್ಯಾನರ್‌ಗಳು ಸಹ ಕೆಟ್ಟು ನಿಂತಿವೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿಗೆ ಆಗಮಿಸುವ ಪ್ರವಾಸಿಗರಿಗೆ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಬೇಕು ಎಂದು ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಇಲ್ಲಿನ ಮ್ಯೂಸಿಕಲ್ ಕಾರಂಜಿ ಪ್ರದರ್ಶನ ನಿಂತು 7 ತಿಂಗಳು ಕಳೆದಿವೆ. ನವೀಕರಣಗೊಂಡು 2 ತಿಂಗಳು ಕಳೆದರೂ ಪ್ರವಾಸಿಗರಿಗೆ ಮುಕ್ತಗೊಳಿಸದ ಕಾರಣ ಪ್ರವಾಸಿಗರು ಬೇಸರದಿಂದ ಹೊರ ನಡೆಯುತ್ತಿದ್ದಾರೆ. ಇದರಿಂದ ಪ್ರತಿನಿತ್ಯ ಪ್ರವಾಸಿಗರ ಸಂಖ್ಯೆ ಕ್ಷೀಣಿಸಿ, ಸರ್ಕಾರದ ಬೊಕ್ಕಸಕ್ಕೆ ಆದಾಯ ನಷ್ಟವಾಗುತ್ತಿದೆ. ಇಷ್ಟೆಲ್ಲಾ ಸಮಸ್ಯೆಗಳು ಇದ್ದರೂ ಕೂಡ ಅಧಿಕಾರಿಗಳು ಮಾತ್ರ ಇಲ್ಲಿ ಯಾವ ಸಮಸ್ಯೆ ಇಲ್ಲ ಎಂದು ವರ್ತಿಸುತ್ತಿರುವುದು ಸಾರ್ವಜನಿಕ ವಲಯದಲ್ಲಿ ಟೀಕೆಗೆ ಗುರಿಯಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ದತ್ತಿನಿಧಿ ಪ್ರಶಸ್ತಿಗೆ ಆಯ್ಕೆ

ಮೈಸೂರು, ಅ. 12– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಹಿರಿಯ ಪತ್ರಕರ್ತ ದಿವಂಗತ ನಿರಂಜನ್ ನಿಕ್ಕಂ ಹಾಗೂ ಹಿರಿಯ ಛಾಯಾಗ್ರಾಹಕ ದಿವಂಗತ ನೇತ್ರರಾಜು ಅವರ ಹೆಸರಿನಲ್ಲಿ ಸ್ಥಾಪಿಸಲಾಗಿರುವ ದತ್ತಿನಿಧಿ ಪ್ರಶಸ್ತಿಗಳಿಗೆ ಪತ್ರಕರ್ತ ರಾಜ್‌ಕುಮಾರ್ ಭಾವಸಾರ್ ಹಾಗೂ ಛಾಯಾಗ್ರಾಹಕ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್ ಆಯ್ಕೆಯಾಗಿದ್ದಾರೆ. ಈ ಹಿಂದಿನ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಸ್.ಟಿ. ಸೋಮಶೇಖರ್ ಅವರು ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಂದರ್ಭ ನಿಧನ ಹೊಂದಿದ್ದ ಪತ್ರಕರ್ತರ ಕುಟುಂಬದವರಿಗೆ ತಲಾ 50 ಸಾವಿರ ರೂ. ನೆರವು ನೀಡಿದ್ದರು. ಆ ಇಬ್ಬರು ಕುಟುಂಬದವರ ಸಲಹೆ ಮೇರೆಗೆ ಅವರ ಹೆಸರಿನಲ್ಲಿ ದತ್ತಿನಿಧಿ ಸ್ಥಾಪಿಸಿ ಪ್ರತಿ ವರ್ಷ ಸಾಧಕ ಪತ್ರಕರ್ತರಿಗೆ ಪ್ರಶಸ್ತಿ ನೀಡಲು ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಸಂಘವು ಪ್ರಸಕ್ತ ಸಾಲಿನ ದತ್ತಿನಿಧಿ ಪ್ರಶಸ್ತಿಗೆ ಮೇಲ್ಕಂಡ ಇಬ್ಬರು ಪತ್ರಕರ್ತರನ್ನು ಆಯ್ಕೆ ಮಾಡಿದ್ದು, ಅಕ್ಟೋಬರ್ ಕೊನೆ ವಾರ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ ತಿಳಿಸಿದ್ದಾರೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾಗಿ ಡಿ.ಟಿ.ಪ್ರಕಾಶ್ ನೇಮಕ



ಮೈಸೂರು, ಅ.12–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿಟಿ ಪ್ರಕಾಶ್ ಅವರನ್ನು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಚಾಮುಂಡಿ ಪುರಂನ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು.

ಈ ವೇಳೆ ಮಾತನಾಡಿದ ಡಿ.ಟಿ.ಪ್ರಕಾಶ್, ಸಮಾಜದಲ್ಲಿ ಬ್ರಾಹ್ಮಣರನ್ನು ಹೀಗಳೆ ಯುವವರಿಗೆ ಸಂಘಟನೆ ಮೂಲಕ ಉತ್ತರ ನೀಡಬೇಕಿದ್ದು, ಸಂಘಟನೆ ಸಶಕ್ತವಾಗಿದ್ದರೆ ಮಾತ್ರ ಸಾಧ್ಯ. ಬ್ರಾಹ್ಮಣರು ಜಾಗೃತರಾಗಿ ಸಂಘಟನೆ ಮಹತ್ವ ಅರ್ಥಮಾಡಿಕೊಳ್ಳಬೇಕು.

ಬ್ರಾಹ್ಮಣತ್ವ ಹಿಂದೂ ಸಂಸ್ಕೃತಿ ಪ್ರತೀಕವಾಗಿದ್ದು, ಬ್ರಾಹ್ಮಣ್ಯ ಅಳಿದರೆ ಹಿಂದೂ ಸಂಸ್ಕೃತಿಯೂ ಅಳಿಯುತ್ತದೆ. ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ನಗರದಲ್ಲಿ ಬೃಹತ್ ಬ್ರಾಹ್ಮಣ ಮಕ್ಕಳ ಸಮಾವೇಶ ನಡೆಸಿ, ಸಂಸ್ಕಾರ ಉಳಿಸುವ ಸಂಸ್ಕೃತಿ ಕಲಿಸಲಾಗುತ್ತದೆ.

ಹಿರಿಯ ವಿಪ್ರ ಮುಖಂಡರಾದ ಎಂ.ಆರ್.ಬಾಲಕೃಷ್ಣ, ಹರೀಶ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್‌ಶಾಸ್ತ್ರಿ, ಕಡಕೊಳ ಜಗದೀಶ್, ಅಪೂರ್ವ ಸುರೇಶ್, ವಿಜಯ್ ಕುಮಾರ್, ಜಯಸಿಂಹ ಶ್ರೀಧರ್, ಚಕ್ರಪಾಣಿ, ಸುಚೀಂದ್ರ, ರಂಗನಾಥ್, ಡಾ.ಜಿ.ವಿ.ರವಿಶಂಕರ್, ವಿಘ್ನೇಶ್ವರ ಭಟ್, ಮಿರ್ಲೆ ಪನೀಶ್, ರಾಮು ಇನ್ನಿತರರು ಹಾಜರಿದ್ದರು.



ಗಾಂಧಿ ಜಯಂತಿ ಅಂಗವಾಗಿ ಮೈಸೂರು ನಗರ ವಿದ್ಯಾರ್ಥಿ ಕಾಂಗ್ರೆಸ್ ಘಟಕದ ವತಿಯಿಂದ ವಿಶ್ವ ವಿಖ್ಯಾತ ಮೈಸೂರು ದಸರಾ ಆನೆಗಳ ಮಾವುತರ ಮಕ್ಕಳಿಗೆ ಪಠ್ಯ ಸಾಮಗ್ರಿಗಳನ್ನು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ವಿತರಿಸಿದರು ಎನ್‌ಎಸ್‌ಯುಐ ಘಟಕದ ಅಧ್ಯಕ್ಷ ಎನ್. ಮನೋಜ್, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಿ. ಸೋಮಶೇಖರ್, ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ರಫೀ, ಪೈಲ್ವಾನ್ ನಾಗರಾಜು, ವಿಶ್ವನಾಥ್ (ವಿಶ್ವ), ರಜತ್, ಟೈಲರ್, ಪ್ರಶಾಂತ್, ರವೀಶ್, ಹರಿಚರಣ್, ಮಂಜುನಾಥ್, ಸಿದ್ದು ಮತ್ತಿತರರು ಉಪಸ್ಥಿತರಿದ್ದರು.

ಅಮೆಜಾನ್‌ನಿಂದ 1 ಲಕ್ಷ ಉದ್ಯೋಗ ಸೃಷ್ಟಿ

ಮೈಸೂರು, ಅ. 12–ಅಮೆಜಾನ್ ಇಂಡಿಯಾ ತನ್ನ ಮುಂದಿನ ಗ್ರೇಟ್ ಇಂಡಿಯನ್ ಫೆಸ್ಟಿವಲ್‌ಗಾಗಿ 1 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿರುವುದಾಗಿ ಪ್ರಕಟಿಸಿದೆ. ಈ ಅವಕಾಶಗಳಲ್ಲಿ ಭಾರತದಾದ್ಯಂತ ಮುಂಬೈ, ದೆಹಲಿ, ಪುಣೆ, ಬೆಂಗಳೂರು, ಹೈದರಾಬಾದ್, ಕೊಲ್ಕತಾ, ಲಖನೌ ಮತ್ತು ಚೆನ್ನೈ ಇತ್ಯಾದಿ ನಗರಗಳಲ್ಲಿ ನೇರ ಮತ್ತು ಪರೋಕ್ಷ ಉದ್ಯೋಗಗಳನ್ನು ಹೊಂದಿವೆ. ಹೊಸದಾಗಿ ನೇಮಕವಾದವರಲ್ಲಿ ಕಸ್ಟಮರ್ ಸರ್ವೀಸ್ ಅಸೋಸಿಯೇಟ್‌ಗಳಿದ್ದು, ಅವರಲ್ಲಿ ಕೆಲವರು ಉನ್ನತೀಕರಿಸಿದ ಗ್ರಾಹಕ ಅನುಭವ ನೀಡುವ ವರ್ಚ್ಯುಯಲ್ ಕಸ್ಟಮರ್ ಸರ್ವೀಸ್ ಮಾದರಿಯ ಭಾಗವಾಗಿದೆ.

ಈ ನೇಮಕವು ವ್ಯಕ್ತಿಗಳಿಗೆ ಕೆಲಸದ ಅವಕಾಶಗಳು ಮತ್ತು ಆರ್ಥಿಕ ಸ್ವಾತಂತ್ರ್ಯ ನೀಡುವಲ್ಲಿ ಸಬಲೀಕರಿಸಲು ಪ್ರಮುಖ ಪಾತ್ರ ವಹಿಸುತ್ತದೆ. ಭಾರತದಾದ್ಯಂತ ನಮ್ಮ ಗ್ರಾಹಕರು, ಮಾರಾಟಗಾರರು, ಅಸೋಸಿಯೇಟ್‌ಗಳು, ಪಾಲುದಾರರು ಮತ್ತು ಉದ್ಯೋಗಿಗಳಿಗೆ ಆನಂದದಾಯಕ ಹಬ್ಬದ ಋತು ಸೃಷ್ಟಿಸಲು ನಿರೀಕ್ಷೆ ಹೊಂದಿದ್ದೇವೆ ಎಂದು ಅಮೆಜಾನ್‌ನ ಮುಖ್ಯಸ್ಥ ಅಖಿಲ್ ಸಕ್ಸೇನಾ ಹೇಳಿದರು.

ರಣಹದ್ದುಗಳ ಸಂತತಿ ಸಂರಕ್ಷಣೆಗೆ ಜಾಗೃತಿ



ಮೈಸೂರು,ಅ.12(ಎಂಟಿವೈ)– ಅವನತಿಯತ್ತ ಸಾಗಿರುವ ರಣಹದ್ದುಗಳ ಸಂತತಿ ಸಂರಕ್ಷಣೆಗೆ ಎಲ್ಲರೂ ಸಹಕರಿಸಬೇಕು ಎಂದು ವೈಲ್ಡ್‌ಲೈಫ್ ಕನ್ಸ್‌ರ್ವೇಷನ್ ಫೌಂಡೇಷನ್ ಮುಖ್ಯಸ್ಥ ರಾಜ್‌ಕುಮಾರ್ ಡಿ.ಅರಸ್ ಮನವಿ ಮಾಡಿದ್ದಾರೆ.

ರಣಹದ್ದು ಉಳಿಸಿ ಅಭಿಯಾನದ ಅಂಗವಾಗಿ ಹೆಚ್.ಡಿ.ಕೋಟೆ ತಾಲೂಕಿನ ಮಗ್ಗೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ರಣಹದ್ದುಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಆಯೋಜಿಸಲಾಗಿದ್ದ ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಪರಿಸರ ಸಮತೋಲನ ಕಾಪಾಡಲು ಪ್ರತಿಯೊಂದು ಜೀವಿಯ ಸಂರಕ್ಷಣೆ ಅಗತ್ಯ. ಪರಿಸರ ಸ್ವಚ್ಛವಾಗಿಡುವ ಕಾಯಕದಲ್ಲಿ ತೊಡಗಿದ್ದ ರಣಹದ್ದುಗಳ ಸಂತತಿ ಅವಸಾನದತ್ತ ಸಾಗಿದೆ. ಜಾನುವಾರುಗಳಿಗೆ ನೀಡುತ್ತಿದ್ದ ನೋವು ನಿವಾರಕ ಚುಚ್ಚುಮದ್ದು, ರಣಹದ್ದುಗಳ ಸಂತತಿಯನ್ನು ಅಪಾಯಕ್ಕೆ ಸಿಲುಕಿಸಿದೆ. ಈ ಹಿಂದೆ ಗುಂಪು ಗುಂಪಾಗಿ ಕಾಣುತ್ತಿದ್ದ ರಣಹದ್ದುಗಳು ಇದೀಗ ಕಣ್ಮರೆಯಾಗುತ್ತಿವೆ. ಜಾನುವಾರುಗಳ ಕಳೇಬರ ತಿಂದು ಪರಿಸರ ಸ್ವಚ್ಛವಾಗಿಡುತ್ತಿದ್ದ ರಣಹದ್ದುಗಳನ್ನು ನೋಡುವುದಕ್ಕೂ ಅಸಾಧ್ಯ ಎನಿಸಿದೆ. ಶೇ.1ರಷ್ಟು ರಣಹದ್ದುಗಳು ನಮ್ಮಲ್ಲಿವೆ. ಅವುಗಳ ಸಂರಕ್ಷಣೆಗೆ ಎಲ್ಲರೂ ಪಣತೊಡಬೇಕು ಎಂದು ಸಲಹೆ ನೀಡಿದರು.

ದಕ್ಷಿಣ ಭಾರತದಲ್ಲಿ ನಾಲ್ಕು ವಿಧದ ರಣಹದ್ದುಗಳು ಕಂಡು ಬರುತ್ತವೆ. ಅದರಲ್ಲೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಣಹದ್ದುಗಳು ಕಾಣಸಿಗುತ್ತದೆ. ಇವುಗಳ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ವೈಲ್ಡ್ ಲೈಫ್ ಕನ್ಸರ್ವೇಷನ್ ಫೌಂಡೇಷನ್ ವತಿಯಿಂದ ರಣಹದ್ದುಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಇದೇ ವೇಳೆ ಸರ್ಕಾರಿ ಶಾಲಾ ಮಕ್ಕಳಿಗೆ ಚಿತ್ರಕಲಾ ಶಿಕ್ಷಕ ಮಹೇಶ್ ಹಾಗೂ ತಂಡದ ಸದಸ್ಯರು ಮಕ್ಕಳಿಗೆ ಚಿತ್ರ ಬಿಡಿಸುವ ಬಗ್ಗೆ ಮಾರ್ಗದರ್ಶನ ನೀಡಿದರು. ಒಂದು ಗಂಟೆಯಲ್ಲಿ ಮಕ್ಕಳು ಅತ್ಯುತ್ತಮ ಚಿತ್ರಗಳನ್ನು ಬರೆದು ಗಮನ ಸೆಳೆದರು. ಅದರಲ್ಲಿ 4 ಅನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಲಾಯಿತು. ಈ ಸಂದರ್ಭದಲ್ಲಿ ವಿಟು ಸಾಫ್ಟ್ ಸಂಸ್ಥೆಯ ಕಾರ್ತಿಕೇಯನ್, ಡಬ್ಲ್ಯೂಸಿಎಫ್‌ನ ಜಗದೀಶ್, ಸಿದ್ದರಾಜು, ಮಾರ್ಕ್ ಸ್ಟೀವ್, ಮುಖ್ಯ ಶಿಕ್ಷಕಿ ಹೇಮಲತಾ, ಕೃಷ್ಣರಾಜು, ಹರ್ಷವರ್ಧನ ಇದ್ದರು.

ಚಾಮುಂಡಿಬೆಟ್ಟ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ



ಮೈಸೂರು,ಅ.12(ಎಂಟಿವೈ)– ಮಹಾತ್ಮ ಗಾಂಧಿ ಜಯಂತಿ ಹಾಗೂ ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಜ್ಞಾನ ಸಮುದ್ರ ಸೇವಾ ಟ್ರಸ್ಟ್ ಕಾರ್ಯಕರ್ತರು ಚಾಮುಂಡಿಬೆಟ್ಟದ ರಸ್ತೆಯಲ್ಲಿರುವ ಶ್ರೀ ಮಲೆಮಹದೇಶ್ವರ ಸ್ವಾಮಿ ದೇವಾಲಯದ ಬಳಿ ಸ್ವಚ್ಛತಾ ಕಾರ್ಯಕ್ರಮವನ್ನು ನೆರವೇರಿಸಿದರು.

ದೇವಾಲಯದ ಬಳಿ ಪ್ರವಾಸಿಗರು, ವಾಹನ ಸವಾರರು ಬಿಸಾಡಿ ಹೋಗಿದ್ದ ತ್ಯಾಜ್ಯ, ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸಿ ಸ್ವಚ್ಛತಾ ಪ್ರಜ್ಞೆ ಪ್ರದರ್ಶಿಸಿದರು. ಅಭಿಯಾನದಲ್ಲಿ ಜ್ಞಾನ ಸಮುದ್ರ ಸೇವಾ ಟ್ರಸ್ಟ್ ಅಧ್ಯಕ್ಷ ರಾಮಪ್ರಸಾದ್, ಕಾರ್ಯದರ್ಶಿಗಳಾದ ಗಣೇಶ, ಪ್ರಸಾದ್, ಸಂಚಾಲಕರಾದ ಸುರೇಶ್ ರಾವ್, ಸಂಘಟನಾ ಕಾರ್ಯದರ್ಶಿ ಕಾಂತರಾಜು, ಸಹ ಸಂಘಟನಾ ಕಾರ್ಯದರ್ಶಿ ಟೋನಿ ಪಿಯರ್‌ಸನ್, ಸದಸ್ಯರುಗಳಾದ ರಮೇಶ್ ಕೌಶಿಕ್‌ರಾವ್, ಮಾರ್ಕ್ ಹೆಲೋಹಿನ್ ಪಿಯರ್‌ಸನ್, ಚೇತನ್ ಪ್ರಸಾದ್ ಇನ್ನಿತರರು ಪಾಲ್ಗೊಂಡಿದ್ದರು.

ದಸರಾ ಫಲಪುಷ್ಪ ಪ್ರದರ್ಶನಕ್ಕೆ ಅಂತಿಮ ರೂಪ

ನವರಾತ್ರಿ ಉತ್ಸವದಲ್ಲಿ ಪುಷ್ಪರಾಶಿ ಅಂದ ಸವಿಯುವ ಸದವಕಾಶ



ಪುಷ್ಪರಾಶಿಯಿಂದ ಕಂಗೊಳಿಸುತ್ತಿರುವ ಕುಪ್ಪಣ್ಣ ಪಾರ್ಕ್.



ಗಾಜಿನ ಮನೆಯಲ್ಲಿ ಜೋಡಣೆ ಮಾಡಲು ಊಟಿಯಿಂದ ತಂದಿರುವ ಗಿಡಗಳನ್ನು ಲಾರಿಯಿಂದ ಇಳಿಸುತ್ತಿರುವುದು.

ಮೈಸೂರು,ಅ.12(ಎಂಟಿವೈ)– ದಸರಾ ಮಹೋತ್ಸವದಲ್ಲಿ ಅತೀ ಹೆಚ್ಚು ವೀಕ್ಷಕರನ್ನು ಸೆಳೆಯುವ ಕಾರ್ಯಕ್ರಮಗಳಲ್ಲಿ ಒಂದಾದ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ ಬಿರುಸಿನಿಂದ ಸಾಗುತ್ತಿದ್ದು, ಈ ಬಾರಿ ದಸರಾ ಫಲಪುಷ್ಪ ಪ್ರದರ್ಶನದ ನಿರ್ವಹಣೆಗೆ 2.10 ಕೋಟಿ ರೂ. ಮೊತ್ತದಲ್ಲಿ ನಾಲ್ಕು ಪ್ರತ್ಯೇಕ ಟೆಂಡರ್ ನೀಡಲಾಗಿದೆ.

ನವರಾತ್ರಿ ಆರಂಭದ ದಿನವೇ(ಅ.15) ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ದೊರೆಯಲಿದ್ದು, ಇದಕ್ಕಾಗಿ ಹೂವಿನ ಗಿಡಗಳ ಜೋಡಣಾ ಕಾರ್ಯ ಬಿರುಸಾಗಿ ನಡೆಸಲಾಗುತ್ತಿದೆ. ಕಳೆದ 3–4 ದಿನಗಳಿಂದ ಫಲಪುಷ್ಪ ಪ್ರದರ್ಶನ ನಡೆಯುವ ಕುಪ್ಪಣ್ಣ ಪಾರ್ಕ್‌ನಲ್ಲಿ ಕಳೆ ಗಿಡ ತೆರವು, ಅಲಂಕಾರಿಕ ಗಿಡಗಳಿಗೆ ಅಂತಿಮ ರೂಪ ನೀಡುವ ಕಾರ್ಯ ನಡೆಸಲಾಗುತ್ತಿದೆ. ಇಂದಿನಿಂದ ವಿವಿಧ ನರ್ಸರಿಗಳಲ್ಲಿ ಬೆಳೆಸಿದ್ದ ಬಗೆ ಬಗೆಯ ಹೂವಿನ ಗಿಡಗಳ ಕುಂಡಗಳನ್ನು ಕುಪ್ಪಣ್ಣ ಪಾರ್ಕ್‌ಗೆ ತಂದು ಜೋಡಣೆ ಮಾಡುವ ಕಾರ್ಯ ಆರಂಭಿಸಲಾಗಿದೆ.

ಕಳೆದ 3–4 ತಿಂಗಳಿಂದ ಫಲಪುಷ್ಪ ಪ್ರದರ್ಶನಕ್ಕೆ ತೋಟಗಾರಿಕಾ ಇಲಾಖೆಯ ವಿವಿಧ ನರ್ಸರಿಗಳಲ್ಲಿ ಸುಮಾರು 85 ಸಾವಿರಕ್ಕೂ ಹೆಚ್ಚು ಹೂವಿನ ಕುಂಡಗಳಲ್ಲಿ ಗಿಡಗಳನ್ನು ಬೆಳೆಸಲಾಗಿದೆ. ಇದರಲ್ಲಿ ಫ್ರೆಂಚ್ ಮೇರಿ ಗೋಲ್ಡ್, ಡಯಾಂತರ್ಸ್, ವರ್ಬನ, ಬಿಗೋನಿಯಾ, ದಾಲಿಯಾ, ಫೈರ್ ಬುಸ್, ಆರ್ನಮೆಂಟಲ್ ಕೇಲಾ, ಜೀನಿಯಾ, ವಿಂಕಾ, ಸಾಲ್ವಿಯಾ, ಮಾರಿ ಗೋಲ್ಡ್, ಸ್ವೀಟ್ ವಿಲಿಯಮ್, ಸೆಲೋಶಿಯಾ ಸೇರಿದಂತೆ 40ಕ್ಕೂ ಹೆಚ್ಚು ತಳಿಯ ಹೂವಿನ ಗಿಡಗಳ ಜೋಡಣಾ ಕಾರ್ಯ ಆರಂಭವಾಗಿದೆ.

ಹೊರ ರಾಜ್ಯದ ಹೂವಿನ ಗಿಡಗಳಿಂದ ಅಂದ: ಕುಪ್ಪಣ್ಣ ಪಾರ್ಕ್‌ನಲ್ಲಿನ ಗಾಜಿನ ಮನೆಯಲ್ಲಿ ಜೋಡಣೆ ಮಾಡಲು ತಮಿಳುನಾಡಿನ ಊಟಿ, ಪುಣೆ, ಕೋಲ್ಕತ್ತಾದಿಂದಲೂ 35 ಸಾವಿರ ವಿವಿಧ ಹೂವಿನ ಗಿಡಗಳುಳ್ಳ ಕುಂಡಗಳ ಖರೀದಿಸಿ, ತರಲಾಗಿದೆ. ಮೊದಲ ಹಂತದಲ್ಲಿ ಬುಧವಾರ ಒಂದು ಲಾರಿಯಷ್ಟು ಹೂವಿನ ಗಿಡಗಳನ್ನು ಟ್ರೇಗಳಲ್ಲಿಟ್ಟು ಸುರಕ್ಷಿತವಾಗಿ ತರಲಾಗಿದೆ. ಎರಡನೇ ಹಂತದಲ್ಲಿ, ನಾಳೆ ಬೆಳಗ್ಗೆ ಮತ್ತಷ್ಟು ಗಿಡಗಳು ಬರಲಿವೆ. ಅ.15ರಿಂದ 24ರವರೆಗೆ ದಸರಾ ಮಹೋತ್ಸವ ಜರುಗಲಿದ್ದು, ಈ ಅವಧಿಯಲ್ಲಿ ಫಲಪುಷ್ಪ ಪ್ರದರ್ಶನದಲ್ಲಿನ ಪುಷ್ಪಗಳು ಪ್ರವಾಸಿಗರ ಕಣ್ಮನ ಸೆಳೆಯಲಿವೆ.

ಗಾಜಿನ ಮನೆಯಲ್ಲಿ ಚಂದ್ರಯಾನ: ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಗಾಜಿನ ಮನೆಯಲ್ಲಿ ಈ ಬಾರಿ 'ಚಂದ್ರಯಾನ–3' ಕೋಲ್ಕತ್ತಾದ ಸೇವಂತಿಗೆ ಹೂವಿನಿಂದ ಅರಳಲಿದ್ದು, ಈಗಾಗಲೇ ಅದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಬಿಳಿ ಬಣ್ಣದ ಹೂವಿನಿಂದ ಚಂದ್ರಯಾನ–3 ಪ್ರತಿರೂಪ, ಅದರ ಪಕ್ಕ 18 ಅಡಿ ಎತ್ತರದ ರಾಕೆಟ್, ಪ್ರಜ್ಞಾನ್ ರೋವರ್ ಲ್ಯಾಂಡ್ ಹೂವುಗಳಿಂದಲೇ ರೂಪುಗೊಳ್ಳುತ್ತಿದ್ದು, ಅದಕ್ಕೆ ಸ್ಪಂಚ್ ಬಳಸಿ ಆಕೃತಿ ನಿರ್ಮಾಣ ಮಾಡಲಾಗುತ್ತಿದೆ. ಇನ್ನೆರಡು ದಿನದಲ್ಲಿ ಗಾಜಿನ ಮನೆಯಲ್ಲಿನ ಆಕೃತಿಗಳು ಅಂತಿಮ ರೂಪುಗೊಳ್ಳಲಿವೆ.

ಸಂವಿಧಾನ ಪೀಠಿಕೆ: ಇತ್ತೀಚೆಗೆ ರಾಜ್ಯದಲ್ಲಿ ಆಚರಿಸಿದ ಪ್ರಜಾಪ್ರಭುತ್ವದ ದಿನದ ಕಾರ್ಯಕ್ರಮದ ಅಂಗವಾಗಿ ಈ ಬಾರಿ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಸಂವಿಧಾನ ಪೀಠಿಕೆಯುಳ್ಳ ಸೆಲ್ಫಿ ಪಾಯಿಂಟ್ ನಿರ್ಮಾಣಕ್ಕೂ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಗೆದ್ದು ಬಾ ಇಂಡಿಯಾ: ಭಾರತ ಆತಿಥ್ಯ ವಹಿಸಿರುವ 13ನೇ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ಹಿನ್ನೆಲೆಯಲ್ಲಿ ಭಾರತ ತಂಡವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದಸರಾ ಫಲಪುಷ್ಪ ಪ್ರದರ್ಶನದಲ್ಲಿ 'ಗೆದ್ದು ಬಾ ಇಂಡಿಯಾ' ಹೂವಿನಿಂದಲೇ ಕ್ರಿಕೆಟ್ ಬ್ಯಾಟ್, ಬಾಲ್, ವಿಕೆಟ್‌ಗಳ ಆಕೃತಿ ರೂಪಿಸಲು ಸ್ಥಳ ಗುರುತಿಸಲಾಗಿದ್ದು, ನಾಳೆಯಿಂದ ಕ್ರಿಕೆಟ್ ಆಕೃತಿ ನಿರ್ಮಾಣ ಕಾರ್ಯ ಆರಂಭವಾಗಲಿದೆ.

ದಾಖಲೆಯ ಟೆಂಡರ್: ದಸರಾ ಫಲಪುಷ್ಪ ಪ್ರದರ್ಶನಕ್ಕೆ ಈ ಬಾರಿ ಪ್ರತ್ಯೇಕವಾಗಿ ನಾಲ್ಕು ಟೆಂಡರ್ ಕರೆಯಲಾಗಿತ್ತು. ಅದರಲ್ಲಿ ಪ್ರವೇಶ ದ್ವಾರದ ಟಿಕೆಟ್ ಸಂಗ್ರಹಕ್ಕೆ ವಿಜಯ್‌ಕುಮಾರ್ ಎಂಬುವರು 1.02 ಕೋಟಿ ರೂ. ಮೊತ್ತಕ್ಕೆ ಟೆಂಡರ್ ಪಡೆದಿದ್ದರೆ, ಸುಹೇಲ್, ಅಮ್ಯೂಸ್‌ಮೆಂಟ್ ಪಾರ್ಕ್‌ಗೆ 31.27 ಲಕ್ಷ, ಆಹಾರ ಮಳಿಗೆಗಳ 50.15 ಲಕ್ಷ ರೂ. ಟೆಂಡರ್ ತೆಗೆದುಕೊಂಡಿದ್ದಾರೆ. ಗಾಜಿನ ಮನೆಯಲ್ಲಿ ಚಂದ್ರಯಾನ–3 ಸೇರಿದಂತೆ ವಿವಿಧ ಆಕೃತಿ ನಿರ್ಮಾಣಕ್ಕಾಗಿ ಉಮಾಶಂಕರ್ ಎಂಬುವವರಿಗೆ 28.95 ಲಕ್ಷ ರೂ.ಗೆ ಟೆಂಡರ್ ತನ್ನದಾಗಿಸಿಕೊಂಡಿದ್ದಾರೆ. ಒಟ್ಟಾರೆ ಈ ಬಾರಿ ದಸರಾ ಫಲಪುಷ್ಪ ಪ್ರದರ್ಶನ 2.10 ಕೋಟಿ ರೂ. ಮೊತ್ತಕ್ಕೆ ಟೆಂಡರ್ ಹರಾಜಾಗಿದೆ.

ಸಿಬ್ಬಂದಿಗಳ ಶ್ರಮ: ವಿವಿಧ ನರ್ಸರಿಗಳಲ್ಲಿ ಹೂವಿನ ಗಿಡ ಬೆಳೆಸಿದ್ದ ಸಿಬ್ಬಂದಿಯನ್ನು ಕುಪ್ಪಣ್ಣ ಪಾರ್ಕ್‌ನಲ್ಲಿ ಗಿಡ ಜೋಡಣೆ ಮಾಡಲು ಬಳಸಿಕೊಳ್ಳಲಾಗುತ್ತಿದ್ದು, ಬೆಳಗ್ಗಿನಿಂದ ರಾತ್ರಿ ಬಹುಹೊತ್ತಿನವರೆಗೂ ಕುಪ್ಪಣ್ಣ ಪಾರ್ಕ್‌ನಲ್ಲಿ ಪಾಟ್ ಜೋಡಣಾ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಮುದ ನೀಡುವಂತೆ ಹೂವಿನ ಗಿಡಗಳ ಪಾಟ್‌ಗಳನ್ನು ಆಕರ್ಷಕವಾಗಿ ಜೋಡಣೆ ಮಾಡಲು ಚಾಕಚಕ್ಯತೆ ಹೊಂದಿರುವ ಸಿಬ್ಬಂದಿ ಗಿಡ ಜೋಡಿಸುವುದರಲ್ಲೇ ಹೈರಾಣಾಗುತ್ತಿದ್ದಾರೆ.



ದಸರಾ ಫಲಪುಷ್ಪ ಪ್ರದರ್ಶನದ ಅಂಗವಾಗಿ ಕುಪ್ಪಣ್ಣ ಪಾರ್ಕ್‌ನಲ್ಲಿ ಗಿಡ ಜೋಡಣೆ ಮಾಡುತ್ತಿರುವ ಸಿಬ್ಬಂದಿ.

ಶಿಕ್ಷಣ ಇಲಾಖೆ ಕಾರ್ಯಕ್ರಮಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾಯಿಸುತ್ತಿರುವ ಪ್ರಕ್ರಿಯೆ ಕೈಬಿಡುವಂತೆ ಒತ್ತಾಯ



ಮೈಸೂರು, ಅ.12–ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾಯಿಸುತ್ತಿರುವ ಪ್ರಕ್ರಿಯೆಯನ್ನು ಕೈಬಿಡುವಂತೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಸಕ್ತ 2023–24ನೇ ಸಾಲಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಅಡಿಯಲ್ಲಿ ಪ್ರಸ್ತುತ ನಿರ್ವಹಿಸಲಾಗುತ್ತಿರುವ ಕೆಲವು ಕಾರ್ಯಕ್ರಮಗಳನ್ನು ವಿಕೇಂದ್ರೀಕರಣಗೊಳಿಸಿ, ಜಿಲ್ಲಾ, ತಾಲೂಕು ವಲಯಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾಯಿಸುವ ಕುರಿತು, ಪರಿಶೀಲಿಸಿ, ಸರ್ಕಾರಕ್ಕೆ ಅಭಿಪ್ರಾಯ ಸಹಿತವಾದ ವರದಿಯನ್ನು ಸಲ್ಲಿಸುವ ಸಲುವಾಗಿ ನಿರ್ದೇಶಕರು (ಪ್ರೌಢ ಶಿಕ್ಷಣ) ಶಾಲಾ ಶಿಕ್ಷಣ ಇಲಾಖೆ ಸಭೆಯನ್ನು ಕರೆದು, ಚರ್ಚಿಸಿರುವುದಾಗಿ ತಿಳಿದು ಬಂದಿರುತ್ತದೆ. ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾಯಿಸುತ್ತಿರುವುದು ಅವೈಜ್ಞಾನಿಕವಾಗಿದೆ. ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲವೆಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ತೀರ್ಮಾನಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನೀಡುವುದರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಲು ಸಾಧ್ಯವಾಗುವುದಿಲ್ಲ. ಇದು ಅತ್ಯಂತ ಶೋಚನೀಯ ಸಂಗತಿ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬಹು ದೊಡ್ಡ ಇಲಾಖೆಯಾಗಿದ್ದು, ತನ್ನ ಇಲಾಖೆಯ ಕಾರ್ಯಕ್ರಮಗಳನ್ನೇ ಸಮರ್ಪಕವಾಗಿ ನಿರ್ವಹಣೆ ಮಾಡುವುದು ಕಷ್ಟಸಾಧ್ಯವಾಗಿದೆ. ಶಿಕ್ಷಣ ಇಲಾಖೆಯ ಕಾರ್ಯಯೋಜನೆಯನ್ನು ನೌಕರರ ಕೊರತೆ ಇರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಯಾವ ರೀತಿ ನಿರ್ವಹಿಸಲು ಸಾಧ್ಯ? ಎಂಬುದನ್ನು ಶಿಕ್ಷಣ ಇಲಾಖೆ ಅಧಿಕಾರಿಗಳು ಗಮನಿಸದೆ, ಇಲಾಖೆಯ ದೀರ್ಘಕಾಲದ ವ್ಯವಸ್ಥೆಯನ್ನು ಹಾಳು ಮಾಡಲು ಹೊರಟಿರುವುದನ್ನು ಖಂಡಿಸುತ್ತೇನೆ. ಆದಕಾರಣ, ಈ ಕೂಡಲೇ ಸದರಿ ಪ್ರಸ್ತಾವನೆಯನ್ನು ಕೈಬಿಡುವಂತೆ ಶಾಲಾ ಶಿಕ್ಷಣ ಹಾಗೂ ಸಾಕ್ಷರತೆ ಸಚಿವರನ್ನು ಒತ್ತಾಯಿಸುವುದಾಗಿ ತಿಳಿಸಿದ್ದಾರೆ. ಹಾಗೊಂದು ವೇಳೆ ಪ್ರಸ್ತಾವನೆಯನ್ನು ಕೈಬಿಡದಿದ್ದರೆ ಹೋರಾಟ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ರಾಜ್ಯದಲ್ಲಿ 8,500 ಶಾಲಾ ಮಕ್ಕಳಲ್ಲಿ ದೃಷ್ಟಿದೋಷ

- ■ ಮೈಸೂರು ಜಿಲ್ಲೆಯಲ್ಲಿ 850 ಮಕ್ಕಳು
- ■ ಶಿಕ್ಷಣ ಇಲಾಖೆಯಿಂದ ಜಾಗೃತಿ ಕಾರ್ಯಕ್ರಮ

ಮೈಸೂರು, ಅ.12(ಎಸ್‌ಪಿಎನ್)– ರಾಜ್ಯಾದ್ಯಂತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ 8,500 ಮಕ್ಕಳಲ್ಲಿ ದೃಷ್ಟಿದೋಷ ಕಾಣಿಸಿಕೊಂಡಿದ್ದು, ಮೈಸೂರು ಜಿಲ್ಲೆಯಲ್ಲಿ ವಿವಿಧ ವಯಸ್ಸಿನ 850 ಮಕ್ಕಳಲ್ಲಿ ದೃಷ್ಟಿದೋಷ ಕಾಣಿಸಿಕೊಂಡಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಗಂಭೀರವಾಗಿ ಪರಿಗಣಿಸಿದೆ ಎಂದು ಡಿಡಿಪಿಐ ಹೆಚ್.ಕೆ.ಪಾಂಡು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಚಿಕ್ಕ ವಯಸ್ಸಿನವರಲ್ಲಿ ಅತಿಯಾದ ಮೊಬೈಲ್ ಗೀಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಚಿಕ್ಕ ವಯಸ್ಸಿನ ಮಕ್ಕಳು ದೃಷ್ಟಿದೋಷಕ್ಕೆ ತುತ್ತಾಗಿ, ಕನ್ನಡಕ ಬಳಕೆ ಇಲ್ಲದೆ, ಓದು–ಬರಹ ಕಲಿಯಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಶಾಲಾ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲು ಎಲ್ಲಾ ಬಿಇಓಗಳಿಗೆ ಸೂಚಿಸಲಾಗಿದೆ ಎಂದರು. ಈಗಾಗಲೇ ಗುರುತಿಸಿರುವ ದೃಷ್ಟಿದೋಷವುಳ್ಳ 850 ಮಕ್ಕಳಿಗೆ ಕನ್ನಡಕ, ಮೊಬೈಲ್ ಗೀಳಿನಿಂದ ಹೊರಗಡೆ ತರುವ ಕುರಿತು ಆಯಾಯ ಶಾಲೆಗಳ ಮುಖ್ಯಶಿಕ್ಷಕರಿಗೆ ರಾಜ್ಯ ಯೋಜನಾ ನಿರ್ದೇಶಕರ ಸೂಚನೆ ಮೇರೆಗೆ ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬಿಸಿಯೂಟ ನೌಕರರಿಗೆ ಕನಿಷ್ಠ ವೇತನ ಜಾರಿ ಮಾಡಬೇಕು

ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ ಪ್ರತಿಪಾದನೆ



ಮೈಸೂರು, ಅ.12(ಎಸ್‌ಪಿಎನ್)– ಸರ್ಕಾರಿ, ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಬಿಸಿಯೂಟ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ 1,18,586 ಮಂದಿಗೆ ಕಾರ್ಮಿಕ ಇಲಾಖೆಯ ನಿಯಮದಂತೆ ಕನಿಷ್ಠ ವೇತನ ಜಾರಿಗೊಳಿಸಬೇಕು ಎಂದು ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ ಅಭಿಪ್ರಾಯಪಟ್ಟರು.

ಮೈಸೂರು ರಾಮಸ್ವಾಮಿ ವೃತ್ತದಲ್ಲಿರುವ ಎಐಯುಟಿಯುಸಿ ಸಭಾಂಗಣದಲ್ಲಿ ಅಕ್ಷರ ದಾಸೋಹ ಕಾರ್ಮಿಕರ ಸಮಸ್ಯೆ ಹಾಗೂ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದರು.

ನಮ್ಮ ರಾಜ್ಯದಲ್ಲಿ 1,18,586 ಬಿಸಿಯೂಟ ಕಾರ್ಮಿಕರು, ಮೈಸೂರಿನಲ್ಲಿ 5,800 ಬಿಸಿಯೂಟ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಬಹುತೇಕ ಮಂದಿ ಶಿಕ್ಷಣದಿಂದ ವಂಚಿತ ಮಹಿಳೆಯರಾಗಿದ್ದಾರೆ. ಒಂದರ್ಥದಲ್ಲಿ ಈ ಯೋಜನೆಯಡಿ ತೊಡಗಿರುವ ಬಿಸಿಯೂಟ ಕಾರ್ಮಿಕರು ಶಿಕ್ಷಣ ಇಲಾಖೆಯಿಂದ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದ್ದಾರೆ ಎಂದರು. ರಾಜ್ಯದ ಕಾರ್ಮಿಕ ಇಲಾಖೆ ಎಲ್ಲಾ ದುಡಿಯುವ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಕಾಯ್ದೆಯನ್ನು ಜಾರಿಗೊಳಿಸಿದೆ. ಅದರಂತೆ ಸರ್ಕಾರಿ ಹಾಸ್ಟೆಲ್‌ಗಳಲ್ಲಿ, ಮದುವೆ ಛತ್ರಗಳಲ್ಲಿ ಕೆಲಸ ಮಾಡುವ ಅಡುಗೆಯವರಿಗೆ ಮತ್ತು ಸಹಾಯಕರಿಗೂ ವೇತನ ನಿಗದಿಗೊಳಿಸಿದೆ. ಆದರೆ ಈ ಶೆಡ್ಯೂಲ್‌ನಲ್ಲಿ ಬಿಸಿಯೂಟ ಕಾರ್ಮಿಕರನ್ನು ಹೊರಗಿಟ್ಟಿರುವುದು ಎಷ್ಟರಮಟ್ಟಿಗೆ ಸರಿ ಎಂದರು.

ಹಕ್ಕೊತ್ತಾಯಗಳು: ರಾಜ್ಯ ಸರ್ಕಾರದ ಶಾಲೆಗಳಲ್ಲಿ ಹಲವಾರು ವರ್ಷಗಳಿಂದ ಮಧ್ಯಾಹ್ನದ ಬಿಸಿ ಊಟದ ಅಡುಗೆ ತಯಾರು ಮಾಡುವ ಮುಖ್ಯ ಅಡುಗೆಯವರು, ಅಡುಗೆಯವರು, ಅಡುಗೆ ಸಹಾಯಕರನ್ನು ಅವರು ಕೆಲಸ ಮಾಡುತ್ತಿರುವ ಹುದ್ದೆಗಳಲ್ಲಿ ಖಾಯಂಗೊಳಿಸಬೇಕು. ಇಲ್ಲವೇ ಇವರನ್ನು ಈ ಹುದ್ದೆಗಳಲ್ಲಿ ಖಾಯಂಗೊಳಿಸುವವರೆಗೆ ಮುಖ್ಯ ಅಡುಗೆಯವರು, ಅಡುಗೆಯವರು, ಅಡುಗೆ ಸಹಾಯಕರ ಹುದ್ದೆಗಳಿಗೆ ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯ ಮಾಸಿಕ ವೇತನ ಇಪಿಎಫ್/ಇಎಸ್‌ಐ ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಶಾಸನಬದ್ಧ ಸೌಕರ್ಯಗಳಾದ ವಾರದ ರಜೆ, ರಾಷ್ಟ್ರೀಯ ಹಬ್ಬದ ರಜೆ, ಹೆರಿಗೆ ರಜೆಗಳನ್ನು ನೀಡಬೇಕು. ಈ ರಜಾ ದಿನಗಳಲ್ಲಿ ಕೆಲಸ ಮಾಡಿದವರಿಗೆ ದುಪ್ಪಟ್ಟು ವೇತನ ನೀಡಬೇಕು. ಮಾಸಿಕ ವೇತನವನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಾರ್ಮಿಕರ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು, ಪ್ರತಿ ತಿಂಗಳು ವೇತನ ಚೀಟಿ ನೀಡಬೇಕು. ಸುರಕ್ಷಿತ ನಿವೃತ್ತಿ ಬದುಕು ಖಾತ್ರಿಪಡಿಸುವುದಕ್ಕಾಗಿ, ನಿವೃತ್ತಿ ವೇತನಕ್ಕೆ ಒಳಪಡಿಸಿ, ಅಲ್ಲಿಯವರೆಗೆ 5 ಲಕ್ಷ ರೂ. ಇಡುಗಂಟು ನೀಡಬೇಕು ಮತ್ತು ಜೀವ ವಿಮೆಗೆ ಒಳಪಡಿಸಿ ಇಲಾಖೆಯಿಂದ ಪ್ರೀಮಿಯಂ ಪಾವತಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ನೂತನ ನಗರ ಸಮಿತಿ ಅಧ್ಯಕ್ಷರಾಗಿ ಕಾಮಾಕ್ಷಿ, ಕಾರ್ಯದರ್ಶಿ ಕೆ.ವಿ.ಉಮಾ, ಉಪಾಧ್ಯಕ್ಷ ಪಾರ್ವತಿ, ಹಸೀನಾ ಸುಲ್ತಾನಾ, ಜಂಟಿ ಕಾರ್ಯದರ್ಶಿ ಗಾಯತ್ರಿ, ಸದಸ್ಯರಾಗಿ ವಸಂತ, ಪುಟ್ಟೀಲಮ್ಮ ಸಿತಾರಾ, ಪಾರ್ವತಿ, ಗಾಯತ್ರಿ, ಲಕ್ಷ್ಮಿ, ಸಾಕಮ್ಮ, ಮಹದೇವಮ್ಮ, ತಾಯಿಮಣಿ, ಮಾಲಾ, ಮಂಗಳಾ ಆಯ್ಕೆಯಾದರು. ಕರ್ನಾಟಕದ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ ರಾಜ್ಯ ಕಾರ್ಯದರ್ಶಿ ಪಿ.ಎಸ್.ಸಂಧ್ಯಾ, ರಾಜ್ಯ ಉಪಾಧ್ಯಕ್ಷರಾದ ರಾಜೇಶ್ವರಿ, ರಾಜ್ಯ ಕೌನ್ಸಿಲ್ ಸದಸ್ಯರಾದ ಹಸೀನಾ ಸುಲ್ತಾನಾ, ಜಿಲ್ಲಾ ಸಮಿತಿ ಸದಸ್ಯ ಹರೀಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 13 ಅಕ್ಟೋಬರ್ 2023

ಕೊಡಗಿನಲ್ಲೇ ಕಾವೇರಿ ನದಿ ಕಲುಷಿತ

ನದಿ ಗಡಿ ಸರ್ವೆ ಮಾಡಿ ಸಂರಕ್ಷಿಸಿ, ಅಭಿವೃದ್ಧಿಗೆ ಆಗ್ರಹ



ಮಡಿಕೇರಿ, ಅ.12– ಕೊಡಗು ಜಿಲ್ಲೆಯಲ್ಲಿ ಕಾವೇರಿ ನದಿ ಗಡಿ ಗುರುತು ಸರ್ವೆ ಮಾಡುವ ಮೂಲಕ ನದಿಯ ಸಂರಕ್ಷಣೆ, ನದಿ ತಟಗಳ ಅಭಿವೃದ್ಧಿ ಹಾಗೂ ನದಿ ವ್ಯಾಪ್ತಿಯ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ ಸರ್ಕಾರದಿಂದ ಯೋಜನೆ ರೂಪಿಸಬೇಕೆಂದು ಕಾವೇರಿ ರಿವರ್ ಸೇವಾ ಟ್ರಸ್ಟ್ ಮನವಿ ಮಾಡಿದೆ.

ಜಿಲ್ಲಾಧಿಕಾರಿ ವೆಂಕಟರಾಜಾ ಹಾಗೂ ಜಿಪಂ ಸಿಇಒ ವರ್ಣಿತ್ ನೇಗಿ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಎಂ.ಎನ್. ಚಂದ್ರಮೋಹನ್, ಜೀವನದಿ ಕಾವೇರಿ ಕೊಡಗು ಜಿಲ್ಲೆಯಲ್ಲಿ ಮೂಲದಿಂದಲೇ ನಿರಂತರವಾಗಿ ಕಲುಷಿತಗೊಳ್ಳುತ್ತಿದ್ದು ಸಂರಕ್ಷಿಸುವ ಅಗತ್ಯವಿದೆ ಎಂದರು.

ನಗರ, ಪಟ್ಟಣ ಮತ್ತು ಗ್ರಾಮಗಳ ತ್ಯಾಜ್ಯ, ಕಲುಷಿತ ನೀರು ನದಿಗೆ ನೇರವಾಗಿ ಸೇರುತ್ತಿದೆ. ನದಿದಂಡೆ ಒತ್ತುವರಿಯಾಗುತ್ತಿದ್ದು, ಅಕ್ರಮವಾಗಿ ಹೊಟೇಲ್, ಅಂಗಡಿ ಮುಂಗಟ್ಟುಗಳು ನಿರ್ಮಾಣವಾಗುತ್ತಿದೆ. ಇಲ್ಲಿಗೆ ಬರುವ ಪ್ರವಾಸಿಗರಿಂದ ಉತ್ಪತ್ತಿಯಾಗುವ ತ್ಯಾಜ್ಯಗಳು ಅವೈಜ್ಞಾನಿಕವಾಗಿ ವಿಲೇವಾರಿಯಾಗಿ ನದಿ ಕಲುಷಿತವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿರಾಜಪೇಟೆ ತಾಲೂಕಿನ ಕಾಕೋಟುಪರಂಬು ಮತ್ತು ಬೇತ್ರಿ ವ್ಯಾಪ್ತಿಯಲ್ಲಿ ನದಿ ನೀರು ಕಲುಷಿತವಾಗುತ್ತಿದೆ. ಹಾಲುಗುಂದ, ಕಣ್ಣಂಗಾಲ ಮತ್ತು ಸಿದ್ದಾಪುರ ನದಿ ತಟದಲ್ಲಿ ಇದೇ ಪರಿಸ್ಥಿತಿ ಇದ್ದು, ಮನೆಗಳಿಂದ ನೇರವಾಗಿ ತ್ಯಾಜ್ಯ ನದಿಗೆ ಸೇರುತ್ತಿದೆ. ನದಿ ತಟದಲ್ಲಿರುವ ಮನೆಗಳನ್ನು ಸ್ಥಳಾಂತರಿಸಿ, ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸಬೇಕು.

ಕಸ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು, ಸೂಚನಾ ಫಲಕದ ಮೂಲಕ ಜನರಿಗೆ ಅರಿವು ಮೂಡಿಸಬೇಕು, ಮಾರುಕಟ್ಟೆ ವ್ಯಾಪ್ತಿಯಲ್ಲಿ ಸಮುದಾಯ ಶೌಚಾಲಯ ನಿರ್ಮಾಣ, ನಿರ್ವಹಣೆ, ಮಾಂಸದ ಅಂಗಡಿಗಳಿಂದ ಹೊರಸೂಸುವ ತ್ಯಾಜ್ಯಗಳ ಸಮರ್ಪಕ ವಿಲೇವಾರಿ, ಒಳಚರಂಡಿ ಯೋಜನೆಯ ಕ್ರಮಕ್ಕೆ ಆದ್ಯತೆ ನೀಡಬೇಕು. ಮನೆಗಳನ್ನು ತೆರವುಗೊಳಿಸಿ ಪುನರ್ವಸತಿ ಕಲ್ಪಿಸಬೇಕು ಮತ್ತು ನದಿ ತಟವನ್ನು ಅಭಿವೃದ್ಧಿಪಡಿಸಬೇಕೆಂದು ಆಗ್ರಹಿಸಿದರು.

ಕುಶಾಲನಗರ ವ್ಯಾಪ್ತಿಯಲ್ಲಿ ನಂಜರಾಯಪಟ್ಟಣದ ದುಬಾರೆ ಕಾವೇರಿ ನಿಸರ್ಗಧಾಮದಲ್ಲಿ ಮೋಟರ್ ಬೋಟ್‌ಗಳನ್ನು ರದ್ದುಗೊಳಿಸಿ ಪೆಡಲ್ ಬೋಟ್‌ಗಳನ್ನು ಜಿಲ್ಲಾಡಳಿತ ಒದಗಿಸಬೇಕು. ನದಿಗೆ ಇಳಿಯಲು ಮತ್ತು ನಿರ್ಗಮಿಸಲು ಪ್ರತ್ಯೇಕ ಗೇಟ್‌ಗಳನ್ನು ಅಳವಡಿಸಬೇಕು. ರ‍್ಯಾಫ್ಟಿಂಗ್ ಕ್ರೀಡೆ ಬಗ್ಗೆ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುವಂತೆ ಸೂಚಿಸಬೇಕು. ದುಬಾರೆ ಸಾಕಾನೆ ಶಿಬಿರಕ್ಕೆ ಪ್ರವಾಸಿಗರ ಪ್ರವೇಶಕ್ಕೆ ಸಂಪೂರ್ಣ ನಿರ್ಬಂಧ ಹೇರಬೇಕು.

ಚಿಕ್ಲಿಹೊಳೆ ಮತ್ತು ಹಾರಂಗಿ ಅಣೆಕಟ್ಟೆ ಬಳಿ ಆನೆಗಳ ಶಿಬಿರ ಪ್ರಾರಂಭಿಸಲು ಅರಣ್ಯ ಇಲಾಖೆಗೆ ಆದೇಶ ನೀಡಬೇಕು, ಪ್ರವಾಸಿ ಕೇಂದ್ರಗಳಲ್ಲಿ ಕುಡಿಯುವ ನೀರಿನ ಘಟಕ ಸ್ಥಾಪಿಸಿ ಪ್ಲಾಸ್ಟಿಕ್ ಬಾಟಲಿಗಳನ್ನು ನಿಷೇಧಿಸಬೇಕು, ಪ್ರವಾಸಿ ಕೇಂದ್ರಗಳಲ್ಲಿ ಕಸದ ಬುಟ್ಟಿ ಅಳವಡಿಸಬೇಕು, ಗ್ರಾಮ ಮತ್ತು ಪ್ರವಾಸಿ ಕೇಂದ್ರಗಳನ್ನು ಖಾಸಗಿ ಸಂಸ್ಥೆಗಳ ಮೂಲಕ ನಿರ್ವಹಣೆ ಮಾಡಬೇಕು.

ಮಳೆಗಾಲದ ಅವಧಿಯಲ್ಲಿ ಕುಶಾಲನಗರ ಪಟ್ಟಣದ ಬಹುತೇಕ ಬಡಾವಣೆಗಳು ಜಲಾವೃತಗೊಳ್ಳುತ್ತಿದ್ದು, ತಜ್ಞರ ಸಮಿತಿ ಮೂಲಕ ಕಾರಣ ಹುಡುಕಬೇಕು. ಬೈಚನಹಳ್ಳಿ– ತಾವರೆಕೆರೆ ಬಳಿಯಿಂದ ಕುಶಾಲನಗರದ ಹಳೆ ಮಾರುಕಟ್ಟೆವರೆಗೆ ನದಿಗೆ ತಡೆಗೋಡೆ ನಿರ್ಮಿಸುವ ಮೂಲಕ ಪ್ರವಾಹ ತಡೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ನದಿ ತಟಗಳ ಒತ್ತುವರಿಯನ್ನು ತೆರವುಗೊಳಿಸಿ ಅಭಿವೃದ್ಧಿಪಡಿಸುವ ಮೂಲಕ ಪ್ರವಾಸೋದ್ಯಮಕ್ಕೆ ಕ್ರಿಯಾಯೋಜನೆ ರೂಪಿಸಬೇಕು. ಮೀನು, ಮಾಂಸದಂಗಡಿಗಳನ್ನು ನದಿ ತಟದಿಂದ ದೂರ ಇಟ್ಟು ವ್ಯಾಪಾರ ಕೈಗೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಕೂಡಿಗೆ ಹಾಲಿನ ಡೈರಿಯಿಂದ ನದಿಗೆ ಕಲುಷಿತ ನೀರು ಹರಿಯದಂತೆ ಎಚ್ಚರವಹಿಸಬೇಕು, ಕುಶಾಲನಗರ ಸಮೀಪದ ಕೊಪ್ಪ ಗ್ರಾಪಂ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ಶುಂಠಿ ತೊಳೆಯುವ ಘಟಕಗಳನ್ನು ತೆರವುಗೊಳಿಸಬೇಕು, ಕುಶಾಲನಗರ ಒಳಚರಂಡಿ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಚಂದ್ರಮೋಹನ್ ಒತ್ತಾಯಿಸಿದರು.

ಒರಿಸ್ಸಾದ ಶ್ರೀ ಓಂಕಾರನಂದ ಸರಸ್ವತಿ ಸ್ವಾಮೀಜಿ, ಶ್ರೀರಂಗಪಟ್ಟಣ ಕಾವೇರಿ ತೀರ್ಥಯಾತ್ರಾ ಸಮಿತಿ ಸ್ಥಾಪಕ ಅಧ್ಯಕ್ಷ ಶ್ರೀ ಗಣೇಶ ಸ್ವರೂಪಾನಂದ ಸ್ವಾಮೀಜಿ, ಕಾವೇರಿ ನದಿ ಸ್ವಚ್ಛತಾ ಆಂದೋಲನದ ಜಿಲ್ಲಾ ಸಂಚಾಲಕರಾದ ರೀನಾ ಪ್ರಕಾಶ್, ಮಹಾ ಆರತಿ ಬಳಗದ ಸಂಚಾಲಕಿ ವನಿತಾ ಚಂದ್ರಮೋಹನ್ ಹಾಗೂ ಕಾವೇರಿ ರಿವರ್ ಸೇವಾ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಮಂಡೆಪಂಡ ಬೋಸ್ ಮೊಣ್ಣಪ್ಪ ಮನವಿ ಸಲ್ಲಿಸುವ ಸಂದರ್ಭ ಹಾಜರಿದ್ದರು.

ಮಡಿಕೇರಿ ತಾಲೂಕಿನ ತಲಕಾವೇರಿ– ಭಾಗಮಂಡಲದಲ್ಲಿ ಸಮರ್ಪಕ ಕುಡಿಯುವ ನೀರಿನ ಘಟಕ ಸ್ಥಾಪನೆ, ಸಮುದಾಯ ಶೌಚಾಲಯ ಮತ್ತು ಸಮರ್ಪಕ ನಿರ್ವಹಣೆ, ಗ್ರಾಪಂಗೆ ಕಸ ವಿಲೇವಾರಿಗೆ ವಾಹನ ಸೌಲಭ್ಯ, ಶಾಶ್ವತ ಪರಿಹಾರಕ್ಕೆ ಒಳಚರಂಡಿ ಯೋಜನೆ ಅನುಷ್ಠಾನ, ನಾಪೋಕ್ಲು ವ್ಯಾಪ್ತಿಯಲ್ಲಿ ನದಿ ತಟದಲ್ಲಿ ತಡೆಗೋಡೆ ನಿರ್ಮಾಣ, ನದಿ ತೀರದಲ್ಲಿರುವ ಒಂದು ಸಾವಿರಕ್ಕೂ ಅಧಿಕ ಮನೆಗಳ ಸ್ಥಳಾಂತರ ಹಾಗೂ ಪುನರ್ವಸತಿ ಕಲ್ಪಿಸುವುದು, ಕಸ ವಿಲೇವಾರಿಗೆ ವಾಹನ ಸೌಲಭ್ಯ, ಕೊಂಡಂಗೇರಿ ಸೇತುವೆ ಬಳಿ ತ್ಯಾಜ್ಯ ಹಾಕುವುದನ್ನು ನಿರ್ಬಂಧಿಸಿ ನದಿಯ ರಕ್ಷಣೆ ಮಾಡುವುದು, ನದಿ ಹರಿಯುವ ಮೂರ್ನಾಡು ವ್ಯಾಪ್ತಿಯಲ್ಲಿ ಕಸ ವಿಲೇವಾರಿಗೆ ಯೋಜನೆ ರೂಪಿಸಬೇಕು.

-ಎಂ.ಎನ್. ಚಂದ್ರಮೋಹನ್

'ಕೊಡವ' ಶಾಸ್ತ್ರೀಯ ಪದ ಶಾಸನಬದ್ಧಗೊಳಿಸಿ ಮರು ಸ್ಥಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಸಿಎನ್‌ಸಿ ಅಭಿನಂದನೆ



ಬೆಂಗಳೂರು, ಅ.12–ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ 'ಕೊಡಗರು' ಬದಲಾಗಿ 'ಕೊಡವ' ಎಂದು ಅಧಿಸೂಚನೆ ಹೊರಡಿಸಿದ ಹಿನ್ನೆಲೆಯಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ (ಸಿಎನ್‌ಸಿ) ಅಧ್ಯಕ್ಷ ಎನ್.ಯು.ನಾಚಪ್ಪ ಹಾಗೂ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎನ್.ಯು.ನಾಚಪ್ಪ, ನಮ್ಮ ಜನಾಂಗಕ್ಕೆ 'ಕೊಡವ' ಎಂದು ಶಾಸ್ತ್ರೀಯ ನಾಮಕರಣವನ್ನು ಶಾಸನಬದ್ಧವಾಗಿ ಮರುಸ್ಥಾಪಿಸಿದ್ದರಿಂದ ಕೊಡವರು ಸಂಭ್ರಮಿಸುತ್ತಿದ್ದೇವೆ. ಕೊಡಗರು ಬದಲಾಗಿ ಕೊಡವ ಎಂದು ಹೆಸರನ್ನು ಮರು ಸ್ಥಾಪಿಸಲು ಸಿಎನ್‌ಸಿ ಶ್ರಮಿಸಿತ್ತು. ಈ ಸಂಬಂಧ ಹೈಕೋರ್ಟ್ ಮೊರೆ ಹೋಕ್ಕಿತ್ತು. ಸಿಎನ್‌ಸಿ ಪರವಾಗಿ ಹೈಕೋರ್ಟ್‌ನಿಂದ ತೀರ್ಪು ಬಂದಿದ್ದರೂ, ಹಿಂದಿನ ಸರ್ಕಾರಗಳು ಅದನ್ನು ಅನುಷ್ಠಾನಗೊಳಿಸಲು ಹಿಂದೇಟು ಹಾಕಿದವು ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಡಗರು ಬದಲಾಗಿ ಕೊಡವ ಎಂದು ಹೆಸರನ್ನು ಮರು ಸ್ಥಾಪಿಸುವ ಮೂಲಕ ನ್ಯಾಯಾಂಗದ ಮೇಲಿನ ಗೌರವವನ್ನು ಪ್ರದರ್ಶಿಸಿದ್ದಾರೆ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ಶಾಸಕ ಎ.ಎಸ್.ಪೊನ್ನಣ್ಣ ಅವರು ಸಿಎನ್‌ಸಿ ಮಂಡಿಸಿದ ಕೊಡವ ಬುಡಕಟ್ಟಿನ ಪ್ರಧಾನ ಜನಾಂಗೀಯ ಸಮಸ್ಯೆಗಳಲ್ಲಿ ಒಂದನ್ನು ಪರಿಹರಿಸುವ ಮೂಲಕ ತಮ್ಮ ಕೊಡವ ಸ್ನೇಹಿ ಮನೋಭಾವವನ್ನು ಪ್ರದರ್ಶಿಸಿದ್ದಾರೆ ಎಂದರು. ಇನ್ನು ಮುಂದೆ ನಮ್ಮನ್ನು ಅಧಿಕೃತವಾಗಿ ಕೊಡವ ಎಂದು ಕರೆಯಲಾಗುತ್ತದೆ. ಕೊಡವ ಬುಡಕಟ್ಟು ಜನಾಂಗದವರೆಲ್ಲರೂ ಇದರ ಪ್ರಯೋಜನ ಪಡೆಯಲಿ ಎಂದು ಅವರು ಹೇಳಿದರು.

ಇದಕ್ಕೆ ಕಾರಣರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಎ.ಎಸ್.ಪೊನ್ನಣ್ಣ, ಡಾ. ಸಿ.ಎಸ್.ದ್ವಾರಕಾನಾಥ್, ಜಯಪ್ರಕಾಶ್ ಹೆಗ್ಗಡೆ, ಎಸ್‌ಪಿಪಿ ಬಲ್ಲಚಂಡ ಬೋಳ್ಳಿಯಪ್ಪ ಹೈಕೋರ್ಟ್ ನ್ಯಾಯಮೂರ್ತಿಗಳಾದ ಜಿ.ಕೃಷ್ಣ ದೀಕ್ಷಿತ್, ಸಿಎನ್‌ಸಿ ಸ್ವಯಂ ಸೇವಕರು ಹಾಗೂ ಬೆಂಬಲಿಗರಿಗೆ ತಾವು ಆಭಾರಿಯಾಗಿರುವುದಾಗಿ ನಾಚಪ್ಪ ಹೇಳಿದರು.

ಇಂದು ಲೋಕಾಯುಕ್ತರಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ, ಅ.12– ಕರ್ನಾಟಕ ಲೋಕಾಯುಕ್ತದ ಮಡಿಕೇರಿ ಕಚೇರಿಯ ಅಧಿಕಾರಿಗಳು ಅ.13 ರಂದು ಬೆಳಗ್ಗೆ 11 ಗಂಟೆಯಿಂದ 1 ಗಂಟೆಯವರೆಗೆ ಮಡಿಕೇರಿ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ವಿತರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿಯನ್ನು ಸ್ವೀಕರಿಸಲಾಗುತ್ತದೆ.

ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದು. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕೋರಿದೆ.

ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ ಮಡಿಕೇರಿಯ ದೂ.ಸಂ.08272–295297 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ವೃತ್ತಕ್ಕೆ ಮತ್ತೆ ಸಾರಿಗೆ ಬಸ್ ಡಿಕ್ಕಿ

ಬಸ್, ವೃತ್ತಕ್ಕೆ ಹಾನಿ; ಸ್ಥಳೀಯರ ಆಕ್ರೋಶ



ಮಡಿಕೇರಿ, ಅ.12– ನಗರದ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿರುವ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ವೃತ್ತಕ್ಕೆ ಕೆಎಸ್‌ಆರ್‌ಟಿಸಿ ಬಸ್ಸೊಂದು ಡಿಕ್ಕಿ ಹೊಡೆದ ಮತ್ತೊಂದು ಘಟನೆ ಬುಧವಾರ ಮಧ್ಯಾಹ್ನ ನಡೆದಿದೆ.

ಕೆಲ ಸಮಯದ ಹಿಂದೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಪ್ರತಿಮೆ ಇರುವ ವೃತ್ತಕ್ಕೆ ಹಾನಿಯಾಗಿ ಅದರ ದುರಸ್ತಿ ಕಾರ್ಯ ನಡೆಯುತ್ತಿದ್ದ ಸಂದರ್ಭದಲ್ಲೇ ಮತ್ತೊಂದು ಬಸ್ ಡಿಕ್ಕಿ ಹೊಡೆದಿದೆ. ಮಂಗಳೂರು ಡಿಪೋಗೆ ಸೇರಿದ (ಕೆಎ.19–ಎಫ್–3412) ಬಸ್, ಬಸ್ ನಿಲ್ದಾಣದಿಂದ ತೆರಳುತ್ತಿದ್ದ ಸಂದರ್ಭ ವೃತ್ತದ ಸಮೀಪ ಬೇರೊಂದು ವಾಹನಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಬಸ್‌ನ ಹಿಂಭಾಗ ವೃತ್ತದ ಸುರಕ್ಷತೆಗೆ ಅಳವಡಿಸಲಾಗಿರುವ ಕಬ್ಬಿಣದ ಗ್ರಿಲ್‌ಗೆ ಡಿಕ್ಕಿಯಾಗಿದೆ. ಇದರಿಂದ ಗ್ರಿಲ್‌ನ ಒಂದು ತುಂಡು ಮುರಿದು ಹೋಗಿದೆ. ಬಸ್‌ನ ಹಿಂಭಾಗದ ಅಂದಾಜು 5 ಅಡಿ ಉದ್ದಕ್ಕೂ ಹಾನಿಯಾಗಿದೆ.

ವಿಷಯ ಅರಿತು ಪ್ರತಿಮೆ ಪ್ರತಿಷ್ಠಾಪನೆಯ ರೂವಾರಿಯಾದ ಕೊಡವ ಮಕ್ಕಡ ಕೂಟದ ಸಂಚಾಲಕ ಬೊಳ್ಳಜ್ಜಿರ ಅಯ್ಯಪ್ಪ ಆಗಮಿಸಿ ತೀರಾ ಬೇಸರ ವ್ಯಕ್ತಪಡಿಸಿದರು. ಈ ಹಿಂದೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ವೃತ್ತಕ್ಕೆ ಹಾನಿಯಾಗಿರುವುದನ್ನು ದುರಸ್ತಿ ಮಾಡುತ್ತಿದ್ದ ಸಂದರ್ಭದಲ್ಲೇ ಮತ್ತೊಂದು ಬಸ್ ಡಿಕ್ಕಿ ಹೊಡೆದಿದೆ. ಇದು ಚಾಲಕನ ನಿರ್ಲಕ್ಷ್ಯದಿಂದ ನಡೆದಿರುವ ಘಟನೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈಗ ನಡೆಸುತ್ತಿದ್ದ ದುರಸ್ತಿ ಕಾರ್ಯಕ್ಕೆ ಇನ್ನೂ ಕೂಡ ಹಣ ಪಾವತಿಸಿಲ್ಲ. ಹೀಗಾದರೆ ಹೇಗೆ ಎಂದು ಕೆಎಸ್‌ಆರ್‌ಟಿಸಿ ಬಸ್ ಸಿಬ್ಬಂದಿಗಳ ವಿರುದ್ಧ ಅಸಮಾಧಾನ ಹೊರಗೆಡವಿದರು. ಘಟನಾ ಸ್ಥಳಕ್ಕೆ ಮಡಿಕೇರಿ ನಗರ ಪೊಲೀಸ್ ಅಧಿಕಾರಿಗಳು, ಸಂಚಾರಿ ಠಾಣಾಧಿಕಾರಿಗಳು ಆಗಮಿಸಿ, ಪರಿಶೀಲನೆ ನಡೆಸಿದರು.

ಶ್ರೀ ದಂಡಿನ ಮಾರಿಯಮ್ಮ ದೇವಸ್ಥಾನದಲ್ಲಿ ಅ.15ರಿಂದ ದೇವಿಗೆ ವಿಶೇಷ ಅಲಂಕಾರ

ಮಡಿಕೇರಿ, ಅ.12– ನಗರದ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀ ದಂಡಿನ ಮಾರಿಯಮ್ಮ ದೇವಾಲಯದಲ್ಲಿ ದಸರಾ ಹಬ್ಬದ ಪ್ರಯುಕ್ತ ಅ.15ರಿಂದ ಅ.24ರವರೆಗೆ ದೇವಿಗೆ ವಿಶೇಷ ಅಲಂಕಾರ ಪೂಜೆ ನಡೆಯಲಿದೆ. ಶ್ರೀ ದಂಡಿನ ಮಾರಿಯಮ್ಮ ದೇವಾಲಯವು 93ನೇ ವರ್ಷದ ಅದ್ದೂರಿ ದಸರಾ ಉತ್ಸವವನ್ನು ಆಚರಿಸುತ್ತಿದ್ದು, 10 ದಿನಗಳ ಕಾಲ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿವೆ. ಅ.15ರಂದು ಬೆಳ್ಳಿಯ ಅಲಂಕಾರ, ಅ.16ರಂದು ಹೂವಿನ ಅಲಂಕಾರ, ಅ.17ರಂದು ಮಹಾಲಕ್ಷ್ಮಿ ಅಲಂಕಾರ, ಅ.18 ರಂದು ಬಾಗಿನ ದೀಪ ಅಲಂಕಾರ, ಅ.19ರಂದು ಕಟೀಲು ದುರ್ಗಾ ಅಲಂಕಾರ, ಅ.20ರಂದು ಶಾರದದೇವಿ, ಅ.21ರಂದು ತಾವರೆ ಅಲಂಕಾರ, ಅ.22ರಂದು ಬಳೆ ಅಲಂಕಾರ, ಅ.23ರಂದು ನಿಂಬೆಹಣ್ಣಿನ ಅಲಂಕಾರ ಮತ್ತು ಅ.24ರಂದು ವಜ್ರದ ಅಲಂಕಾರ ನಡೆಯಲಿದೆ. ಅಲಂಕಾರ ಸೇವೆ ದುರ್ಗಾದೀಪ ನಮಸ್ಕಾರ ಪೂಜೆ ಹಾಗೂ ರಂಗ ಪೂಜೆ ಮಾಡಲು ಇಚ್ಛಿಸುವ ಭಕ್ತಾದಿಗಳು 9886976306, 8792432414 ಸಂಪರ್ಕಿಸಬಹುದಾಗಿದೆ.

ಗ್ಯಾಸ್ ಸೋರಿಕೆಯಿಂದ ಗಾಯಗೊಂಡಿದ್ದ ಮಹಿಳೆ ಸಾವು

ಕೆಲ ದಿನಗಳ ಹಿಂದೆ ಪತಿ ಕೂಡ ಸಾವನ್ನಪ್ಪಿದ್ದರು



ಮಡಿಕೇರಿ, ಅ.12– ಕೆಲ ದಿನಗಳ ಹಿಂದೆ ಗ್ಯಾಸ್ ಸ್ಟವ್ ರಿಪೇರಿ ಮಾಡುತ್ತಿದ್ದ ಸಂದರ್ಭ ಗ್ಯಾಸ್ ಸೋರಿಕೆಯಾಗಿ ಸುಟ್ಟ ಗಾಯಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರಮೇಶ್ ಅವರ ಪತ್ನಿ ರೂಪ ಅವರು ಕೂಡ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ.

ಗ್ಯಾಸ್ ಸೋರಿಕೆಯ ಘಟನೆಯಲ್ಲಿ ರಮೇಶ್, ಪತ್ನಿ ರೂಪ ಮತ್ತು ತಂದೆ ಕರಿಯಪ್ಪ ಅವರುಗಳಿಗೆ ಸುಟ್ಟಗಾಯಗಳಾಗಿದ್ದು, ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಈ ನಡುವೆ ಅ.8ರ ಬೆಳಗ್ಗೆ ರಮೇಶ್ ಮೃತಪಟ್ಟಿದ್ದು, ಮಂಗಳವಾರ ಬೆಳಗ್ಗೆ ಅವರ ಪತ್ನಿ ರೂಪ ಕೂಡ ಮೃತಪಟ್ಟಿದ್ದಾರೆ. ರಮೇಶ್ ಮತ್ತು ರೂಪ ಅವರುಗಳು ಸುಂಟಿಕೊಪ್ಪ ಸಮೀಪದ 7ನೇ ಹೊಸಕೋಟೆಯ ತೊಂಡೂರಿನಲ್ಲಿ ಅನಾಥ ಆಶ್ರಮ ನಡೆಸುವ ಮೂಲಕ ಹತ್ತಾರು ಅನಾಥ ಜೀವಗಳಿಗೆ ಆಸರೆಯಾಗಿದ್ದರು. ಅವರ 'ವಿಕಾಸ್ ಜನಸೇವಾ ಟ್ರಸ್ಟ್' ಎಂಬ ಅನಾಥ ಆಶ್ರಮದಲ್ಲಿ ಪ್ರಸ್ತುತ 30ಕ್ಕೂ ಅಧಿಕ ಅನಾಥ ವಯೋವೃದ್ಧರು ಆಶ್ರಯ ಪಡೆದಿದ್ದಾರೆ. ಮೃತರು 3 ಪುತ್ರಿಯರು ಮತ್ತು ತಂದೆಯನ್ನು ಅಗಲಿದ್ದಾರೆ.

ಕಾವೇರಿ ನಿರ್ವಹಣಾ ಮಂಡಳಿ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಅ.12– ನಿರಂತರವಾಗಿ ತಮಿಳುನಾಡಿನ ಪರ ತೀರ್ಪು ನೀಡುತ್ತಿರುವ ಕಾವೇರಿ ನೀರು ನಿರ್ವಹಣಾ ಮಂಡಳಿಯನ್ನು ವಜಾ ಮಾಡುವಂತೆ ಒತ್ತಾಯಿಸಿ ನಗರದಲ್ಲಿ ಗುರುವಾರ ಕರ್ನಾಟಕ ಸೇನಾ ಪಡೆಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕಾವೇರಿ ನೀರು ನಿರ್ವಹಣಾ ಮಂಡಳಿ, ಕೇಂದ್ರ ಸರ್ಕಾರ, ತಮಿಳುನಾಡು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ಕಾವೇರಿ ನೀರು ನಿರ್ವಹಣಾ ಮಂಡಳಿಯು ರಚನೆಯಾದ ದಿನದಿಂದಲೂ ನಿರಂತರವಾಗಿ ತಮಿಳುನಾಡಿನ ಪರವಾಗಿದ್ದು, ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಮಾಡಿಕೊಂಡು ಬಂದಿದೆ. ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವ ಕಾವೇರಿ ನೀರು ನಿರ್ವಹಣಾ ಮಂಡಳಿಯನ್ನು ಕೇಂದ್ರ ಸರ್ಕಾರ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾ. ಮುರಳಿ, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಚಾ.ವೆಂ. ರಾಜ್‌ಗೋಪಾಲ್, ಮಹೇಶ್ ಗೌಡ, ಶಿವು, ಆಲೂರು ನಾಗೇಂದ್ರ, ರಾಮಸಮುದ್ರ ಸುರೇಶ್, ಲಿಂಗರಾಜು, ಚಾ.ಹ. ರಾಮು, ಗು. ಪುರುಷೋತ್ತಮ್ ಇತರರಿದ್ದರು.

ಇಂದು ನಗರದಲ್ಲಿ ನನ್ನ ಮಣ್ಣು ನನ್ನ ದೇಶ ಅಮೃತ ಕಳಶ ರಥ ಕಾರ್ಯಕ್ರಮ

ಚಾಮರಾಜನಗರ, ಅ.12– ತಾಲೂಕು ಪಂಚಾಯಿತಿ ವತಿಯಿಂದ ನನ್ನ ಮಣ್ಣು ನನ್ನ ದೇಶ ಅಮೃತ ಕಳಶ ರಥ ಸಂಬಂಧ ಕಾರ್ಯಕ್ರಮವು ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರ ಸಮ್ಮುಖದಲ್ಲಿ ಅ.13ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ.

ತಾಲೂಕು ಪಂಚಾಯಿತಿ ಕಚೇರಿಯ ಮಾರ್ಗವಾಗಿ ಅಮೃತ ಕಳಶ ರಥವು ಸುಲ್ತಾನ್ ಷರೀಫ್ ವೃತ್ತ, ಭುವನೇಶ್ವರಿ ವೃತ್ತ (ಪಚ್ಚಪ್ಪ ವೃತ್ತ), ಚಾಮರಾಜೇಶ್ವರ ದೇವಸ್ಥಾನದ ಮಾರ್ಗವಾಗಿ ತಾಲೂಕು ಪಂಚಾಯಿತಿ ಕಚೇರಿಗೆ ತಲುಪಲಿದೆ ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಪೂರ್ಣಿಮಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌರಕಾರ್ಮಿಕರೇ ನಗರದ ಸ್ವಚ್ಛತೆಯ ಜೀವನಾಡಿಗಳು

ಪೌರಕಾರ್ಮಿಕರ ದಿನಾಚರಣೆಯಲ್ಲಿ ಶಾಸಕ ಪುಟ್ಟರಂಗಶೆಟ್ಟಿ ಅಭಿಪ್ರಾಯ



ಚಾಮರಾಜನಗರ, ಅ.12– ನಗರ ಪ್ರದೇಶಗಳು ಸ್ವಚ್ಛವಾಗಿ ಕಾಣಲು ಪ್ರಮುಖ ಕಾರಣವೇ ಪೌರಕಾರ್ಮಿಕರು. ಹೀಗಾಗಿ ಪೌರಕಾರ್ಮಿಕರೇ ನಗರದ ಸ್ವಚ್ಛತೆಯ ಜೀವನಾಡಿಗಳು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ಪೌರಾಡಳಿತ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ನಗರಾಭಿವೃದ್ಧಿ ಕೋಶದ ವತಿಯಿಂದ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆಯ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪೌರಕಾರ್ಮಿಕರ ಸೇವೆಯು ಅನನ್ಯವಾಗಿದೆ ಯಾವ ಕೆಲಸವು ಕೀಳಲ್ಲ. ಯಾವುದೇ ಕೆಲಸವು ಮೇಲೂ ಅಲ್ಲ. ಪ್ರತಿ ಕೆಲಸಕ್ಕೂ ಗೌರವವಿದೆ. ಪೌರಕಾರ್ಮಿಕರ ದಿನನಿತ್ಯದ ಕೆಲಸಕ್ಕೆ ಪ್ರತಿಯೊಬ್ಬರೂ ಗೌರವ ನೀಡಬೇಕು. ಬಸವಣ್ಣನವರು ಅಂದಿನ ಕಾಲದಲ್ಲಿಯೇ ಪ್ರತಿ ಕಾಯಕಗಳಿಗೂ ಗೌರವ ನೀಡಿದ್ದಾರೆ. ಅಂತಹ ಮಹಾನ್ ವ್ಯಕ್ತಿಗಳ ಸಂದೇಶಗಳನ್ನು ಪೂರ್ಣ ಪ್ರಮಾಣದಲ್ಲಿ ಅರ್ಥ ಮಾಡಿಕೊಂಡಾಗ ಉತ್ತಮ ನಡತೆ ಮೈಗೂಡಿಸಿಕೊಳ್ಳಬಹುದು ಎಂದರು.

ಕಾಲ ಬದಲಾದಂತೆ ಅಭ್ಯಾಸಗಳನ್ನು ಬಲಾಯಿಸಿಕೊಳ್ಳಬೇಕು. ಪೌರಕಾರ್ಮಿಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯಲು ಉತ್ತೇಜಿಸಬೇಕು. ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿರುವ ಸಮಾನ ಅವಕಾಶಗಳನ್ನು ಪಡೆದುಕೊಂಡು ಮುಖ್ಯವಾಹಿನಿಗೆ ಬರುವಂತಾಗಬೇಕು. ಸರ್ಕಾರದ ಹಲವಾರು ಅನುದಾನ, ಯೋಜನೆಗಳ ಪ್ರಯೋಜನ ಪಡೆದು ಸಮಾಜದಲ್ಲಿ ಸತ್ಪ್ರಜೆಗಳಾಗಿ ಬೆಳೆಯಬೇಕು ಎಂದು ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಸಲಹೆ ಮಾಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿ, ಪೌರಕಾರ್ಮಿಕರು ನಗರ ಹಾಗೂ ಪಟ್ಟಣಗಳ ಸ್ವಚ್ಛತೆಯ ಜೊತೆಗೆ ವೈಯಕ್ತಿಕ ಆರೋಗ್ಯಕ್ಕೂ ಹೆಚ್ಚಿನ ಗಮನವಹಿಸಬೇಕು. ಸುತ್ತಮುತ್ತಲಿನ ಸ್ವಚ್ಛತೆ ಹಾಗೂ ಕುಟುಂಬದ ಸ್ವಚ್ಛತೆಯ ಬಗ್ಗೆ ಹೆಚ್ಚು ಕಾಳಜಿ ನೀಡಬೇಕು. ಪೌರಕಾರ್ಮಿಕರು ಸರಿಯಾದ ಸಮಯಕ್ಕೆ ಆಹಾರ ಸೇವನೆ ಮಾಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್ ಮಾತನಾಡಿ, ಪೌರಕಾರ್ಮಿಕರು ಸಾಮಾನ್ಯ ದೈನಂದಿನ ಜೊತೆಗೆ ಎಲ್ಲಾ ಹಬ್ಬದ ದಿನಗಳಲ್ಲಿಯೂ ಕಾರ್ಯನಿರ್ವಹಿಸುತ್ತಾರೆ ಅಂತಹ ಪೌರಕಾರ್ಮಿಕರ ದಿನವನ್ನು ಆಚರಿಸುವುದು ನಮ್ಮ ಕರ್ತವ್ಯವಾಗಿದೆ. ಚಾಮರಾಜನಗರದಲ್ಲಿ 139 ಪೌರಕಾರ್ಮಿಕರಿದ್ದು, ಖಾಯಂ ನೌಕರರು ಹಾಗೂ ಹೊರಗುತ್ತಿಗೆ ನೌಕರರಿದ್ದಾರೆ. ಪೌರಕಾರ್ಮಿಕರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರವು ಹಲವಾರು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಇಂತಹ ವಿಶೇಷ ಸೌಲಭ್ಯ ಬಳಸಿಕೊಂಡು ಮುಂದೆ ಬರಬೇಕು ಎಂದರು.

ನಗರಸಭೆಯ ಸದಸ್ಯರಾದ ಮಹೇಶ್ ಅವರು ಮಾತನಾಡಿ, ಅಸಮಾನತೆಯನ್ನು ಹೋಗಲಾಡಿಸುವ ಪ್ರಮುಖ ಅಸ್ತ್ರವೇ ಶಿಕ್ಷಣವಾಗಿದೆ. ಎಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಸರ್ಕಾರವು ನೀಡುವ ಹಲವು ಸವಲತ್ತುಗಳನ್ನು ಪಡೆದುಕೊಂಡು ಮಕ್ಕಳು ಉನ್ನತ ಹುದ್ದೆ ಪಡೆಯುವಂತೆ ಮಾಡಬೇಕು ಎಂದರು.

ಇದೇ ವೇಳೆ ಉತ್ತಮ ಕೆಲಸ ಹಾಗೂ ಕೋವಿಡ್ ತುರ್ತು ಸಂದರ್ಭದಲ್ಲಿ ಅತ್ಯುನ್ನತ ಕಾರ್ಯನಿರ್ವಹಿಸಿದ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ನೌಕರರಿಗೆ ವಿಶೇಷ ಭತ್ಯೆ ನೀಡಲಾಯಿತು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಪೌರಕಾರ್ಮಿಕರಿಗೆ ವೈಯಕ್ತಿಕವಾಗಿ ಸೀರೆ ಹಾಗೂ ಹೊರಗುತ್ತಿಗೆ ನೌಕರರಿಗೆ ಸಹಾಯಧನ ನೀಡಿದರು. ನಗರಸಭೆಯ ಸದಸ್ಯರಾದ ಮನೋಜ್ ಪಟೇಲ್, ಕುಮುದಾ, ಚಿನ್ನಮ್ಮ, ಗಾಯಿತ್ರಿ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ ಮುಂದುವರಿಕೆ



ಚಾಮರಾಜನಗರ, ಅ.12– ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ನಗರದಲ್ಲಿ ರೈತ ಸಂಘಟನೆಗಳು ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದಿಂದ ನಡೆಯುತ್ತಿರುವ ಅಹೋರಾತ್ರಿ ಪ್ರತಿಭಟನೆ ಮೂರನೇ ದಿನವೂ ಮುಂದುವರಿಯಿತು.


ನಗರದ ಜಿಲ್ಲಾಡಳಿತ ಭವನದ ಮುಂಭಾಗ ಮಂಗಳವಾರ ಸಂಜೆಯಿಂದಲೇ ಅಹೋರಾತ್ರಿ ಧರಣಿ ಆರಂಭಿಸಿದ್ದ ಪ್ರತಿಭಟನಾಕಾರರು ಅದರ ಮುಂದುವರಿದ ಭಾಗವಾಗಿ ಮೂರನೇ ದಿನವಾದ ಗುರುವಾರವೂ ಕೂಡ ಪ್ರತಿಭಟನೆ ನಡೆಸಿದರು. ಈ ವೇಳೆ ಸರ್ಕಾರ, ಸೆಸ್ಕ್ ಇಲಾಖೆಯ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಸರ್ಕಾರದಿಂದ ರೈತರಿಗೆ ಸಮರ್ಪಕವಾಗಿ ವಿದ್ಯುತ್ ನೀಡಲು ಸಾಧ್ಯವಾಗಲಿಲ್ಲ ಎಂದರೆ, ಅಕ್ಕಿಗೆ ಯಾವ ರೀತಿ ಹಣವನ್ನು ನೀಡುತ್ತಿದೆ. ಅದೇ ಮಾದರಿಯಲ್ಲಿ ರೈತರ ಪ್ರತಿ ಕೃಷಿ ಪಂಪ್‌ಸೆಟ್‌ನ ಒಂದು ಹೆಚ್‌ಪಿ ವಿದ್ಯುತ್‌ಗೆ 10 ಸಾವಿರ ರೂ. ಪರಿಹಾರವನ್ನು ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ರೈತರು ಕೃಷಿ ಇಲಾಖೆಯ ಸಲಹೆ ಹಾಗೂ ವಿದ್ಯುತ್ ಪೂರೈಕೆಯ ಲೆಕ್ಕಾಚಾರದಡಿ ಜಮೀನಿನಲ್ಲಿ ಬೆಳೆಗಳನ್ನು ಬಿತ್ತನೆ ಮಾಡಿದ್ದೇವೆ. ಇದನ್ನು ಬದಲಾಯಿಸಿದರೆ ರೈತರಿಗೆ ನಷ್ಟವಾಗುತ್ತದೆ. ಬ್ಯಾಂಕ್ ಸಾಲ, ಮಕ್ಕಳ ಶಾಲಾ ಶುಲ್ಕ, ಜೀವನ ನಡೆಸಲು ಕಷ್ಟವಾಗುತ್ತದೆ. ಇದನ್ನು ಸರಿಪಡಿಸಬೇಕಾದರೆ ತಕ್ಷಣ ರಾಜ್ಯ ಸರ್ಕಾರ ಕೃಷಿಗೆ ಭರವಸೆ ನೀಡಿದಷ್ಟು ವಿದ್ಯುತ್ ಅನ್ನು ಪೂರೈಸಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ವಿದ್ಯುತ್ ಮಂತ್ರಿ ಅವರು ಇಷ್ಟೇ ವಿದ್ಯುತ್ ನೀಡುತ್ತೇವೆ ಎಂದು ಘೋಷಣೆ ಮಾಡಬೇಕು. ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ತಮ್ಮ ಗ್ಯಾರಂಟಿ ಈಡೇರಿಸುವ ನಿಟ್ಟಿನಲ್ಲಿ ಮಗ್ನರಾಗಿದ್ದಾರೆ. ಇದನ್ನು ನಾವು ವಿರೋಧಿಸುತ್ತೇವೆ ಎಂದು ಹಳ್ಳಿಕೆರೆಹುಂಡಿ ಭಾಗ್ಯರಾಜು ತಿಳಿಸಿದರು. ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜು, ಮುಖಂಡರಾದ ಹಳ್ಳಿಕಟ್ಟೆ ಕುಮಾರ್, ಮಲೆಯೂರು ಪ್ರವೀಣ್, ಸಿದ್ದರಾಜು, ಮರಿಯಾಲ ಮಹೇಶ್, ಆದ್ಯ ರವಿ, ದೇಮಹಳ್ಳಿ ಮಹದೇವಪ್ರಸಾದ್ ಸೇರಿದಂತೆ ಮತ್ತಿತರರು ಇದ್ದರು.

ಗುರುಸಿದ್ದಯ್ಯ ನಿಧನ



ಚಾಮರಾಜನಗರ, ಅ.12– ತಾಲೂಕಿನ ಕಾಡಹಳ್ಳಿ ನಿವಾಸಿ ಗುರುಸಿದ್ದಯ್ಯ (65) ಅನಾರೋಗ್ಯದಿಂದಾಗಿ ಬುಧವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಕಾವೇರಿ ನೀರಾವರಿ ನಿಗಮದ ಸಹಾಯಕ ಇಂಜಿನಿಯರ್ ಮಹದೇವಸ್ವಾಮಿ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದಲ್ಲಿ ನಡೆಯಿತು.

ಮುಸ್ಲಿಮರ ಮೀಸಲಾತಿ ಶೇ.8ಕ್ಕೆ ಹೆಚ್ಚಿಸುವಂತೆ ಎಸ್‌ಡಿಪಿಐ ಪ್ರತಿಭಟನೆ



ಚಾಮರಾಜನಗರ, ಅ.12– ಕಾಂತರಾಜ ಆಯೋಗದ ವರದಿಯನ್ನು ಅಂಗೀಕರಿಸಿ ಜಾರಿಗೊಳಿಸಬೇಕು. ಮುಸ್ಲಿಮರ 2ಬಿ ಮೀಸಲಾತಿ ಪ್ರಮಾಣವನ್ನು ಶೇ. 8ಕ್ಕೆ ಏರಿಕೆ ಮಾಡಬೇಕು ಎಂದು ಒತ್ತಾಯಿಸಿ ನಗರದಲ್ಲಿ ಗುರುವಾರ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಜಿಲ್ಲಾ ಘಟಕದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಯೋಜನೆಗಳು ಎಲ್ಲಾ ಸಮುದಾಯಗಳಿಗೂ ಸಮರ್ಪಕವಾಗಿ ತಲುಪಬೇಕಾದರೆ ಆಯಾ ಸಮುದಾಯಗಳ ವಸ್ತುಸ್ಥಿತಿ ಅರಿಯುವುದು ಬಹುಮುಖ್ಯವಾಗಿದೆ. ಸಮುದಾಯಗಳ ಜನಸಂಖ್ಯೆ, ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಅರಿಯದ ಹೊರತು ನ್ಯಾಯ ಒದಗಿಸಲು ಸಾಧ್ಯವಿಲ್ಲ. ಇದನ್ನು ಮನಗಂಡು ಹಿಂದಿನ ಅವಧಿಯಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಕಾಂತರಾಜ ಆಯೋಗ ರಚಿಸಿ ಜಾತಿ ಗಣತಿಗೆ ಆದೇಶ ಹೊರಡಿಸಲಾಗಿತ್ತು. 2018ರಲ್ಲಿ ವರದಿಯೂ ಸಿದ್ಧಪಡಿಸಲಾಗಿತ್ತು. ಕಾರಣಾಂತರಗಳಿಂದ ವರದಿ ಬಿಡುಗಡೆ ಮಾಡಿರಲಿಲ್ಲ ಎಂದು ದೂರಿದರು. ಕೂಡಲೇ ಕಾಂತರಾಜ ಆಯೋಗದ ವರದಿಯನ್ನು ಅಂಗೀಕರಿಸಿ ಸಾರ್ವಜನಿಕಗೊಳಿಸಬೇಕು ಎಂದು ಆಗ್ರಹಿಸಿದರು.

ಈಗಿನ ಕಾಂಗ್ರೆಸ್ ಸರ್ಕಾರವು ಸಚಿವ ಸಂಪುಟದಲ್ಲಿ ಹಿಂದಿನ ಬಿಜೆಪಿ ಸರ್ಕಾರ ರದ್ದು ಮಾಡಿದ್ದ ಮುಸ್ಲಿಮರ ಮೀಸಲಾತಿ ನಿರ್ಧಾರವನ್ನು ರದ್ದುಪಡಿಸಬೇಕು. ಮುಸ್ಲಿಮರ ಜನಸಂಖ್ಯೆಗೆ ಅನುಗುಣವಾಗಿ 2ಬಿ ಮೀಸಲಾತಿ ಪ್ರಮಾಣವನ್ನು ಶೇ. 8ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐನ ಜಿಲ್ಲಾಧ್ಯಕ್ಷರಾದ ಅಬ್ರಾರ್ ಅಹಮ್ಮದ್, ಮುಖಂಡರಾದ ಸೈಯದ್ ಆರಿಫ್, ಎಂ. ಮಹೇಶ್, ಖಲೀಲ್ ಉಲ್ಲಾ, ಅಫ್ಸರ್ ಪಾಷ, ರಾಮಸಮುದ್ರದ ಸುರೇಶ್, ಅಮೀಕ್, ಕಂದಹಳ್ಳಿ ನಾರಾಯಣ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಇಂದು ದಸರಾ ಫಲಪುಷ್ಪ ಪ್ರದರ್ಶನ ಉದ್ಘಾಟನೆ

ಮೈಸೂರು, ಅ.12–ಮೈಸೂರು ವಿಶ್ವವಿದ್ಯಾನಿಲಯ ತೋಟಗಾರಿಕೆ ವಿಭಾಗ ಮಾನಸಗಂಗೋತ್ರಿ ವತಿಯಿಂದ ಮೈಸೂರು ಕುಕ್ಕರಹಳ್ಳಿ ಕೆರೆಯ ಪೂರ್ವ ದಂಡೆಯಲ್ಲಿ 18ನೇ ವರ್ಷದ ದಸರಾ ಫಲಪುಷ್ಪ ಪ್ರದರ್ಶನವನ್ನು ಅ.13 ರಿಂದ 24ರ ವರೆಗೆ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮವನ್ನು ಅ.13 ರಂದು ಸಂಜೆ 5 ಗಂಟೆಗೆ ಕುಕ್ಕರಹಳ್ಳಿ ಕೆರೆಯ ಪೂರ್ವ ದಂಡೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲೋಕನಾಥ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮಾನ್ಯ ಕುಲ ಸಚಿವರಾದ ವಿ.ಆರ್.ಶೈಲಜಾ, ಪರೀಕ್ಷಾಂಕ ವಿಭಾಗದ ಕುಲ ಸಚಿವ ಪ್ರೊ. ಕೆ.ಎಂ. ಮಹದೇವನ್, ಹಣಕಾಸು ಅಧಿಕಾರಿ ಗಣಾದ ಕೆ.ಎಸ್.ರೇಖಾ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಭಾಗವಹಿಸುವರು ಎಂದು ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಮಹಿಷ ಉತ್ಸವಕ್ಕೆ ಅನುಮತಿ

ಕಾರ್ಯಕ್ರಮ ಸ್ಥಳಕ್ಕೆ ತೆರಳಬೇಕು. ಬೈಕ್ ರ್ಯಾಲಿ, ಪ್ರತಿಭಟನಾ ರ್ಯಾಲಿ, ಪರ-ವಿರೋಧ ಘೋಷಣೆ ಕೂಗುವುದು, ಪಟಾಕಿ ಸಿಡಿಸುವುದು, ಸಂಭ್ರಮಾಚರಣೆ, ಬದ್ದಕ್ಕಿಂತ ಹೆಚ್ಚಿನ ಜನ ಗುಂಪು ಸೇರುವುದು, ಬಹಿರಂಗ ಸಭೆ ನಡೆಸುವುದು, ಸಾರ್ವಜನಿಕ ಸ್ಥಳದಲ್ಲಿ ಪ್ರಚಾರ, ಧ್ವನಿವರ್ಧಕ ಬಳಸುವುದು, ಫ್ಲೆಕ್ಸ್–ಬ್ಯಾನರ್ ಅಳವಡಿಸುವುದು, ಕರಪತ್ರ ಹಂಚುವುದು, ಮೂರ್ತಿ ಮೆರವಣಿಗೆ ಮಾಡುವುದನ್ನು ನಿಷೇಧಿಸಲಾಗಿದೆ. ಮಹಿಷ ಉತ್ಸವ ಅಥವಾ ಮಹಿಷ ದಸರಾ ವಿರೋಧಿಸುವ ಗುಂಪು ಅಥವಾ ವ್ಯಕ್ತಿ, ಅಶಾಂತಿ ಉಂಟುಮಾಡಲು ಮುಂದಾದರೆ ಅವರು ಅಥವಾ ಅವರೂ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸೂಕ್ತ ಬಂದೋಬಸ್ತ್: ವಿಶ್ವವಿಖ್ಯಾತ ದಸರಾ ಉತ್ಸವದ ಹೊಸ್ತಿಲಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡಬಾರದು ಎಂಬ ನಿಟ್ಟಿನಲ್ಲಿ ಇಂದು ರಾತ್ರಿಯಿಂದಲೇ ಸೂಕ್ತ ಬಂದೋಬಸ್ತ್ ಮಾಡಿಕೊಳ್ಳಲಾಗುವುದು. ಚಾಮುಂಡಿಬೆಟ್ಟ, ಪುರಭವನ, ಮೈಸೂರು ಪ್ರವೇಶಿಸುವ ಸ್ಥಳಗಳು, ಸಮಸ್ಯೆಯಾಗಬಹುದಾದ ಸ್ಥಳಗಳಲ್ಲಿ ಬಿಗಿ ಬಂದೋಬಸ್ತ್ ಇರಲಿದೆ. ಎರಡು ಸಾವಿರಕ್ಕೂ ಹೆಚ್ಚು ಪೊಲೀಸರ ನಿಯೋಜಿಸಲಾಗುತ್ತದೆ. ಈ ಸಂದರ್ಭವನ್ನು ದುರ್ಬಳಕೆ ಮಾಡಿಕೊಂಡು ಶಾಂತಿ ಕದಡಬಹುದಾದ ಕಿಡಿಗೇಡಿಗಳನ್ನೂ ಗುರುತಿಸಲಾಗಿದ್ದು, ಅಂತಹವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತಿದೆ. ಹೊರ ರಾಜ್ಯಗಳಿಂದ ಜನರನ್ನು ಕರೆಸಲಾಗುತ್ತಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವುದನ್ನು ಗಂಭೀರವಾಗಿ ಪರಿಗಣಿಸಿ, ಹೊರ ರಾಜ್ಯಗಳ ವಾಹನಗಳ ಮೇಲೂ ನಿಗಾ ಇಡಲಾಗಿದೆ ಎಂದು ತಿಳಿಸಿದರು.

ಈ ಕ್ರಮ ಅನಿವಾರ್ಯ: ಮೈಸೂರಿನ ಆರ್ಥಿಕತೆ ಪ್ರವಾಸೋದ್ಯಮವನ್ನು ಅವಲಂಬಿಸಿದೆ. ದಸರಾ ಸಂದರ್ಭದಲ್ಲಿ ದೇಶ–ವಿದೇಶಗಳಿಂದ ನಿತ್ಯ ಲಕ್ಷಾಂತರ ಮಂದಿ ಆಗಮಿಸುತ್ತಾರೆ. ಪ್ರವಾಸಿಗರು ಒಂದು ಪ್ರದೇಶಕ್ಕೆ ಹೋಗುವ ಮುನ್ನ ಅಲ್ಲಿನ ಪರಿಸ್ಥಿತಿ ಗಮನಿಸುವುದು ಸಹಜ. ಸಾಮಾಜಿಕ ಜಾಲತಾಣ, ಮಾಧ್ಯಮಗಳ ವರದಿ ನೋಡುತ್ತಾರೆ. ಸಣ್ಣ ಪುಟ್ಟ ಘಟನೆಯಾದರೂ ಈ ಪರಿಸ್ಥಿತಿಯಲ್ಲಿ ಮೈಸೂರಿಗೆ ಹೋಗಬೇಕಾ ಎಂದು ಯೋಚನೆ ಮಾಡುತ್ತಾರೆ. ಪ್ರವಾಸಿಗರು ಬರದಿದ್ದರೆ ಆರ್ಥಿಕತೆಗೆ ಪೆಟ್ಟು ಬೀಳುತ್ತದೆ. ಮೈಸೂರು ಶಾಂತಿಯುತ ಪ್ರದೇಶವಾಗಿದೆ. ಇಲ್ಲಿ ಏನೂ ಆಗಬಾರದು. ಪ್ರವಾಸಿಗರಲ್ಲಿ ವಿಶ್ವಾಸ ಮೂಡಿಸುವುದರ ಜೊತೆಗೆ ಸ್ಥಳೀಯರಿಗೆ ಯಾವ ರೀತಿಯಲ್ಲೂ ತೊಂದರೆಯಾಗಬಾರದು. ಒಟ್ಟಾರೆ ಮೈಸೂರಿನಲ್ಲಿ ಶಾಂತಿ ಕಾಪಾಡುವ ನಿಟ್ಟಿನಲ್ಲಿ ನಿಷೇಧಾಜ್ಞೆ ಅನಿವಾರ್ಯ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಡಿಸಿಪಿಗಳಾದ ಮುತ್ತುರಾಜ್ ಹಾಗೂ ಜಾಹ್ನವಿ ಇದ್ದರು.

ಕಾನೂನು ಸಲಹೆ ಬಳಿಕ ಶಿಸ್ತು ಕ್ರಮ

ಮಹಿಷ ದಸರಾ ಕುರಿತು ಸಾಮಾಜಿಕ ಜಾಲತಾಣದಲ್ಲಿ ಕೆಲ ತಿಂಗಳಿಂದ ಪರ ವಿರೋಧ ಚರ್ಚೆ ನಡೆದಿದೆ. ಪ್ರಚೋದನಾಕಾರಿ ಹೇಳಿಕೆ, ಧಾರ್ಮಿಕ ಭಾವನೆಗೆ ಧಕ್ಕೆ, ವ್ಯಕ್ತಿಗತ ಟೀಕೆ, ಕಾನೂನು ಉಲ್ಲಂಘನೆ ಆಗುವ ರೀತಿಯಲ್ಲಿ ಮಾತನಾಡುವುದು ಎರಡು ದಿನಗಳಿಂದ ಹೆಚ್ಚಾಗಿದೆ. ಅದೆಲ್ಲವನ್ನೂ ಸಾಮಾಜಿಕ ಜಾಲತಾಣದಿಂದ ಸಂಗ್ರಹಿಸುವುದರ ಜೊತೆಗೆ ನೇರವಾಗಿ ಸಲ್ಲಿಕೆಯಾದ ದೂರುಗಳನ್ನು ನಮ್ಮ ಕಾನೂನು ಸಲಹೆಗಾರರಿಗೆ ನೀಡಿ, ಲಿಖಿತ ಸಲಹೆ ಕೇಳಿದ್ದೇವೆ. ಇಂದು ಸಲಹೆ ನೀಡುವ ಸಾಧ್ಯತೆ ಇದ್ದು, ಅದರ ಆಧಾರದಲ್ಲಿ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು. ಯಾರೇ ಆಗಿದ್ದರೂ ಸೂಕ್ತ ಸೆಕ್ಷನ್ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ನಿಷೇಧಾಜ್ಞೆ ಜಾರಿ

ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಮೈಸೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಚಾಮುಂಡಿಬೆಟ್ಟ ಸೇರಿದಂತೆ ಟೌನ್ ಹಾಲ್ ಆವರಣ ಹೊರತುಪಡಿಸಿ ಅಕ್ಟೋಬರ್ 14ರ ಬೆಳಗ್ಗೆ 6 ಗಂಟೆವರೆಗೆ ಸಿಆರ್‌ಪಿಸಿ ಕಲಂ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿ ಪೊಲೀಸ್ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಆ ಅವಧಿಯಲ್ಲಿ ಯಾವುದೇ ಮೆರವಣಿಗೆ, ಪ್ರತಿಭಟನೆ, ರ್ಯಾಲಿ, ಬೈಕ್ ರ್ಯಾಲಿ, ಘೋಷಣೆ ಕೂಗುವುದು, ಪಟಾಕಿ ಸಿಡಿಸಿ ಸಂಭ್ರಮಿಸುವುದು, 5ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಧ್ವನಿವರ್ಧಕ ಬಳಸುವುದು, ಫ್ಲೆಕ್ಸ್, ಬ್ಯಾನರ್ ಅಳವಡಿಸುವುದು, ಕರಪತ್ರ ಹಂಚುವುದನ್ನು ನಿರ್ಬಂಧಿಸಲಾಗಿದೆ. ಯಾವುದೇ ಸಂಘಟನೆ, ಸಾರ್ವಜನಿಕರು ಆದೇಶ ಉಲ್ಲಂಘಿಸಿದ್ದಲ್ಲಿ ಅಂತಹವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು. ಈ ಆದೇಶವು ಮದುವೆ ಸಮಾರಂಭ, ಶವ ಸಂಸ್ಕಾರ, ಶಾಲಾ–ಕಾಲೇಜು ಮತ್ತು ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳಿಗೆ ಅನ್ವಯಿಸುವುದಿಲ್ಲ ಎಂದು ಪೊಲೀಸ್ ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

ಹಣಕಾಸು ಆಯೋಗ ರಚಿಸಿದ ಸರ್ಕಾರ

ಆರ್.ಎಸ್.ಫೊಂಡೆ ಅವರು ಸಮಿತಿಯ ಸದಸ್ಯರಾಗಿರಲಿದ್ದಾರೆ. ಆಯೋಗ, ಜಿಲ್ಲಾ ಪಂಚಾಯಿತ್, ತಾಲೂಕು ಪಂಚಾಯಿತ್, ಗ್ರಾಮ ಪಂಚಾಯಿತ್, ಮುನ್ಸಿಪಲ್ ಕಾರ್ಪೊರೇಶನ್‌ಗಳು, ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳು, ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳು ಮತ್ತು ಟೌನ್ ಪಂಚಾಯಿತಿಗಳ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಲಿದೆ ಎಂದು ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ. ಈ ಆಯೋಗವು ಸರ್ಕಾರದಿಂದ ವಿಧಿಸುವ ತೆರಿಗೆಗಳು, ಸುಂಕಗಳು ಮತ್ತು ಶುಲ್ಕಗಳ ಆದಾಯಗಳನ್ನು ಸರ್ಕಾರ ಹಾಗೂ ವಿವಿಧ ನಗರ ಸ್ಥಳೀಯ ಸಂಸ್ಥೆ ಹಾಗೂ ಪಂಚಾಯತ್‌ಗಳ ನಡುವೆ ಹಂಚಿಕೆ ಮಾಡಲು ನಿಯಮಗಳನ್ನು ಶಿಫಾರಸ್ಸು ಮಾಡುತ್ತದೆ. ಸಮಿತಿಯು ಈ ಸಂಸ್ಥೆಗಳಿಗೆ ರಾಜ್ಯದ ಕ್ರೋಢೀಕೃತ ನಿಧಿಯಿಂದ ನೀಡಲಾದ ಸಹಾಯಧನ ಮತ್ತು ಅವುಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಬೇಕಾದ ಕ್ರಮಗಳನ್ನು ಪರಿಶೀಲಿಸುತ್ತದೆ. ಸಂಪನ್ಮೂಲಗಳು ಯಾವ ಪ್ರಮಾಣದಲ್ಲಿ ಮತ್ತು ಯಾವ ರೀತಿಯಲ್ಲಿ ಲಭ್ಯವಿವೆ ಎಂಬುದರ ಕುರಿತು ಪರಿಶೀಲಿಸಿ, ಲಭ್ಯವಿರುವ ಸಂಪನ್ಮೂಲಗಳನ್ನು ಈ ಸಂಸ್ಥೆಗಳ ವೆಚ್ಚವನ್ನು ಪೂರೈಸಲು ಯಾವ ರೀತಿಯಲ್ಲಿ ಉತ್ತಮವಾಗಿ ಬಳಸಿಕೊಳ್ಳಬಹುದು ಎಂಬ ಬಗ್ಗೆ ಸಲಹೆಗಳನ್ನು ನೀಡುತ್ತದೆ. ಆಯೋಗಕ್ಕೆ ಫೆ.28,2024 ರೊಳಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ.

ವಿದ್ಯುತ್‌ದ್ದೇ ದೊಡ್ಡ ಸಮಸ್ಯೆ

ಸಿದ್ದರಾಮಯ್ಯ ಅವರ ಹಿಂದಿನ ಆಡಳಿತದಲ್ಲೂ ವಿದ್ಯುತ್ ಸಮಸ್ಯೆ ಎದುರಾಗಿತ್ತು. ಅಂದು 10–13 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಹೆಚ್ಚಳ ಮಾಡಲಾಗಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ಬಿಜೆಪಿ ಸರ್ಕಾರ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಳ ಮಾಡಿಲ್ಲ. ಹೀಗಾಗಿ ಲೋಡ್‌ಶೆಡ್ಡಿಂಗ್ ಜಾರಿ ಮಾಡುವ ಸ್ಥಿತಿ ಎದುರಾಗಿದೆ. ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿದೆ. ನಮ್ಮ ಅಣೆಕಟ್ಟುಗಳಲ್ಲಿ ನೀರಿನ ಲಭ್ಯತೆ ಕಡಿಮೆ ಇದೆ. ಬರಗಾಲ ಎದುರಾದಾಗ ವಿದ್ಯುತ್ ಉತ್ಪಾದನೆ ಕುಸಿಯುತ್ತದೆ. ಅಲ್ಲದೆ, ಪ್ರತಿ ವರ್ಷ ಶೇ.10–15ರಷ್ಟು ಬೇಡಿಕೆ ಹೆಚ್ಚುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಹತ್ತು ಸಾವಿರ ಎಕರೆಯಲ್ಲಿ ಸೌರ ಮತ್ತು ಪವನಶಕ್ತಿ ವಿದ್ಯುತ್ ಉತ್ಪಾದನೆಗೆ ನಮ್ಮ ಸರ್ಕಾರ ಕಾರ್ಯಕ್ರಮ ರೂಪಿಸುತ್ತಿದೆ ಎಂದರು. ರೈತರಿಂದಲೂ ವಿದ್ಯುತ್ ಬೇಡಿಕೆ ಪ್ರಮಾಣ ಹೆಚ್ಚಾಗಿದೆ. ಕೃಷಿಕರಿಗೆ ಯಾವುದೇ ಕಾರಣಕ್ಕೂ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ. ಈಗಾಗಲೇ ನಮ್ಮ ಸಚಿವರು ಕಾರ್ಯ ಪ್ರವೃತ್ತರಾಗಿದ್ದಾರೆ ಎಂದರು.

ಕೈಗಾರಿಕೆಗಳ ಮೇಲೆ ಪರಿಣಾಮ ಬೀರದು: ಮತ್ತೊಂದೆಡೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೈಗಾರಿಕಾ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರಾದ ಎಂ.ಬಿ.ಪಾಟೀಲ್ ಮತ್ತು ಪ್ರಿಯಾಂಕ ಖರ್ಗೆ ಅವರು, ರಾಜ್ಯದಲ್ಲಿ ಎದುರಾಗಿರುವ ವಿದ್ಯುತ್ ಅಭಾವ ಕೈಗಾರಿಕಾ ಉತ್ಪಾದನೆಗಳ ಮೇಲೆ ಪರಿಣಾಮ ಬೀರದು ಎಂದಿದ್ದಾರೆ. ಬೃಹತ್ ಕೈಗಾರಿಕೆಗಳು ತಮ್ಮ ಉದ್ದಿಮೆಗೆ ಅಗತ್ಯವಾದ ವಿದ್ಯುತ್ ಅನ್ನು ತಾವೇ ಉತ್ಪಾದಿಸಿಕೊಂಡು ಹೆಚ್ಚುವರಿ ವಿದ್ಯುತ್ ಅನ್ನು ವಿದ್ಯುತ್ ಕಂಪನಿಗಳಿಗೆ ಮಾರುತ್ತಿವೆ. ಹೊಸದಾಗಿ ರಾಜ್ಯದಲ್ಲಿ ಬೃಹತ್ ಉದ್ದಿಮೆಗಳ ಸ್ಥಾಪನೆಗೆ ಮುಂದಾಗುತ್ತಿರುವ ಹೂಡಿಕೆದಾರರಿಗೆ ವಿದ್ಯುತ್ ಸಮಸ್ಯೆ ಉಂಟಾಗುವುದಿಲ್ಲ ಎಂದು ಅವರು ಅಭಯ ನೀಡಿದರು.

ಸಾವಿರ ಅಧಿಕಾರಿಗಳ ನೇಮಕ

ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡು ರೈತರ ನೆರವಿಗೆ ಧಾವಿಸಲಾಗುವುದು. ರಾಜ್ಯ ಸರ್ಕಾರ ಸಲ್ಲಿಸಿದ ಮನವಿ ಆಧರಿಸಿ ಕೇಂದ್ರ ತಂಡ ರಾಜ್ಯದ ಬರಪೀಡಿತ ಪ್ರದೇಶಗಳಲ್ಲಿ ಅಧ್ಯಯನ ನಡೆಸಿದೆ. ಅಧ್ಯಯನ ವರದಿಯನ್ನು ಸದ್ಯದಲ್ಲೇ ಕೇಂದ್ರಕ್ಕೆ ಸಲ್ಲಿಸಲಿದ್ದು, ಆ ವರದಿ ಆಧರಿಸಿ ಪರಿಹಾರ ನೀಡಲಿದೆ ಎಂದು ಅವರು ಹೇಳಿದರು. ಶೇ.96ರಷ್ಟು ಬೆಳೆ ಸಮೀಕ್ಷೆ ನಡೆದಿದೆ. ಇನ್ನೆರಡು ಮೂರು ದಿನದಲ್ಲಿ ಸಮೀಕ್ಷೆ ಪೂರ್ಣಗೊಳಿಸಿ ಒಟ್ಟಾರೆ ಆಗಿರುವ ಹಾನಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು.



ಆಸೀಸ್ ವಿರುದ್ಧ ಗೆದ್ದು ಅಗ್ರಸ್ಥಾನಕ್ಕೇರಿದ ದ.ಆಫ್ರಿಕಾ



ಲಕ್ನೋ, ಅ.12– ಕ್ವಿಂಟನ್ ಡಿಕಾಕ್ ಅವರ ಭರ್ಜರಿ ಶತಕ ಹಾಗೂ ಬೌಲರ್‌ಗಳ ಕರಾರು ವಾಕ್ ಬೌಲಿಂಗ್ ದಾಳಿ ನೆರವಿನಿಂದ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ವಿರುದ್ಧ 134 ರನ್‌ಗಳ ಜಯ ಸಾಧಿಸಿದೆ. ಆ ಮೂಲಕ ಟೂರ್ನಿಯಲ್ಲಿ ಸತತ 2ನೇ ಗೆಲುವು ಸಾಧಿಸಿ ದಕ್ಷಿಣ ಆಫ್ರಿಕಾ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೇ, ಅತ್ತ ಆಸ್ಟ್ರೇಲಿಯಾ ಟೂರ್ನಿಯಲ್ಲಿ ಸತತ 2ನೇ ಸೋಲು ಅನುಭವಿಸಿದೆ.

ಇಲ್ಲಿನ ಭಾರತರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ತೆಂಬ ಬವುಮ ಹಾಗೂ ಕ್ವಿಂಟನ್ ಡಿಕಾಕ್ ಮೊದಲ ವಿಕೆಟ್‌ಗೆ 108 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿಕೊಟ್ಟರು. ಕಳೆದ ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ಶತಕ ಸಿಡಿಸಿ ಮಿಂಚಿದ್ದ ಡಿಕಾಕ್ ಆಸೀಸ್ ವಿರುದ್ಧವೂ ಶತಕ ಸಿಡಿಸಿ ಅಬ್ಬರಿಸಿದರು. ಆದರೆ 106 ಎಸೆತಗಳಲ್ಲಿ 8 ಬೌಂಡರಿ, 5 ಆಕರ್ಷಕ ಸಿಕ್ಸರ್ ಒಳಗೊಂಡ 109 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ನಾಯಕ ಬವುಮ 35 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ವ್ಯಾನ್ ಡೆರ್ ಡಸ್ಸೆನ್ 26, ಏಡನ್ ಮಾಕ್ರಂ 56, ಕ್ಲಾಸೆನ್ 29, ಮಿಲ್ಲರ್ 17, ಮಾರ್ಕೊ ಜಾನ್ಸೆನ್ 26 ರನ್ ಗಳಿಸಿದರು. ಅಂತಿಮವಾಗಿ ದಕ್ಷಿಣ ಆಫ್ರಿಕಾ 7 ವಿಕೆಟ್ ನಷ್ಟಕ್ಕೆ 311 ರನ್ ಗಳಿಸಿತು. ಆಸ್ಟ್ರೇಲಿಯಾ ಪರ ಮಿಚೆಲ್ ಸ್ಟಾರ್ಕ್, ಗ್ಲೆನ್ ಮ್ಯಾಕ್ಸ್‌ವೆಲ್ ತಲಾ 2, ಹ್ಯಾಝಲ್‌ವುಡ್, ಪ್ಯಾಟ್ ಕಮ್ಮಿನ್ಸ್ ಹಾಗೂ ಆಡಂ ಜಂಪಾ ತಲಾ ಒಂದೊಂದು ವಿಕೆಟ್ ಕಬಳಿಸಿದರು. 312 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ತಂಡದ ಮೊತ್ತ 70 ಆಗುವಷ್ಟರಲ್ಲೇ ಪ್ರಮುಖ 6 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ತಂಡದ ಪರ ಮಾರ್ನಸ್ ಲಬುಶೇನ್ 46ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಬ್ಯಾಟಿಂಗ್ ಪ್ರದರ್ಶನ ಮೂಡಿಬರಲಿಲ್ಲ. ಹೀಗಾಗಿ ಆಸ್ಟ್ರೇಲಿಯಾ 40.5 ಓವರ್‌ಗಳಲ್ಲಿ 177 ರನ್ ಗಳಿಗೆ ಆಲೌಟಾಯಿತು. ತಂಡದ ಪರ ಡೇವಿಡ್ ವಾರ್ನರ್ 13, ಸ್ಟೀವನ್ ಸ್ಮಿತ್ 19, ಗ್ಲೆನ್ ಮ್ಯಾಕ್ಸ್‌ವೆಲ್ 3, ಜೋಶ್ ಇಂಗ್ಲಿಸ್ ಮಾರ್ಕಸ್ ಸ್ಟೊಯಿನಿಸ್ ತಲಾ 5, ಸ್ಟಾರ್ಕ್ 27, ನಾಯಕ ಕಮಿನ್ಸ್ 22 ,ಜಂಪಾ 11 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ಕಗಿಸೋ ರಬಾಡ 3, ಮಾರ್ಕೊ ಜಾನ್ಸೆನ್, ಕೇಶವ ಮಹಾರಾಜ್, ತಬ್ರೈಜ್ ಶಮ್ಸಿ ತಲಾ 2, ಲುಂಗಿ ಎನ್ಗಿಡಿ ಒಂದು ವಿಕೆಟ್ ಪಡೆದರು. ಕ್ವಿಂಟನ್ ಡಿಕಾಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ದಸರಾ ಆಹಾರ ಮೇಳ: ಗ್ರಾಹಕರ ರುಚಿ ತಣಿಸಲಿದೆ ಬುಡಕಟ್ಟು ಸಮುದಾಯದ ಬೊಂಬು ಬಿರಿಯಾನಿ

● ದಿನಕ್ಕೆ 500 ಮಂದಿಗೆ ಮಾತ್ರ ಬೊಂಬು ಬಿರಿಯಾನಿ ತಿನ್ನುವ ಭಾಗ್ಯವುಂಟು
● ಬಿದರಕ್ಕಿ ಪಾಯಸ, ಮಾಕಳಿಬೇರು ಟೀ, ನಳ್ಳಿ ಸಾರು–ಮುದ್ದೆ, ಗೆಣಸು–ಜೇನುತುಪ್ಪ, ಕಾಡುಸೊಪ್ಪಿನ ಪಲ್ಯ ● ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಘಮಗುಡುವ ಖಾದ್ಯಗಳು!



■ ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಅ.12–ದಸರಾ ಮಹೋತ್ಸವದಲ್ಲಿ ಈ ಬಾರಿ ಒಂದೇ ಸ್ಥಳದಲ್ಲಿ ಆಹಾರ ಮೇಳ ಆಯೋಜಿಸಲು ನಿರ್ಧರಿಸಲಾಗಿದ್ದು, ಇಲ್ಲಿ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ಆಹಾರ ಬೊಂಬು ಬಿರಿಯಾನಿ ಸೇರಿದಂತೆ ಇನ್ನಿತರ ಖಾದ್ಯಗಳು ಖಾನಪ್ರಿಯರ ನಾಲಿಗೆ ತಣಿಸಲಿದೆ.

ಕೆಲವು ವರ್ಷಗಳಿಂದ ಎರಡು ಸ್ಥಳದಲ್ಲಿ ದಸರಾ ಆಹಾರ ಮೇಳ ಆಯೋಜಿಸಿ, ವಿವಿಧ ಬಗೆಯ ತಿನಿಸುಗಳು ಒಂದೇ ಸ್ಥಳದಲ್ಲಿ ದೊರಕುವ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಒಂದೇ ಸ್ಥಳದಲ್ಲಿ ಆಹಾರ ಮೇಳ ನಡೆಸಲು ಉದ್ದೇಶಿಸಿರುವುದರಿಂದ ಆಹಾರ ಮೇಳಕ್ಕೆ ಈ ಬಾರಿ ಎಲ್ಲಿಲ್ಲದ ಬೇಡಿಕೆ ವ್ಯಕ್ತವಾಗಲಿದೆ. ಹಾಗಾಗಿ ಆಹಾರ ಮೇಳದಲ್ಲಿ ನೂಕುನುಗ್ಗಲು ಸಂಭವಿಸುವ ಸಾಧ್ಯತೆ ಇದ್ದು, ವಿವಿಧ ಬಗೆಯ ಆಹಾರದ ರುಚಿ ಸವಿಯಲು ಜನ ಮುಗಿ ಬೀಳುವುದು ಖಚಿತ.

ಆದಿವಾಸಿಗಳ ಆಹಾರ ಮಳಿಗೆ: ದಸರಾ ಆಹಾರ ಮೇಳದಲ್ಲಿ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ಆಹಾರ ಪದಾರ್ಥಗಳಿಗೆ ಎಲ್ಲಿಲ್ಲದ ಬೇಡಿಕೆ. ಆದಿವಾಸಿ ಹಾಡಿಗಳಲ್ಲಿ ಮಾತ್ರ ಸಿಗುವುದರಿಂದ ರುಚಿ ನೋಡಲು ಜನ ಮುಗಿ ಬೀಳುತ್ತಿದ್ದರು. 4–5 ವರ್ಷಗಳಿಂದಲೂ ದಸರಾ ಆಹಾರ ಮೇಳದಲ್ಲಿ ಬುಡಕಟ್ಟು ಸಮುದಾಯದ ಆಹಾರ ಪದಾರ್ಥಗಳಿಗೆ ಭಾರಿ ಬೇಡಿಕೆ ಈ ಬಾರಿ ಬಿದಿರು ಬೊಂಬಿನ ಬಿರಿಯಾನಿ, ಬಿದಿರು ಅಕ್ಕಿ ಪಾಯಸ, ಕಾಡುಸೊಪ್ಪಿನ ಪಲ್ಯ, ಮಾಕಳಿ ಬೇರಿನ ಟೀ, ನಳ್ಳಿ ಸಾರು–ರಾಗಿ ಮುದ್ದೆ, ಗೆಣಸು–ಜೇನುತುಪ್ಪ ಲಭ್ಯವಿದೆ. ನಗರವಾಸಿಗಳು ಹಾಗೂ ದಸರಾ ನೋಡಲು ಬರುವ ಪ್ರವಾಸಿಗರಿಗೆ ಆದಿವಾಸಿ ಸಾಂಪ್ರದಾಯಿಕ ಆಹಾರದ ರುಚಿ ನೋಡುವ ಅವಕಾಶವಿದೆ.

ಎರಡು ಮಳಿಗೆ ಸಾಧ್ಯತೆ: ಈ ಹಿಂದೆ ಲಲಿತಮಹಲ್ ಮೈದಾನ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ–ಎರಡು ಕಡೆ ಆಹಾರ ಮೇಳ ನಡೆಯುತ್ತಿತ್ತು. ಎರಡೂ ಕಡೆಯೂ ಆದಿವಾಸಿ ಆಹಾರ ಮಳಿಗೆಗಳಿದ್ದವು. ಈ ಬಾರಿ ಒಂದೇ ಕಡೆ ಆಹಾರ ಮೇಳ ನಡೆಸುತ್ತಿರುವುದರಿಂದ ಎರಡು ತಂಡ ಅರ್ಜಿ ಸಲ್ಲಿಸಿವೆ. ಹುಣಸೂರು ತಾಲೂಕಿನ ಶೆಟ್ಟಹಳ್ಳಿ ಹಾಡಿ ನಿವಾಸಿ ಜೇನು ಕುರುಬ ಸಂಘದ ವತಿಯಿಂದ ಜಿಲ್ಲಾಧ್ಯಕ್ಷ ರಾಜಪ್ಪ ನೇತೃತ್ವದ ತಂಡ ಹಾಗೂ ಹುಣಸೂರಿನ ಪ್ರಕೃತಿ ಆದಿವಾಸಿ ಫೌಂಡೇಷನ್ ಟ್ರಸ್ಟ್ ಅಧ್ಯಕ್ಷ ಕೃಷ್ಣಪ್ಪ ತಂಡ ಆದಿವಾಸಿ ಆಹಾರ ಮಳಿಗೆಗಾಗಿ ಅರ್ಜಿ ಸಲ್ಲಿಸಿದ್ದು, ಇಬ್ಬರಿಗೂ ಅವಕಾಶ ನೀಡುವ ಸಾಧ್ಯತೆ ಇದೆ. ನಗರ ವಾಸಿಗಳು ಬುಡಕಟ್ಟು ಸಮುದಾಯದ ಆಹಾರ ರುಚಿ ನೋಡಲು ಬಯಸುವುದರಿಂದ ಎರಡು ಮಳಿಗೆಗೆ ಅವಕಾಶ ನೀಡಲು ಚಿಂತಿಸಲಾಗಿದೆ.

ಬೊಂಬು ಪೂರೈಕೆ ಕಷ್ಟ: ಬುಡಕಟ್ಟು ಸಮುದಾಯ ಆಹಾರ ಮಳಿಗೆಯಲ್ಲಿ ಬೊಂಬು ಬಿರಿಯಾನಿಗೆ ಬಿದಿರು ಬೊಂಬು ಬಳಸಲಾಗುತ್ತದೆ. ಬೇಡಿಕೆಗೆ ಅನುಗುಣವಾಗಿ ಬೊಂಬು ಬಿರಿಯಾನಿ ಒಂದೇ ಮಳಿಗೆಯಲ್ಲಿ ತಯಾರಿಸಿ ಪೂರೈಸಲು ಸಾಧ್ಯವಿಲ್ಲ. ದಿನಕ್ಕೆ 500 ಮಂದಿಗೆ ಮಾತ್ರ ಒಂದು ಮಳಿಗೆಯಲ್ಲಿ ಬಿರಿಯಾನಿ ಪೂರೈಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಎರಡು ಮಳಿಗೆಗೆ ಅವಕಾಶ ನೀಡಿದರೆ ತಿನ್ನಲು ಬಯಸಿ ಬರುವ ಗ್ರಾಹಕರಿಗೆ ನಿರಾಸೆಯಾಗದೆ ಆದಿವಾಸಿ ಆಹಾರವನ್ನು ಉಣಬಡಿಸಬಹುದಾಗಿದೆ. ಈ ನಿಟ್ಟಿನಲ್ಲಿ ಎರಡು ಮಳಿಗೆಗೆ ಅವಕಾಶ ನೀಡುವುದು ಸೂಕ್ತ ಎಂಬ ಅಭಿಪ್ರಾಯ ಕೇಳಿ ಬಂದಿದೆ.



ಮಹಾರಾಣಿ ಕಾಲೇಜಿನಲ್ಲಿ ಷೇಕ್ಸ್‌ಪಿಯರ್ ಉತ್ಸವ



ಮೈಸೂರು, ಅ. 12– ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದ ವತಿಯಿಂದ ಐಕ್ಯೂಎಸಿ ಸಹಯೋಗದಲ್ಲಿ ಪ್ರಸಿದ್ಧ ಇಂಗ್ಲಿಷ್ ಕವಿ ವಿಲಿಯಂ ಷೇಕ್ಸ್‌ಪಿಯರ್‌ನ ಬದುಕು–ಬರಹಗಳನ್ನು ಒಳಗೊಂಡ 'ಷೇಕ್ಸ್‌ಪಿಯರ್ ಉತ್ಸವ'ವನ್ನು ಆಯೋಜಿಸಲಾಗಿತ್ತು.

ಉತ್ಸವಕ್ಕೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಸೋಮಣ್ಣ ಚಾಲನೆ ನೀಡಿದರು. ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ.ಎನ್.ಬಾಲಾಜಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಷೇಕ್ಸ್‌ಪಿಯರ್ ಹಾಗೂ ಆತನ ಕಾವ್ಯಗಳ ಸೊಗಸನ್ನು ವಿವರಿಸಿದರು. ಅಲ್ಲದೆ, ಕೊಠಡಿ ಸಂಖ್ಯೆ 120ರಲ್ಲಿ ಪ್ರದರ್ಶನಕ್ಕೆ ಇಡಲಾಗಿದ್ದ ಷೇಕ್ಸ್‌ಪಿಯರನ ಜೀವನ ಮತ್ತು ಕೃತಿಗಳು, ವ್ಯಕ್ತಿಚಿತ್ರಗಳು ಹಾಗೂ ವಿಮರ್ಶಾತ್ಮಕ ಬರಹಗಳನ್ನು ವಿದ್ಯಾರ್ಥಿನಿಯರಿಗೆ ಪರಿಚಯ ಮಾಡಿಕೊಟ್ಟರು. ಐಕ್ಯೂಎಸಿ ಸಂಚಾಲಕ ಡಾ. ವಿ.ಮಂಜುನಾಥ್, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎನ್.ರಜನಿ, ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ.ಆರ್. ನಳಿನಿ, ಅಧ್ಯಾಪಕರಾದ ಅನುಪಮಾ ಧಾವಳೆ, ಹೆಚ್.ಎಸ್. ಧನಲಕ್ಷ್ಮಿ ಮುಂತಾದವರು ಉಪಸ್ಥಿತರಿದ್ದರು. ಎರಡು ದಿನಗಳ ಕಾಲ ಏರ್ಪಡಿಸಿದ್ದ ಷೇಕ್ಸ್‌ಪಿಯರ್‌ನ ಜೀವನ ಮತ್ತು ಕೃತಿಗಳ ಪ್ರದರ್ಶನದಲ್ಲಿ ಮೂರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರಿನ ಷೇಕ್ಸ್‌ಪಿಯರ್ ವಾಲ ಎಂದೇ ಖ್ಯಾತರಾದ ಪ್ರೊ.ಬಿ.ಎನ್. ಬಾಲಾಜಿ, ವಿಶೇಷ ಉಪನ್ಯಾಸ ನೀಡಿದರು. ವಿಲಿಯಂ ಷೇಕ್ಸ್‌ಪಿಯರನ "ಮ್ಯಾಕ್‌ಬತ್"ನ ಪಾಂಡಿತ್ಯ ಪೂರ್ಣವಾದ ನಿರೂಪಣೆಯನ್ನು ವಿದ್ಯಾರ್ಥಿನಿಯರು ಆಲಿಸಿದರು. ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಾಯಿತು.

ಕೃತಕ ಅಂಗಗಳ ವಿತರಣೆ



ಮೈಸೂರು, ಅ.12(ಜಿಎ)–ಲಯನ್ಸ್ ಕ್ಲಬ್ ಗೋಲ್ಡನ್ ಸಿಟಿ ವತಿಯಿಂದ ನಾರಾಯಣ ಸೇವಾ ಸಂಸ್ಥಾನದ ಸಹಯೋಗದಲ್ಲಿ ಬರುವ ನ.5ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೂ ಶಂಕರಮಠ ರಸ್ತೆಯ ನಟರಾಜ ಪ್ರಾರ್ಥನಾ ಮಂದಿರದಲ್ಲಿ ಮಾಡ್ಯುಲರ್ ಕೃತಕ ಅಂಗಗಳನ್ನು ದಿವ್ಯಾಂಗರಿಗೆ ವಿತರಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ ಗವರ್ನರ್ ಕೆ.ಎನ್. ಕೃಷ್ಣೇಗೌಡ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸೌಲಭ್ಯದ ಪ್ರಯೋಜನ ಪಡೆಯಲು ಈಗಾಗಲೇ 180 ಮಂದಿ ವಿಶೇಷಚೇತನರು ನೋಂದಾಯಿಸಿಕೊಂಡಿದ್ದಾರೆ. ಅಲ್ಲದೆ, ಈಗಲೂ ನೋಂದಾಯಿಸಿಕೊಂಡು ಮಾಡ್ಯುಲರ್ ಕೃತಕ ಅಂಗಗಳನ್ನು ಪಡೆಯಲು ಅವಕಾಶವಿದೆ. ಹೀಗಾಗಿ ಆಸಕ್ತರು ದೂ. 98452 84727 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೂವರು ವಿಶೇಷ ಚೇತನರಿಗೆ ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಎಸ್.ಟಿ.ರವಿಕುಮಾರ್ ಕೃತಕ ಕಾಲುಗಳನ್ನು ವಿತರಿಸಿದರು. ಪದಾಧಿಕಾರಿಗಳಾದ ಪ್ರಮೀಳಾ, ಮಹಾವೀರ್ ಚಾಂದ್ ಬನ್ಸಾಲಿ, ಸುರೇಶ್ ಗೋಲ್ಡ್, ಎಸ್.ಗುರುರಾಜ್ ಇತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ 25 ಸಾವಿರ ಕೋಟಿ ಹೂಡಿಕೆ ಮಾಡಲು ಅಮೆರಿಕಾ ಕಂಪನಿಗಳ ಉತ್ಸುಕತೆ

● ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಘೋಷಣೆ ● ಸಚಿವದ್ವಯರ ನೇತೃತ್ವದ ನಿಯೋಗ ಅಮೆರಿಕಾ ಪ್ರವಾಸ ಫಲಶ್ರುತಿ



ಬೆಂಗಳೂರು, ಅ.12(ಕೆಎಂಶಿ)– ಅಮೆರಿಕ ಪ್ರವಾಸದ ವೇಳೆ ವಿವಿಧ ಕಂಪನಿಗಳ ಜೊತೆ ಮಾತುಕತೆ ನಡೆಸಿದ ಸಂದರ್ಭದಲ್ಲಿ ಅಲ್ಲಿನ ಕಂಪನಿಗಳಿಂದ ರಾಜ್ಯದಲ್ಲಿ ಸುಮಾರು 25,000 ಕೋಟಿ ರೂಪಾಯಿ (3 ಶತಕೋಟಿ ಡಾಲರ್) ಹೂಡಿಕೆ ಮಾಡುವ ಆಸಕ್ತಿ ಪ್ರಕಟವಾಗಿದೆ ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮತ್ತು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಗುರುವಾರ ಹೇಳಿದರು.

ಅಮೆರಿಕಕ್ಕೆ 12 ದಿನಗಳ ವ್ಯಾಪಾರ ಉತ್ತೇಜನಾ ಪ್ರವಾಸ ತೆರಳಿದ್ದ ರಾಜ್ಯ ನಿಯೋಗದ ನೇತೃತ್ವ ವಹಿಸಿದ್ದ ಎಂ.ಬಿ. ಪಾಟೀಲ್ ಮತ್ತು ಪ್ರಿಯಾಂಕ್ ಖರ್ಗೆ ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಕ್ಕೆ ಬಂಡವಾಳ ಆಕರ್ಷಿಸುವ ದೃಷ್ಟಿಯಿಂದ ಇದೊಂದು ಯಶಸ್ವಿ ಭೇಟಿಯಾಗಿದೆ ಎಂದರು.

ಸಚಿವ ಎಂ.ಬಿ.ಪಾಟೀಲ್ ಮಾತನಾಡಿ, ಕೆಲವು ಕಂಪನಿಗಳು ಹೊಸದಾಗಿ ರಾಜ್ಯದಲ್ಲಿ ಕಾರ್ಯಾಚರಣೆ ಯೋಜನೆ ಹೊಂದಿವೆ. ಇನ್ನು ಕೆಲವು ಕಂಪನಿಗಳು ಈಗಾಗಲೇ ಇಲ್ಲಿ ಘಟಕಗಳನ್ನು ಹೊಂದಿದ್ದು, ತಮ್ಮ ಕಾರ್ಯಾಚರಣೆ ವಿಸ್ತರಿಸುವ ಪ್ರಸ್ತಾವ ಹೊಂದಿವೆ. ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ಈಗ ಕರ್ನಾಟಕ ಸೇರಿದಂತೆ ದೇಶದ ಬಹುತೇಕ ರಾಜ್ಯಗಳು ನಡೆಸುತ್ತಿವೆ. ಇಂತಹ ಸಮಾವೇಶದ ಜೊತೆಗೆ ಹೊಸ ಉಪಕ್ರಮವೊಂದನ್ನು ಕೈಗೊಳ್ಳಬೇಕು ಎಂಬುದು ನಮ್ಮ ಆಲೋಚನೆಯಾಗಿತ್ತು.

ಹೀಗಾಗಿ, ಉದ್ಯಮಿಗಳಿರುವ ಹಾಗೂ ಉದ್ಯಮ ಸಂಸ್ಥೆಗಳ ಜಾಗಕ್ಕೆ ನಾವೇ ಹೋಗಿ ನಮ್ಮಲ್ಲಿರುವ ಅನುಕೂಲತೆಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು ಎಂದು ಅವರು ವಿವರಿಸಿದರು. ಅಮೆರಿಕದ ಪೂರ್ವ ಕರಾವಳಿಯಿಂದ ಹಿಡಿದು ಪಶ್ಚಿಮ ಕರಾವಳಿವರೆಗೆ ಪ್ರಯಾಣಿಸಿ ಬೇರೆ ಬೇರೆ ಕಂಪನಿಗಳ ಉನ್ನತ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಲಾಯಿತು.

ಈ ವೇಳೆ 27 ಮುಖಾಮುಖಿ ಸಭೆಗಳು ಮತ್ತು 9 ಸಂವಾದ ಗೋಷ್ಠಿಗಳು ಸೇರಿ ಒಟ್ಟು 36 ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೆವು. ಜೊತೆಗೆ, ಅಲ್ಲಿನ ಕೆಲವು ಕೈಗಾರಿಕೆಗಳ ಕಾರ್ಯಾಚರಣೆಯನ್ನು ಖುದ್ದು ವೀಕ್ಷಿಸಿದೆವು ಎಂದು ಹೇಳಿದರು.

ಮುಖ್ಯವಾಗಿ, ಎಲೆಕ್ಟ್ರಾನಿಕ್ಸ್, ಸೆಮಿ ಕಂಡಕ್ಟರ್, ಏರೋಸ್ಪೇಸ್ & ರಕ್ಷಣೆ, ಆಟೋ/ಇವಿ, ಉತ್ಪಾದನೆ ಮತ್ತು ಮೆಡ್–ಟೆಕ್ ವಲಯಗಳಲ್ಲಿ ಹೂಡಿಕೆ ಅವಕಾಶಗಳನ್ನು ಅವಲೋಕಿಸಲಾಗಿದೆ. ಅಪ್ಲೈಡ್ ಮೆಟೀರಿಯಲ್ಸ್, ಎಎಂಡಿ, ಜುನಿಪರ್, ಗ್ಲೋಬಲ್ ಫೌಂಡ್ರೀಸ್, ಲ್ಯಾಮ್ ರಿಸರ್ಚ್, ಬೋಯಿಂಗ್, ಕ್ರಿಪ್ಟನ್, ಡೆಲ್, ಎಂಕೆಎಸ್ ಇನ್‌ಸ್ಟ್ರುಮೆಂಟ್ಸ್, ಟೆರಾಡೈನ್, ಜಿಇ ಹೆಲ್ತ್ ಕೇರ್, ಇಂಟೆಲ್‌ಸ್ಯಾಟ್, ಆರ್‌ಟಿಎಕ್ಸ್, ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್, ಆಪಲ್ ಮತ್ತು ವಾಟರ್ಸ್ ಕಾರ್ಪ್‌ನಂತಹ ಮುಂಚೂಣಿ ಕಂಪನಿಗಳೊಂದಿಗೆ ವಿಚಾರ ವಿನಿಮಯ ನಡೆಸಲಾಗಿದೆ ಎಂದು ಸಚಿವರು ತಿಳಿಸಿದರು. ಜಂಟಿ ಕೌಶಲ್ಯಾಭಿವೃದ್ಧಿ ಉಪಕ್ರಮಗಳು, ಪೂರೈಕೆದಾರರ ನೆಲೆಯ ವಿಸ್ತರಣೆ, ಆರ್ ಮತ್ತು ಡಿ ಪರಿಸರ ವ್ಯವಸ್ಥೆ ಬಲಪಡಿಸುವುದು ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸುವ ಬಗೆಗೂ ಸಮಾಲೋಚನೆಗಳನ್ನು ನಡೆಸಲಾಗಿದೆ ಎಂದರು.

ಬದಲಾಗುತ್ತಿರುವ ಭೌಗೋಳಿಕ–ರಾಜಕೀಯ ಪರಿಸ್ಥಿತಿಯಲ್ಲಿ ಅಮೆರಿಕದ ಉದ್ಯಮಿಗಳು ಭಾರತದಲ್ಲಿ, ಅದರಲ್ಲೂ ಮುಖ್ಯವಾಗಿ ಕರ್ನಾಟಕದಲ್ಲಿ ಹೂಡಿಕೆ ಮಾಡುವ ಆಸಕ್ತಿ ಹೊಂದಿದ್ದಾರೆ. ಈ ಅವಕಾಶ ಬಳಸಿಕೊಳ್ಳುವ ದೃಷ್ಟಿಯಿಂದ ನಾವು ಇಲ್ಲಿನ ಕೈಗಾರಿಕಾ ಕಾರ್ಯ ಪರಿಸರ, ಉದ್ಯಮಸ್ನೇಹಿ ಕಾರ್ಯನೀತಿಗಳು, ಸರ್ಕಾರದ ಪ್ರೋತ್ಸಾಹಕ ಕ್ರಮಗಳು, ಮತ್ತು ಮಾನವ ಸಂಪನ್ಮೂಲ ಲಭ್ಯತೆ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಜೊತೆಗೆ, ಸುಗಮ ವ್ಯಾಪಾರ ಕಾರ್ಯಾಚರಣೆಗೆ ಪೂರಕವಾಗಿ ಸರ್ಕಾರದ ಸಹಕಾರವನ್ನು ಖಾತ್ರಿಗೊಳಿಸಿದ್ದೇವೆ ಎಂದು ಪಾಟೀಲ್ ಮಾಹಿತಿ ನೀಡಿದರು.

ಕೈಗಾರಿಕಾ ಇಲಾಖೆಯು ಕ್ಷೇತ್ರವಾರು ಒಂಬತ್ತು ವಿಷನ್ ಗ್ರೂಪ್‌ಗಳನ್ನು ರಚಿಸಲಿದೆ. ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ವತಿಯಿಂದ ಮುಂಬರುವ ಜಾಗತಿಕ ಹೂಡಿಕೆದಾರರ ಸಮಾವೇಶವನ್ನು (ಜಿಮ್) 2024ರ ಕೊನೆಯಲ್ಲಿ ಅಥವಾ 2025ರ ಆರಂಭದಲ್ಲಿ ಆಯೋಜಿಸಲಾಗುವುದು ಎಂದು ಸಚಿವ ಎಂಬಿ ಪಾಟೀಲ್ ಹೇಳಿದರು.

ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಬಂಡವಾಳ ಆಕರ್ಷಿಸುವ ಸಲುವಾಗಿ ಹೊಸ ಹೊಸ ರೀತಿಯ ಪ್ರಯೋಗಗಳನ್ನು ಮಾಡುತ್ತಿದ್ದು ಅದರಲ್ಲಿ ಈ ಅಮೆರಿಕಾ ಭೇಟಿಯೂ ಸೇರಿದೆ. ಮಾನವ ಸಂಪನ್ಮೂಲದ ಬೇಡಿಕೆಗನುಗುಣವಾಗಿ ಎಂಜಿನಿಯರ್‌ಗಳಿಗೆ ತರಬೇತಿ ನೀಡುವ ಸಂಬಂಧ ಎಎಂಡಿ ಸಂಸ್ಥೆ ಜತೆ ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಳ್ಳಲಿದೆ. ಈ ಸಂಸ್ಥೆ 800 ಎಂಜಿನಿಯರ್‌ಗಳನ್ನು ಭಾರತದಲ್ಲಿ ನೇಮಕ ಮಾಡಿಕೊಳ್ಳಲಿದೆ ಎಂದು ಹೇಳಿದರು.

ನಾವೀನ್ಯತಾ ಸೂಚ್ಯಂಕದಲ್ಲಿ ಕರ್ನಾಟಕ 18ನೇ ಸ್ಥಾನ ಪಡೆದಿದ್ದು ಮುಂದಿನ ದಿನಗಳಲ್ಲಿ 10ರೊಳಗೆ ಸ್ಥಾನ ಪಡೆಯುವ ನಿಟ್ಟಿನಲ್ಲಿ ಕೆಲಸ ಮಾಡಲಿದೆ ಎಂದರು.



ಘೋಸ್ಟ್
ಅಭಿಮಾನಿಗಳಿಂದ ಹಾಡಿನ ಉಡುಗೊರೆ

ಕನ್ನಡ ಚಿತ್ರರಂಗಕ್ಕೆ ಮರೆಯಲಾಗದ ಸಿನಿಮಾಗಳನ್ನು ನೀಡುವ ಮೂಲಕ ಗುರುತಿಸಿಕೊಂಡಿರುವ ಪ್ರತಿಷ್ಠಿತ ಸಂದೇಶ್ ಪ್ರೊಡಕ್ಷನ್ಸ್‌ನ ನಿರ್ಮಾತೃ ಸಂದೇಶ್ ನಾಗರಾಜ್ ಅವರು ಅರ್ಪಿಸಿ, ಅವರ ಪುತ್ರ ಸಂದೇಶ್ ಎನ್. ಅದ್ದೂರಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಹಾಗೂ ನಟ, ನಿರ್ದೇಶಕ ಶ್ರೀನಿ ಆಕ್ಷನ್ ಕಟ್ ಹೇಳಿರುವ ಬಹುನಿರೀಕ್ಷಿತ, ಬಹುಭಾಷಾ ಚಲನಚಿತ್ರ ಘೋಸ್ಟ್, ಮೋಡದ ಮರೆಯಲ್ಲಿ, ಸಂಯುಕ್ತ, ಶಿವಲಿಂಗ ಚಿತ್ರಗಳ ನಂತರ ಶಿವಣ್ಣ ಅಭಿನಯಿಸಿರುವ ಮತ್ತೊಂದು ಹಾರರ್ ಚಿತ್ರ ಇದಾಗಿದ್ದು, ಇದೇ ತಿಂಗಳ 19ರಂದು ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಯುಎಸ್‌ಎ, ಯುಕೆ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಸಿಂಗಪೂರ್ ಹಾಗೂ ಯುರೋಪ್ ಸೇರಿದಂತೆ ಸಾಗರದಾಚೆಯ ಹಲವು ದೇಶಗಳಲ್ಲಿ ಈ ಚಿತ್ರ ಗ್ರ್ಯಾಂಡ್ ರಿಲೀಸಾಗಲಿದೆ.

ಅಖಿಲ ಕರ್ನಾಟಕ ಡಾ|| ಶಿವರಾಜಕುಮಾರ್ ಅಭಿಮಾನಿಗಳ ಸಂಘದವರು ಹಾಡೊಂದನ್ನು ಸಿದ್ದಪಡಿಸಿ "ಘೋಸ್ಟ್" ಚಿತ್ರಕ್ಕೆ ಉಡುಗೊರೆಯಾಗಿ ನೀಡಿದ್ದಾರೆ. ಈ ರೀತಿ ಅಭಿಮಾನಿಗಳೇ ಚಿತ್ರಕ್ಕೆ ಹಾಡಿನ ಉಡುಗೊರೆ ನೀಡಿರುವುದು ಇದೇ ಮೊದಲು. ಅಭಿಮಾನಿಗಳು ಅಭಿಮಾನದಿಂದ ನೀಡಿರುವ ಈ ಹಾಡನ್ನು ರೋಲಿಂಗ್ ಟೈಟಲ್ಸ್‌ನಲ್ಲಿ ಬಳಸಿಕೊಳ್ಳುವುದಾಗಿ ಚಿತ್ರ ತಂಡ ತಿಳಿಸಿದೆ. ಇತ್ತೀಚೆಗೆ ಹೊಸಪೇಟೆಯ ಮೀರ್ ಆಲಂ ಚಿತ್ರಮಂದಿರದಲ್ಲಿ ನೆರೆದಿದ್ದ ಸಾವಿರಾರು ಅಭಿಮಾನಿಗಳ ಸಮ್ಮುಖದಲ್ಲಿ ಈ ಹಾಡನ್ನು ಬಿಡುಗಡೆ ಮಾಡಲಾಯಿತು. ಮಹೇನ್ ಸಿಂಹ ಅವರ ಛಾಯಾಗ್ರಹಣ, ಅರ್ಜುನ್ ಜನ್ಯ ಅವರ ಸಂಗೀತ ಈ ಚಿತ್ರಕ್ಕಿದ್ದು, ಜಯರಾಂ, ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ ಅಭಿಜಿತ್, ಶ್ರೀನಿ ಘೋಸ್ಟ್ ಚಿತ್ರದ ಪ್ರಮುಖ ತಾರಾ ಬಳಗದಲ್ಲಿದ್ದಾರೆ.



'ಪ್ರೀತಿಯ ಅರಸಿ' ಹೊರಟವರು...



ಜಗ್ಗೇಶ್ ಅಭಿನಯದ ಪ್ರೀಮಿಯರ್ ಪದ್ಮಿನಿ ಚಿತ್ರವನ್ನು ನಿರ್ಮಿಸಿದ್ದ ಶೃತಿನಾಯ್ಡು ಅವರು ನಿರ್ಮಾಪಕಿಯಾಗಿ ಕಿರುತೆರೆಯಲ್ಲೂ ತನ್ನದೇ ಆದ ಛಾಪು ಮೂಡಿಸಿದ್ದಾರೆ, ಅಮ್ಮೋರು, ಬ್ರಹ್ಮಗಂಟು, ಸೇರಿದಂತೆ ಹಲವಾರು ಮೆಗಾ ಧಾರಾವಾಹಿಗಳನ್ನು ನಿರ್ಮಿಸಿದ ಅವರೀಗ "ಪ್ರೀತಿಯ ಅರಸಿ" ಎಂಬ ಅಪೂರ್ಣ ಮನಸುಗಳ ಪರಿಪೂರ್ಣ ಪ್ರೇಮಕಥೆಯೊಂದನ್ನು ಹೇಳ ಹೊರಟಿದ್ದಾರೆ, ಸಾಮಾನ್ಯವಾಗಿ ಗಂಡಸು ಎಂದರೆ ಹೊರಗಿನ ಪ್ರಪಂಚದಲ್ಲಿ ದುಡಿಯುವವನು, ಹೆಣ್ಣು ಎಂದರೆ ಮನೆಯಲ್ಲಿ ಕುಟುಂಬದ ಜವಾಬ್ದಾರಿ ನಿಭಾಯಿಸುವವಳು ಎನ್ನುವ ಮಾತಿದೆ. ಇಲ್ಲಿ ನಾಯಕಿ ಅಂಜಲಿ ಮತ್ತು ನಾಯಕ ರಾಕಿ, ಇಬ್ಬರೂ ಬೇರೆ ಬೇರೆ ಯೋಚನಾಲಹರಿ ಹೊಂದಿರುತ್ತಾರೆ. ತಾನು ಮಾಡೋ ಕೆಲಸದಲ್ಲಿ ಅತ್ಯುನ್ನತ ಮಟ್ಟಕ್ಕೇರುವುದು ಅಂಜಲಿಯ ಕನಸಾದರೆ, ಕುಟುಂಬವೇ ಸರ್ವಸ್ವ, ಮನೆಯೇ ಎಲ್ಲಕ್ಕಿಂತ ಮುಖ್ಯ ಅನ್ನೋದು ರಾಕಿಯ ಧ್ಯೇಯ. ಪ್ರೀತಿಯನ್ನು ಅರಸುತ್ತಿರುವ ಅಂಜಲಿಗೆ ರಾಕಿಯ ಪ್ರೀತಿ ಸಿಗುತ್ತೋ ಇಲ್ವೋ, ಇಂಥ ಅಪೂರ್ಣ ಮನಸುಗಳನ್ನು ಬೆಸೆಯುವುದಾದರೂ ಹೇಗೆ ಎನ್ನುವ ಪ್ರಶ್ನೆಗೆ ಉತ್ತರವೇ ಪ್ರೀತಿಯ ಅರಸಿ. ಶೃತಿನಾಯ್ಡು ನಿರ್ಮಾಣದಲ್ಲಿ, ರಮೇಶ್ ಇಂದಿರಾ ಆಕ್ಷನ್ ಕಟ್ ಹೇಳುತ್ತಿರುವ ಈ ಪ್ರೇಮಕಥೆಯಲ್ಲಿ ಅಂಜಲಿಯಾಗಿ ರಕ್ಷಾ ನಿಂಬರ್ಗಿ, ರಾಕಿಯಾಗಿ ಪೃಥ್ವಿ ಶೆಟ್ಟಿ ಅವರು ನಟಿಸುತ್ತಿದ್ದಾರೆ. ಮನೆಯ ಹಿರಿಯ ಜೀವಗಳಾಗಿ ಗಿರಿಜಾ ಲೋಕೇಶ್ ಮತ್ತು ಪದ್ಮಾ ವಾಸಂತಿ, ತಂದೆಯಾಗಿ ನಟ ಜೈಜಗದೀಶ್ ಅಭಿನಯಿಸಿದ್ದಾರೆ. ಇವರೊಂದಿಗೆ ಮಿಥುನ್ ತೇಜಸ್ವಿ, ನಾಗೇಂದ್ರ ಅರಸ್ ಮತ್ತು ರಾಧಾ ಜೈರಾಮ್ ಮುಖ್ಯ ಭೂಮಿಕೆಯಲ್ಲಿದ್ದಾರೆ. ಅ.16ರಿಂದ ಉದಯ ವಾಹಿನಿಯಲ್ಲಿ ಪ್ರೀತಿಯ ಅರಸಿ ಪ್ರಸಾರವನ್ನು ಆರಂಭಿಸಲಿದೆ.

ಚೆಫ್ ಚಿದಂಬರ ಡಾರ್ಕ್ ಕಾಮಿಡಿ ಚಿತ್ರ



ನಟ ಅನಿರುದ್ಧ್, ಮೊದಲ ಬಾರಿಗೆ ಒಬ್ಬ ಬಾಣಸಿಗನಾಗಿ ಕಾಣಿಸಿಕೊಂಡಿರುವ ಸಸ್ಪೆನ್ಸ್, ಥ್ರಿಲ್ಲರ್ ಜೊತೆಗೆ ಡಾರ್ಕ್ ಕಾಮಿಡಿ ಜಾನರ್ ಕಥೆ ಹೊಂದಿರುವ ಚಿತ್ರ ಚೆಫ್ ಚಿದಂಬರ. ಎಂ.ಆನಂದರಾಜ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದು, ಶ್ರೀಮತಿ ರೂಪ ಡಿ.ಎನ್. ನಿರ್ಮಾಣ ಮಾಡುತ್ತಿದ್ದಾರೆ. ರೇಚಲ್ ಡೇವಿಡ್ ಹಾಗೂ ನಿಧಿ ಸುಬ್ಬಯ್ಯ ಚಿತ್ರದ ನಾಯಕಿಯರು. ಈ ಚಿತ್ರದ ಕೊನೇ ದಿನದ ಚಿತ್ರೀಕರಣ ವೀಕ್ಷಣೆಗೆ ಚಿತ್ರತಂಡ ಕಂಠೀರವ ಸ್ಟುಡಿಯೋಗೆ ಮಾಧ್ಯಮದವರನ್ನು ಆಹ್ವಾನಿಸಿತ್ತು.

ನಿರ್ದೇಶಕ ಆನಂದರಾಜ್ ಮಾತನಾಡುತ್ತಾ, ಬೆಂಗಳೂರು, ಮಂಗಳೂರು, ತುಮಕೂರು, ದೇವರಾಯನದುರ್ಗ ಮುಂತಾದೆಡೆಗಳಲ್ಲಿ 29 ದಿನ ಚಿತ್ರೀಕರಣ ನಡೆಸಿದ್ದೇವೆ, ಇದೊಂದು ಮರ್ಡರ್ ಮಿಸ್ಟ್ರಿ ಆದರೂ, ಯಾರೂ ಯಾರನ್ನೂ ಮರ್ಡರ್ ಮಾಡುವುದಿಲ್ಲ, ಇದೊಂದು ಆಕ್ಷನ್, ಥ್ರಿಲ್ಲರ್ ಜೊತೆಗೆ ಡಾರ್ಕ್ ಹ್ಯೂಮರ್ ಚಿತ್ರ. ಅನಿರುದ್ಧ್ ಅವರು ಶೆಫ್ ಪಾತ್ರ ಮಾಡಿದ್ದಾರೆ. ನಿಧಿ ಸುಬ್ಬಯ್ಯ ಅವರದು ಈವರೆಗೆ ಮಾಡಿರದ ವಿಶೇಷ ಪಾತ್ರ. ಮತ್ತೊಬ್ಬ ನಟಿ ರೇಚೆಲ್‌ಡೇವಿಡ್ ಅವರ ಪಾತ್ರವೂ ವಿಭಿನ್ನವಾಗಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸವನ್ನು ಸದ್ಯದಲ್ಲೇ ಆರಂಭಿಸಲಿದ್ದೇವೆ ಎಂದು ಹೇಳಿದರು. ನಾಯಕ ಅನಿರುದ್ಧ್ ಮಾತನಾಡಿ, ನಾನು ಒಮ್ಮೆಯೂ ಅಡುಗೆಮನೆ ಕಡೆ ಹೋದವನಲ್ಲ. ಅಂಥಾದ್ದರಲ್ಲಿ ಚೆಫ್ ಪಾತ್ರ ಮಾಡಿದ್ದೇನೆ. ಒಂದಷ್ಟು ದಿನ ಬಾಣಸಿಗರ ಬಳಿ ಇದ್ದು, ತರಬೇತಿ ಪಡೆದುಕೊಂಡೆ. ಇದೊಂದು ಕ್ರೈಮ್, ಥ್ರಿಲ್ಲರ್ ಚಿತ್ರವಾದರೂ, ಅದನ್ನು ನಿರ್ದೇಶಕರು ಹಾಸ್ಯದ ಮೂಲಕ ಹೇಳಿದ್ದಾರೆ ಎಂದರು.

ಈ ಚಿತ್ರದಲ್ಲಿ ನಾನು ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಅದೇನೆಂದು ಚಿತ್ರದಲ್ಲೇ ನೋಡಬೇಕು ಎಂದು ನಟಿ ನಿಧಿ ಸುಬ್ಬಯ್ಯ ಹೇಳಿದರೆ, ನನ್ನ ಪಾತ್ರದ ಹೆಸರು ಅನು. ಕಥೆ ತುಂಬಾ ಇಂಟರೆಸ್ಟಿಂಗ್ ಆಗಿದೆ ಎಂದು ಮತ್ತೊಬ್ಬ ನಟಿ ರೇಚೆಲ್ ಡೇವಿಡ್ ಹೇಳಿಕೊಂಡರು. ನಿರ್ಮಾಪಕಿ ರೂಪ ಡಿ.ಎನ್, ಛಾಯಾಗ್ರಾಹಕ ಉದಯ್ ಲೀಲಾ, ಕಲಾವಿದರಾದ ಮಹಾಂತೇಶ್, ಸೌಂಡ್ ಇಂಜಿನಿಯರ್ ಬಿ.ಆರ್.ನವೀನ್‌ಕುಮಾರ್ ಮುಂತಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು.


5 ಭಾಷೆಗಳಲ್ಲಿ 'ಇನಾಮ್ದಾರ್' ಟ್ರೈಲರ್

ಉತ್ತರ ಕರ್ನಾಟಕ ಮೂಲದ, ಶಿವಾಜಿಯ ಆರಾಧಕರ ಇನಾಮ್ದಾರ್ ಕುಟುಂಬ ಹಾಗೂ ಕರಾವಳಿ ಕಾಡಿನಲ್ಲಿ ವಾಸಿಸುವ ಶಿವನ ಆರಾಧಕರಾದ ಕಾಡು ಜನರ ನಡುವೆ ನಡೆಯುವ ವರ್ಣ ಸಂಘರ್ಷದ ಕಥೆ ಇಟ್ಟುಕೊಂಡು ಸಂದೇಶ್ ಶೆಟ್ಟಿ ಆಜ್ರಿ ಅವರು ಇನಾಮ್ದಾರ್ ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಪಂಚಭಾಷೆಗಳ ಟ್ರೈಲರ್ ಬಿಡುಗಡೆಯಾಯಿತು,

ಕಾಡು ಜನರ ಸುತ್ತ ನಡೆಯುವ ಕಥೆಯಾದ್ದರಿಂದ ಈ ಚಿತ್ರಕ್ಕೆ ಬೆಳಗಾವಿ, ಕುಂದಾಪುರ ಮತ್ತು ಚಾಮರಾಜನಗರದ ಸುತ್ತಮುತ್ತಲ ಅರಣ್ಯ ಪ್ರದೇಶಗಳಲ್ಲೇ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ಪ್ರಮೋದ್ ಶೆಟ್ಟಿ, ರಂಜನ್ ಛತ್ರಪತಿ, ಚಿರಶ್ರೀ ಅಂಚನ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಈ ಚಿತ್ರ ಅ.27ಕ್ಕೆ ರಾಜ್ಯಾದ್ಯಂತ ತೆರೆಕಾಣಲಿದೆ

ಪ್ರಮೋದ್ ಶೆಟ್ಟಿ ತನ್ನ ಪಾತ್ರದ ಕುರಿತು ಮಾತನಾಡುತ್ತಾ, ಈ ಚಿತ್ರದಲ್ಲಿ ಕಾಳಿಂಗ ಎಂಬ ಕಾಡು ಜನರ ನಾಯಕನ ಪಾತ್ರವನ್ನು ಮಾಡಿದ್ದೇನೆ. ಚಿತ್ರದಲ್ಲಿ ನನ್ನ ಗೆಟಪ್ಪೇ ವಿಶೇಷವಾಗಿದೆ. ತುಂಡುಡುಗೆ ಅಲ್ಲದೆ ಮೈತುಂಬಾ ಕಪ್ಪುಬಣ್ಣ ನನಗಿರುತ್ತದೆ ಎಂದರು. ಇನಾಮ್ದಾರ್ ಕುಟುಂಬದ ಮಗನಾಗಿ ನಾನು ಕಾಣಿಸಿಕೊಂಡಿದ್ದೇನೆ ಎಂದು ನಾಯಕ ರಂಜನ್ ಛತ್ರಪತಿ ತಿಳಿಸಿದರು. ನಂತರ ನಿರ್ಮಾಪಕ ನಿರಂಜನ್‌ಶೆಟ್ಟಿ ತಲ್ಲೂರು ಮಾತನಾಡಿ, ನಾನೊಬ್ಬ ಉದ್ಯಮಿ. ಸಿನಿಮಾರಂಗ ನನಗೆ ಹೊಸತು ಎಂದು ಪರಿಚಯಿಸಿಕೊಂಡರು. ನಾಯಕಿ ಚಿರಶ್ರೀ ಅಂಚನ್ ಮಾತನಾಡಿ, ಈ ಚಿತ್ರದಲ್ಲಿ ನಾನು ಕಾಡು ಜನರ ನಡುವಿನ ಕಪ್ಪು ಸುಂದರಿಯಾಗಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು. ಹಿರಿಯ ಕಲಾವಿದವಿದರಾದ ಎಂ.ಕೆ.ಮಠ, ರಘು ಪಾಂಡೇಶ್ವರ, ಚಿತ್ರಕಲಾ ತಂತಮ್ಮ ಪಾತ್ರಗಳ ಕುರಿತು ಹೇಳಿಕೊಂಡರು. ರಾಕಿಸೋನು ಹಾಗೂ ನಕುಲ್ ಅಭಯಂಕರ್ ಅವರ ಸಂಗೀತ, ಎನ್.ಮುರಳೀಧರ್ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ, ಎಸ್ತರ್ ನೊರೋನ್ಹಾ, ಸಂದೇಶ್‌ಶೆಟ್ಟಿ ಆಜ್ರಿ, ಥ್ರಿಲ್ಲರ್ ಮಂಜು, ಶರತ್ ಲೋಹಿತಾಶ್ವ, ಅವಿನಾಶ್, ಕರಣ್‌ಕುಂದರ್, ಯಶ್ ಆಚಾರ್ಯ, ನಾಗರಾಜ ಬೈಂದೂರು, ಪ್ರಶಾಂತ್‌ಸಿದ್ಧಿ, ಸಂಜು ಬಸಯ್ಯ ಚಿತ್ರದ ಉಳಿದ ಪಾತ್ರಗಳಲ್ಲಿದ್ದಾರೆ.

ಸಿನಿಪದಬಂಧ-495



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________



ವಿಜೇತರು: ಎಂ.ಕವಿತ, ಅಂಚೆ ಸಹಾಯಕಿ, ಅಂಚೆ ಇಲಾಖೆ, ಆಲನಹಳ್ಳಿ ಅಂಚೆ ಕಚೇರಿ, ಮೈಸೂರು-570028



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 494ರ ಉತ್ತರ

ತ	ತ್ಸ	ಮ	ತ	ಧ್ವ	ವ		ರೋ	ಡ್	ಕಿಂ	ಗ್
ಲೆ		ದ			ಜ್ರ		ಜಾ			
ದಂ	ಡ	ನಾ	ಯ	ಕ		ಕ್ಷೀ	ರ	ಸಾ	ಗ	ರ
ಡ		ರಿ		ಲ			ಮ			ವಿ
			ಪ್ರೇ	ಮ	ದ	ಕಾ	ಣಿ	ಕೆ		ಚಂ
ಆ	ಶಾ								ಇಂ	ದ್ರ
ಗಂ		ಕ	ವಿ	ತಾ	ಲಂ	ಕೇ	ಶ್			
ತು			ಜ			ಶ		ಮ		ಅ
ಕ	ಥಾ	ನಾ	ಯ	ಕ		ವ	ಸಂ	ತ	ಸೇ	ನಾ
			ವಾ		ಅಂ			ದಾ		ಮಿ
ಅ	ರ	ಗಿ	ಣಿ		ಕ	ನ	ಸಿ	ನ	ಲೋ	ಕ

ಎಡದಿಂದ ಬಲಕ್ಕೆ

1.ಒಲುಮೆ ಸಿರಿಯ ಕಂಡು ಬಯಕೆ ಸಿಹಿಯು ಉಂಡವರಿಗೆ ವಸ್ತುವಿಗೆ ಮೌಲ್ಯವಿದೆ 6
4. ರಾಮಾಯಣವಲ್ಲ ಅನಂತ್‌ನಾಗ್ ಅಭಿನಯದ ಚಿತ್ರ 4
5. ಶ್ರೀನಾಥ್ ಏನೂ ಅರಿಯದ ಮನುಷ್ಯ 5
7. ಶಂಕರ್‌ನಾಗ್-ದೀಪಿಕಾಳ ನೂತನ ಬದುಕು 5
9. ಶ್ರೀನಾಥ್-ಮಂಜುಳಾ ಕಂಡ ಸ್ವಪ್ನ ನಿಜವಾಗಿದೆ 6
10. ಬಿ.ಆರ್.ಪಂತುಲ ಅವರ ತಾಯಿ 2
11. ತವರಿನಲ್ಲಿ ಎಳೆದ ರಥ 2
12. ನಿರ್ಮಾಪಕ ರಾಮುವಿನ ಸ್ವಪ್ನದರಸಿ ! 6
17. ಪ್ರಾಣಕ್ಕೆ ಪ್ರಾಣ ಎನ್ನುವರ್ಥದ ಚಿತ್ರ 5
18. ಟೈಗರ್ ಪ್ರಭಾಕರ್ ಯುದ್ಧ ಕೇಸರಿ 5
20. ಶಶಿಕುಮಾರ್-ಶ್ರುತಿ ಸಂಗಮಿಸಿದ್ದಾರೆ 4
21. ಶ್ವೇತಾ, ಶಿಲ್ಪಾ ಅಭಿನಯದ ಚಿತ್ರ 6

ಮೇಲಿನಿಂದ ಕೆಳಕ್ಕೆ

1. ಪ್ರಭಾಕರ್ ಸೆರೆಯಿಂದ ವಿಮೋಚನೆಗೊಂಡಿದ್ದಾನೆ 4
2. ಆ ಕಿರಣಗಳಿಗೆ ಚುಂಬಿಸೋ ರಘುರಾಮ ಹೊಂಗಿರಣದೊಳಗೆ ಸುಂದರನೀತ 4
3. ನಿರ್ದೇಶಕ ಜಯರಾಂ ಅವರ ಇನ್ಸಿಲ್ 2
4. ಮನ್ಮಥ ನಿರ್ಮಿಸಿದ ಪ್ರೀತಿಯ ಸೌಧ 5
6. ಶಿವಶರಣರ ನುಡಿ 3
8. "ಹೋಗದಿರಿ ಸೋದರರೇ ಹೋಗದಿರಿ ಬಂಧುಗಳೇ.....", ಗೀತೆಯ ಚಿತ್ರ 4
10.ರಾಜೀವ್ ಅಭಿನಯದ ಚೊಕ್ಕ ಚಿನ್ನಕ್ಕೆ ಕೊನೆಯಲ್ಲಿ ಧೀರ್ಘವಿದೆ 4
13.ಪಿ.ಎಸ್. ಮೂರ್ತಿ ನಿರ್ದೇಶನದ ಹೊಸ ಬಾಳು 5
14. ಶಿವರಾಜ್ ಕುಮಾರ್ "ಅಸುರ" 3
15.ರಾಮಕೃಷ್ಣನೊಂದಿಗಿನ ಬಿರುದು ಇಲ್ಲಿ ತಲೆಕೆಳಗು 4
16. ಮಾಲಾಶ್ರೀ ಮನೆಯ ಅದೃಷ್ಟ ದೇವತೆ 4
19. ವಧುವಿನ ಜಾತಿ ಗೌರವವನ್ನೂ ಕಾಪಾಡಿದೆ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಕಿರುತೆರೆಯಲ್ಲಿ ಫಿಟ್‌ಬಾಸ್ ರಿಯಾಲಿಟಿ ಶೋ

ಮನುಷ್ಯನಿಗೆ ಆರೋಗ್ಯ ಎಲ್ಲದಕ್ಕಿಂತ ಬಹಳ ಮುಖ್ಯ. ಕಿರುತೆರೆಯಲ್ಲಿ ಸಾಕಷ್ಟು ಆರೋಗ್ಯ ಸಂಬಂಧಿ ಕಾರ್ಯಕ್ರಮಗಳು ಪ್ರಸಾರವಾಗಿವೆ. ಆದರೆ ಇದೇ ಮೊದಲ ಬಾರಿಗೆ ಆರೋಗ್ಯದ ಕುರಿತ ರಿಯಾಲಿಟಿ ಷೋವೊಂದನ್ನು ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾಕೇಂದ್ರ (ಕ್ಷೇಮವನ) ಹಾಗೂ ಸಿರಿಕನ್ನಡ ವಾಹಿನಿ ಮತ್ತು ಆಯುಷ್ ಟಿವಿ ಸಹಭಾಗಿತ್ವದಲ್ಲಿ ಅ.16ರಿಂದ ಪ್ರಾರಂಭಿಸಲಾಗುತ್ತಿದೆ. ವಿಶೇಷವಾಗಿ ಸ್ಥೂಲಕಾಯದವರಿಗೆಂದೇ ಫಿಟ್‌ಬಾಸ್ ರಿಯಾಲಿಟಿ ಶೋವನ್ನು ಆರಂಭಿಸಲಾಗಿದೆ. ನಮ್ಮೊಂದಿಗೆ ಸಿರಿಕನ್ನಡ ವಾಹಿನಿ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಕೇಂದ್ರವು ಕೈಜೋಡಿಸಿದೆ ಎಂದು ಆಯುಷ್ ಟಿವಿಯ ಅರುಣಾಚಲಂ ತಿಳಿಸಿದರು. ಆಯುಷ್ ಟಿವಿಯಲ್ಲಿ ಸಂಜೆ 7ಕ್ಕೆ ಹಾಗೂ ಸಿರಿಕನ್ನಡ ವಾಹಿನಿಯಲ್ಲಿ ರಾತ್ರಿ 8ಕ್ಕೆ ಪ್ರಸಾರವಾಗಲಿದೆ ಎಂದರು ಸಿರಿಕನ್ನಡ ವಾಹಿನಿಯ ಸಂಜಯ್ ಶಿಂಧೆ ಹೇಳಿದರು. ಬಿಗ್‌ಬಾಸ್ ಖ್ಯಾತಿಯ ಪ್ರಶಾಂತ್ ಸಂಬರ್ಗಿ ಅವರು ಫಿಟ್ ಬಾಸ್ ರಿಯಾಲಿಟಿ ಶೋನ ಆರಂಭದ ದಿನ ಹಾಗೂ ಫಿನಾಲೆಯಂದು ವಿಶೇಷ ನಿರೂಪಕರಾಗಿರುತ್ತಾರೆ. ಆಯುಷ್ ಟಿವಿಯ ಅರುಣಾಚಲಂ, ಹರಿಕೃಷ್ಣ, ದಿವ್ಯ, ಸಿರಿಕನ್ನಡ ವಾಹಿನಿಯ ಸಂಜಯ್ ಶಿಂಧೆ, ರಾಜೇಶ್ ರಾಜಘಟ್ಟ, ಫಿಟ್ ಬಾಸ್ ನಿರ್ದೇಶಕ ಬಾಲಕೃಷ್ಣ, ಅರವಿಂದ್ ಎನ್.ಜೆ, ಪವನ್‌ಕುಮಾರ್, ವಿನಾಯಕ್ ಪೈ, ಮುಂತಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಾನಸಿಕ ತೊಂದರೆಗೊಳಗಾದವರನ್ನು ಟೀಕಿಸಬೇಡಿ



ಸರಗೂರು, ಅ.12– ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಾಗೂ ಚಿತ್ತ ಸಂಜೀವಿನಿ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿಶ್ವ ಮಾನಸಿಕ ಆರೋಗ್ಯ ದಿನ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮನೋವೈದ್ಯಕೀಯ ಸಲಹೆಗಾರ ಡಾ.ಯು.ಕೆ.ವಿನಯ್ ರಾವ್ ಮಾತನಾಡಿ, ಮನುಷ್ಯನಿಗೆ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯ ಮುಖ್ಯ. ಆದ್ದರಿಂದ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಸಮುದಾಯದಲ್ಲಿ ಮಾನಸಿಕವಾಗಿ ತೊಂದರೆಗೆ ಒಳಗಾದವರನ್ನು ಟೀಕಿಸುವುದು ಹಾಗೂ ನಿರ್ಲಕ್ಷಿಸುವುದು ಸರಿಯಲ್ಲ. ಮಾನಸಿಕ ಆರೋಗ್ಯಕ್ಕೆ ಆಪ್ತ ಸಮಾಲೋಚನೆ ಮೂಲಕ ಸೂಕ್ತ ಚಿಕಿತ್ಸೆ ಪಡೆಯಬಹುದು ಎಂದರು.

ಗ್ರಾಮೀಣ ಭಾಗದಲ್ಲಿ ಕೆಲವರು ಮೂಢ ನಂಬಿಕೆಯಿಂದ ಮಾನಸಿಕ ರೋಗಕ್ಕೆ ಚಿಕಿತ್ಸೆ ಕೊಡಿಸದೆ ತೊಂದರೆಗೆ ಒಳಗಾಗುತ್ತಿದ್ದಾರೆ. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವಿಶೇಷ ಚೇತನರಿಗಾಗಿ ಸಮಗ್ರ ಆರೈಕೆ, ಬೆಂಬಲ ಮತ್ತು ಚಿಕಿತ್ಸಾ ಕಾರ್ಯಕ್ರಮ ನಡೆಸುತ್ತಿರುವುದರಿಂದ ಗ್ರಾಮೀಣ ಜನರಿಗೆ ಅನುಕೂಲವಾಗಿದೆ. ಮಾನಸಿಕ ರೋಗಗಳ ಲಕ್ಷಣಗಳು ಕಂಡುಬಂದಲ್ಲಿ ದಯವಿಟ್ಟು ಮೊದಲು ವೈದ್ಯರನ್ನು ಸಂಪರ್ಕಿಸುವಂತೆ ಸಲಹೆ ನೀಡಿದರು.

ಎನ್.ಬೇಳತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ.ಎಂ.ಪಿ.ಶೇಷಾದ್ರಿ ಮಾತನಾಡಿ, ಮಾನಸಿಕ ಸಮಸ್ಯೆ ಸಾಮಾನ್ಯವಾಗಿದ್ದು ಗುಣಪಡಿಸಲು ಅವಕಾಶವಿದೆ. ಸರಿಯಾದ ಔಷಧೋಪಚಾರ, ವೈದ್ಯರ ಸಲಹೆಗಳನ್ನು ಪಾಲಿಸಿದರೆ ಮಾನಸಿಕ ರೋಗ ಗುಣವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ತಿಳಿಸಿದರು.

ಚಿತ್ತಧಾಮ ಚಾರಿಟಬಲ್ ಟ್ರಸ್ಟ್ ವ್ಯವಸ್ಥಾಪಕ ಮಹದೇವಸ್ವಾಮಿ ಮಾತನಾಡಿದರು.

ವಿವೇಕಾನಂದ ಸ್ಮಾರಕ ಆಸ್ಪತ್ರೆಯ ತಜ್ಞ ಡಾ.ಅಭಿಲಾಷ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವ್ಯವಸ್ಥಾಪಕ ಎಂ.ಪಿ.ರಮೇಶ, ಸಿಬ್ಬಂದಿ ಶ್ರೀಧರ, ಸದಾಶಿವ, ಮಹೇಶ್ ಸಿ, ಪೂರ್ಣಿಮಾ, ಮಮತಾ, ರಾಜು ಉಪಸ್ಥಿತರಿದ್ದರು.

ಆಸ್ಪತ್ರೆಗೆ ಸೌಲಭ್ಯ ಒದಗಿಸಲು ಕ್ರಮ

ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕ ವಸಂತ್ ಕುಮಾರ್ ಭರವಸೆ



ತಿ.ನರಸೀಪುರ, ಅ.12–ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯ ಸೌಲಭ್ಯ ಒದಗಿಸಲು ಸೂಕ್ತ ಕ್ರಮ ವಹಿಸುವುದಾಗಿ ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕ ಹಾಗೂ ಜಿಲ್ಲಾ ನೋಡಲ್ ಅಧಿಕಾರಿ ವಸಂತ್ ಕುಮಾರ್ ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯ ಸಮಸ್ಯೆ ಹಾಗೂ ಬೇಡಿಕೆಗಳ ಈಡೇರಿಕೆಗಾಗಿ ದಸಂಸ ಕಾರ್ಯಕರ್ತರು ಇತ್ತೀಚೆಗೆ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಗುರುವಾರ ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯಾಧಿಕಾರಿಗಳು ಹಾಗೂ ದಸಂಸ ಮುಖಂಡರಿಂದ ಮಾಹಿತಿ ಪಡೆದು ಮಾತನಾಡಿದ ಅವರು, ಶವಾಗಾರದ ದುಸ್ಥಿತಿಯ ಬಗ್ಗೆ ಗಮನ ಹರಿಸಲಾಗುವುದು. ಸರ್ಕಾರಿ ವೈದ್ಯರು ಖಾಸಗಿಯಾಗಿ ಅಭ್ಯಾಸ ಮಾಡಲು ನಿರ್ಬಂಧವಿಲ್ಲ. ಆದರೆ, ಕೆಎಂಸಿ ನಿಯಮ ವ್ಯಾಪ್ತಿಯೊಳಗಿರಬೇಕು. ಕೆಎಂಸಿ ನಿಯಮಗಳ ಬಗ್ಗೆ ಮತ್ತೊಮ್ಮೆ ಪರಿಶೀಲಿಸಲಾಗುವುದು. ಒಂದು ವೇಳೆ ಯಾವುದೇ ತಪ್ಪುಗಳಿದ್ದಲ್ಲಿ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಈಗಾಗಲೇ ಆಸ್ಪತ್ರೆಯ ಬೇಡಿಕೆ ಹಾಗೂ ದೂರುಗಳ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿ ಮನವಿ ಸ್ವೀಕರಿಸಿದ್ದಾರೆ. ಅವರು ಸೂಕ್ತ ತನಿಖೆ ನಡೆಸಿ ವರದಿ ನೀಡಲಿದ್ದಾರೆ. ವರದಿ ಬಂದ ನಂತರ ಪರಿಶೀಲಿಸಿ, ಮುಂದಿನ ಕ್ರಮ ವಹಿಸಲಾಗುವುದು. ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಯೋಗ ಪರೀಕ್ಷೆಗಳ ಸೌಲಭ್ಯಗಳಿದ್ದಲ್ಲಿ ಅಂತಹ ಪರೀಕ್ಷೆಗಳನ್ನು ಹೊರಗುತ್ತಿಗೆ ಮೂಲಕ ನಿಯೋಜನೆಗೊಂಡ ಖಾಸಗಿ ಪಾಲಿ ಕ್ಲಿನಿಕ್ ಕಡೆ ಮಾಡಿಸಿದಲ್ಲಿ ಅವರಿಗೆ ಸರ್ಕಾರದಿಂದಲೇ ಹಣ ಪಾವತಿಸುವ ಬಗ್ಗೆ ಕಾರ್ಯ ಯೋಜನೆ ರೂಪಿಸಲಾಗುತ್ತಿದೆ. ಆದರೆ, ಆಸ್ಪತ್ರೆಯಲ್ಲಿ ಸಿಗುವ ಸೌಲಭ್ಯಗಳಿಗೆ ಹೊರಗೆ ಬರೆದು ಕಳುಹಿಸುವಂತಿಲ್ಲ ಎಂದು ಎಚ್ಚರಿಸಿದರು.

ಇದೇ ವೇಳೆ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಎಸ್.ಚಂದ್ರಶೇಖರ್ ಮಾತನಾಡಿ, ಸರ್ಕಾರಿ ವೈದ್ಯರು ಕೆಲಸದ ಅವಧಿಯಲ್ಲಿ ಖಾಸಗಿಯಾಗಿ ಅಭ್ಯಾಸ ಮಾಡುವುದು ಸರಿಯಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕು. ಪ್ರಸೂತಿ ತಜ್ಞರ ಕಾರ್ಯವೈಖರಿಯ ಬಗ್ಗೆ ಸಾಕಷ್ಟು ಸಾರ್ವಜನಿಕ ದೂರುಗಳಿವೆ. ಖಾಸಗಿ ಆಸ್ಪತ್ರೆ ಮಾಡಿಕೊಂಡು ಇಲ್ಲಿ ಬಂದವರನ್ನು ಅಲ್ಲಿಗೆ ಕಳುಹಿಸುವ ಪ್ರಯತ್ನ ಮಾಡಲಾಗುತ್ತಿದೆ. ಶವಾಗಾರ ಬಹಳ ದುಸ್ಥಿತಿಯಲ್ಲಿದ್ದು, ಅದು ದುರಸ್ತಿಗೊಳ್ಳಬೇಕು ಹಾಗೂ ಶಿಥಲೀಕರಣ ಕೇಂದ್ರವಾಗಬೇಕು. ಆಸ್ಪತ್ರೆಗೆ ಹೆಚ್ಚು ಬಡಜನರೇ ಬರುವುದರಿಂದ ಎಲ್ಲಾ ಅಗತ್ಯ ಚಿಕಿತ್ಸಾ ಹಾಗೂ ಪ್ರಯೋಗಾಲಯ ಸೌಲಭ್ಯ ದೊರಕಬೇಕಿದೆ. ವಸತಿ ಗೃಹಗಳಲ್ಲಿ ವೈದ್ಯರು ಉಳಿಯುತ್ತಿಲ್ಲ. ತುರ್ತು ಚಿಕಿತ್ಸಾ ವೈದ್ಯರ ನಿಯೋಜನೆಯಾಗಬೇಕು ಎಂದು ನೋಡಲ್ ಅಧಿಕಾರಿಗೆ ಮನವಿ ಮಾಡಿದರು.

ಆಡಳಿತಾಧಿಕಾರಿ ಡಾ.ಜಗನ್ನಾಥ್, ದಸಂಸ ಮುಖಂಡರಾದ ಕನ್ನನಾಯಕನಹಳ್ಳಿ ಮರಿಸ್ವಾಮಿ, ನಿಲಸೋಗೆ ಕುಮಾರ್, ಆಲಗೂಡು ನಾಗರಾಜು, ಚೌಹಳ್ಳಿ ಪರಶುರಾಮ್, ಕುಕ್ಕೂರು ರಾಜು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರಾಜಮಾರ್ತಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಚಂದ್ರಮುಖಿ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಂತಿರಾಂ ಚಾಪ್ಟರ್–1 (ತೆ)	4 ಪ್ರದರ್ಶನಗಳು
ಸಂಗಂ	
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕಂದ (ತೆ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಎಗ್ಸಾರ್‌ಸಿಸ್ಟ್ ಬಿಲಿವರ್ (ಇಂ): ಬೆ.10.50ಕ್ಕೆ, ರಾ.10ಕ್ಕೆ, 800 (ತ): ಮ.1.15ಕ್ಕೆ, ಅಭಿರಾಮಚಂದ್ರ (ಕ): ಸಂ.4.25ಕ್ಕೆ, ದಿ ವ್ಯಾಕ್ಸಿನ್ ವಾರ್ (ಹಿಂ): ಸಂ.6.50ಕ್ಕೆ.
ಸ್ಕ್ರೀನ್ 2	ಕನ್ನೂರ ಸ್ಕ್ವಾಡ್ (ಮ): ಬೆ.10.40ಕ್ಕೆ, ರಥಂ (ತ): ಮ.1.45ಕ್ಕೆ, ರೂಲ್ಸ್ ರಂಜನ್ (ತೆ): ಸಂ.410ಕ್ಕೆ, ಮಿಷನ್ ರಾಣಿಗಂಜ್ (ಹಿಂ): ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ರಾಜಮಾರ್ತಾಂಡ (ಕ): ಬೆ.10.55ಕ್ಕೆ, ತೋತಾಪುರಿ 2 (ಕ): ಮ.1.35ಕ್ಕೆ, ಜವಾನ್ (ಹಿಂ): ಸಂ.4.05ಕ್ಕೆ, ಥ್ಯಾಂಕ್ಯೂ ಫಾರ್ ಕಮಿಂಗ್ (ಹಿಂ): ರಾ.7.25ಕ್ಕೆ, ಚಾವರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (ಕ): ಬೆ.10.40ಕ್ಕೆ, ಬಾನ ದಾರಿಯಲ್ಲಿ (ಕ): ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮ್ಯಾಡ್ 2023 (ತೆ): ಸಂ.4.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬಾನ ದಾರಿಯಲ್ಲಿ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45, ರಾ.9ಕ್ಕೆ.
ಸ್ಕ್ರೀನ್ 2	ಪಾವ್ ಪಟ್ರೋಲ್ (ಇಂ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ರಾ.8.15ಕ್ಕೆ, ಮಿಷನ್ ರಾಣಿಗಂಜ್ (ಹಿಂ): ಸಂ.5.15ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.11.55ಕ್ಕೆ, ಪಾವ್ ಪಟ್ರೋಲ್ (ಇಂ): ಮ.3.20ಕ್ಕೆ, ಸಂ.5.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 4	ಮಿಷನ್ ರಾಣಿಗಂಜ್ (ಹಿಂ): ಬೆ.11ಕ್ಕೆ, ಮಾರಕಾಸ್ತ್ರ (ಕ): ಮ.3ಕ್ಕೆ, ಅಭಿರಾಮಚಂದ್ರ (ಕ): ಸಂ.6.20ಕ್ಕೆ, ಮ್ಯಾಡ್ (ತೆ): ರಾ.9ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS


ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಾಂತರಾಜು ವರದಿ ಸ್ವೀಕರಿಸುವಂತೆ ಆಗ್ರಹಿಸಿ ಧರಣಿ



ಹುಣಸೂರು, ಅ.12–ಕಾಂತರಾಜು ಆಯೋಗದ ವರದಿ ಸ್ವೀಕರಿಸುವಂತೆ ಹಾಗೂ 2ಬಿ ವರ್ಗದ ಮೀಸಲಾತಿಯನ್ನು ಶೇ.8ಕ್ಕೆ ಏರಿಸುವಂತೆ ಆಗ್ರಹಿಸಿ ಎಸ್‌ಡಿಪಿಐ ಮೈಸೂರು ಗ್ರಾಮಾಂತರ ಸಮಿತಿಯ ಕಾರ್ಯಕರ್ತರು ಗುರುವಾರ ಪಟ್ಟಣದ ತಹಸೀಲ್ದಾರ್ ಕಚೇರಿ ಎದುರು ಧರಣಿ ನಡೆಸಿದರು.

2014ರಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಗೆ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರ ನೇತೃತ್ವದಲ್ಲಿ ಕಾಂತರಾಜ್ ಆಯೋಗ ನೇಮಿಸಿ, ಹಿಂದುಳಿದ ವರ್ಗಗಳ ಸಮೀಕ್ಷೆ ನಡೆಸಿ ವರದಿ ನೀಡಲು ಸೂಚಿಸಿತು. ಆದರೆ, ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ 2ಬಿ ವರ್ಗದ ಮುಸ್ಲಿಮರ ಶೇ.4ರಷ್ಟು ಮೀಸಲಾತಿಯನ್ನು ರದ್ದುಗೊಳಿಸಿದೆ. ಆದ್ದರಿಂದ ರಾಜ್ಯ ಸರ್ಕಾರ ಮರು ಪರಿಶೀಲಿಸಿ ಶೇ.8ಕ್ಕೆ ಏರಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಚುನಾವಣೆ ಪೂರ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ 2ಬಿ ಮೀಸಲಾತಿಯನ್ನು ಮರು ಪರಿಶೀಲಿಸಿ, ಬಿಹಾರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರ ಕಾಂತರಾಜ್ ಆಯೋಗದ ವರದಿಯನ್ನು ಸ್ವೀಕರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿಯ ಮಹಿಳಾ ಸಂಚಾಲಕಿ ರುಕ್ಮಿಣಿ, ನಗರಸಭೆ ಸದಸ್ಯ ಸೈಯದ್ ಯೂನಸ್, ಎಸ್‌ಡಿಪಿಐ ತಾಲೂಕು ಅಧ್ಯಕ್ಷ ಸಯ್ಯದ್ ಅಕ್ಬರ್, ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಝುಬಿವುಲ್ಲಾ, ಕಾರ್ಯದರ್ಶಿ ಸತೀಶ್ ಸಣ್ಣೇನಹಳ್ಳಿ, ಸಂಘಟನಾ ಕಾರ್ಯದರ್ಶಿ ಲಿಯಕತ್, ಜಿಲ್ಲಾ ಸಮಿತಿ ಸದಸ್ಯರಾದ ಜೆ.ಮಹದೇವು, ಮೊಹಮ್ಮದ್ ತಬ್ರೇಜ್, ಮುಸ್ತಾಫಖಾನ್, ಮೌಲಾನಾಖಾಲಿದ್, ವಿಮೆನ್ಸ್ ಇಂಡಿಯಾ ಮೂಮೆಂಟ್ ಅಧ್ಯಕ್ಷೆ ಸಾಯಿಮಾ, ಸಿದ್ದಿಕಾ, ಉಪಾಧ್ಯಕ್ಷೆ ಸಮೀನಾಇಮ್ರಾನ್, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಮತ್ತಿತರರು ಭಾಗವಹಿಸಿದ್ದರು.



ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಗುರುವಾರ ಸಂಸದರಾದ ಡಾ.ರಮಾಪತಿ ರಾಮ್ ತ್ರಿಪಾಠಿ, ನಿರಂಜನ್ ಬಿಶಿ, ರಾಜ್ಯಸಭಾ ಸದಸ್ಯರಾದ ಜೈರಾಮ್ ಶಂಕರ್, ಜೋಸ್ ಕೆ.ಮಣಿ, ಇಂದು ಬಾಲಗೋಸ್ವಾಮಿ, ನಬಾಬ್ ರೇಬಿಯಾ, ಪರಿಮಳ್ ನತ್ವಾಣಿ ಭೇಟಿ ನೀಡಿ, ಸ್ವಾಮಿಯ ದರ್ಶನ ಪಡೆದರು.

ಬಲಿಜ ಸಮುದಾಯಕ್ಕೆ ನ್ಯಾಯ ಒದಗಿಸುವೆ



ಪಿರಿಯಾಪಟ್ಟಣ, ಅ.12–ಬಲಿಜ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು ಎಂದು ಸಚಿವ ಕೆ.ವೆಂಕಟೇಶ್ ಭರವಸೆ ನೀಡಿದರು.

ಪಟ್ಟಣದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ನಡೆದ ತಾಲೂಕು ಯೋಗಿ ನಾರೇಯಣ ಬಲಿಜ ಸಂಘದ ಉದ್ಘಾಟನೆ ಹಾಗೂ ತಾಲೂಕು ಮಟ್ಟದ ವಿಭಾಗೀಯ ಸಮಾವೇಶದಲ್ಲಿ ಮಾತನಾಡಿದ ಅವರು, ಬಲಿಜ ಸಮಾಜಕ್ಕೆ ಮೀಸಲಾತಿಯಲ್ಲಿ ಆಗಿರುವ ಅನ್ಯಾಯ ಸರಿಪಡಿಸಲು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಸಮಾಜದ ಬೆಳವಣಿಗೆಗೆ ಎಲ್ಲಾ ಸಮುದಾಯಗಳ ಕೊಡುಗೆ ಮುಖ್ಯವಾಗಿದ್ದು, ಅದೇ ರೀತಿ ಎಲ್ಲರೂ ಒಗ್ಗಟ್ಟಿನಿಂದ ನಡೆಯಬೇಕು. ಯೋಗಿ ನಾರೇಯಣರು ತಮ್ಮ ಜೀವನವನ್ನು ಸಮಾಜಕ್ಕೆ ಮುಡಿಪಾಗಿಟ್ಟಿದ್ದರು. ಅವರ ಆದರ್ಶಗಳನ್ನು ಇಂದಿನ ಯುವಪೀಳಿಗೆ ಮೈಗೂಡಿಸಿಕೊಳ್ಳಬೇಕು. ತಾಲೂಕು ಬಲಿಜ ಸಂಘಕ್ಕೆ ನಿವೇಶನ ಹಾಗೂ ಕಟ್ಟಡಬೇಕೆಂದು ಮನವಿ ಮಾಡಿದ್ದು, ಈ ಸಂಬಂಧ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಬಲಿಜ ಸಂಘದ ರಾಜ್ಯಾಧ್ಯಕ್ಷ ಟಿ.ವೇಣುಗೋಪಾಲ್, ತಾಲೂಕು ಅಧ್ಯಕ್ಷ ಎನ್.ಜಗದೀಶ್, ಉಪಾಧ್ಯಕ್ಷ ಸುಬ್ರಹ್ಮಣ್ಯ, ಪ್ರಧಾನ ಕಾರ್ಯದರ್ಶಿ ರಮೇಶ್, ಖಜಾಂಚಿ ಬೋಗೇಶ್, ಸಂಚಾಲಕರಾದ ರಾಜಣ್ಣ, ಪಿ.ಸುರೇಶ್, ನಿರ್ದೇಶಕರಾದ ಪಾಪಣ್ಣ, ಜಿ.ವಿ.ನಾಗೇಶ್, ರಮೇಶ್, ಮೈಸೂರು ಮಹಾರಾಜ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಎಸ್.ಕೃಷ್ಣಪ್ಪ ಮತ್ತಿತರರಿದ್ದರು.

ರಾಸಾಯನಿಕ ಆಹಾರ ಸೇವನೆಯಿಂದ ಅನಾರೋಗ್ಯ ಹೆಚ್ಚು



ಹೆಚ್.ಡಿ.ಕೋಟೆ, ಅ.12–ಪ್ರತಿಯೊಬ್ಬರು ಜೀವನದಲ್ಲಿ ಯೋಗವನ್ನು ರೂಢಿಸಿಕೊಂಡರೆ ಉತ್ತಮ ಆರೋಗ್ಯ ಪಡೆಯಬಹುದು ಎಂದು ಪಡುವಲ ವಿರಕ್ತ ಮಠಾಧ್ಯಕ್ಷ ಶ್ರೀ ಮಹದೇವಸ್ವಾಮೀಜಿ ತಿಳಿಸಿದರು.

ಪಟ್ಟಣದ ಗುರುಭವನದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆಯ ಶಾಂತಿವನ ಟ್ರಸ್ಟ್ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿಸಿ ಟ್ರಸ್ಟ್ ವತಿಯಿಂದ ನಡೆದ ಯೋಗಾಸನ, ಪ್ರಾಣಾಯಾಮ, ಧ್ಯಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯೋಗ ಮತ್ತು ಧ್ಯಾನದಿಂದ ಒತ್ತಡ ನಿವಾರಣೆಯಾಗಿ ಆರೋಗ್ಯವಂತ ಜೀವನ ನಡೆಸಬಹುದು. ನಮ್ಮ ಹಿರಿಯರು ಉತ್ತಮ ಆಹಾರ ಮತ್ತು ಜೀವನ ಪದ್ಧತಿಯಿಂದ ದೀರ್ಘಾಯುಷ್ಯ ಹೊಂದಿದ್ದರು. ಆದರೆ, ಆಧುನಿಕ ಜೀವನ ಪದ್ಧತಿ ಮತ್ತು ರಾಸಾಯನಿಕ ಬಳಕೆಯ ಆಹಾರ ಕ್ರಮದಿಂದ ಅನಾರೋಗ್ಯ ಹೆಚ್ಚಾಗಿದೆ. ಹಾಗಾಗಿ ಎಲ್ಲರೂ ಆರೋಗ್ಯವನ್ನು ಪಡೆಯಲು ಇಂತಹ ಶಿಬಿರಗಳ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾತನಾಡಿ, ಯೋಗ ಋಷಿ ಮುನಿಗಳ ಕೊಡುಗೆಯಾಗಿದೆ. ಮನುಷ್ಯ ಸದೃಢವಾಗಿದ್ದರೆ ಸಾಲದು, ಆತ ಮಾನಸಿಕವಾಗಿಯೂ ಸದೃಢವಾಗಬೇಕು. ಯೋಗ ವಿಶ್ವ ಮಾನ್ಯತೆಯನ್ನು ಪಡೆದುಕೊಂಡು ವಿದೇಶಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದೆ. ಅದರ ಮಹತ್ವವನ್ನು ಮೊದಲು ನಾವು ತಿಳಿದುಕೊಳ್ಳಬೇಕಾಗಿದೆ. ಯೋಗ ದೇಹ ಮತ್ತು ಮನಸ್ಸನ್ನು ಸಮತೋಲನಗೊಳಿಸುತ್ತದೆ ಎಂದರು.

ಶಾಂತಿವನ ಟ್ರಸ್ಟ್ ನಿರ್ದೇಶಕ ಡಾ.ಐ.ಶಶಿಕಾಂತ್ ಜೈನ್ ಮಾತನಾಡಿ, ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆಯ ಮೂಲಕ ರಾಜ್ಯದಲ್ಲಿ 40 ಶಿಬಿರ ನಡೆಸಿ 1.40 ಲಕ್ಷ ಜನರಿಗೆ ಯೋಗ ಕಲಿಸಲಾಗಿದೆ. ತಾಲೂಕಿನ ಗ್ರಾಮಾಂತರ ಸೇರಿ 80 ಕಡೆ ಯೋಗ ತರಗತಿ ನಡೆಸಲಾಗುತ್ತಿದೆ. ಜತೆಗೆ ವಿದ್ಯಾರ್ಥಿಗಳಿಗೆ ಪಂಚಮುಖಿ ವ್ಯಕ್ತಿತ್ವ ವಿಕಸನ ಯೋಗ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ವೆಂಕಟೇಶ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ, ತಾಲೂಕು ಯೋಜನಾಧಿಕಾರಿ ವಿ.ಭಾಸ್ಕರ್, ವಕೀಲರ ಸಂಘದ ಅಧ್ಯಕ್ಷ ಎ.ಸಿ.ರವಿಕುಮಾರ್, ರಾಜ್ಯ ಯೋಗ ಸಂಘಟಕ ಶೇಖರ್ ಕಡ್ತಲ, ಕನ್ನಡ ಪ್ರಮೋದ, ಸಿ.ಎನ್.ನಾಗಣ್ಣ ಚಾ.ನಂಜುಂಡಮೂರ್ತಿ, ಇಬ್ರಾಹಿಂ, ವಿನಯ್ ಭಜರಂಗಿ, ಜೆ.ಪಿ.ಶಿವರಾಜಪ್ಪ, ಶ್ರೀಕಾಂತ್, ಸಂಸ್ಥೆಯ ಮೇಲ್ವಿಚಾರಕರಾದ ಪವಿತ್ರ, ಭಾರತಿ, ಕೃಷ್ಣಮೂರ್ತಿ, ರೇಖಾ, ವರ್ಷಾ, ವೀಣಾ ಇದ್ದರು.



ಹುಲ್ಲಹಳ್ಳಿ ಸಮೀಪದ ರಾಂಪುರ ಗ್ರಾಪಂ ಮಾಹಿತಿ ಕೇಂದ್ರದಲ್ಲಿ ಸಂಜೀವಿನಿ ಮಹಿಳಾ ಒಕ್ಕೂಟದ ಸದಸ್ಯೆಯರಿಗೆ ಗ್ರಂಥಾಲಯ ಸದಸ್ಯತ್ವ ನೋಂದಣಿ ಪತ್ರ ವಿತರಿಸಲಾಯಿತು. ತಾಪಂ ಕ್ಲಸ್ಟರ್ ಮೇಲ್ವಿಚಾರಕಿ ಲತಾ, ಪ್ರಭಾರ ಪಿಡಿಓ ಸಿ.ಕೆ.ವಿಜಯರಾಜ್, ಎಂ.ರುದ್ರಸ್ವಾಮಿ, ಬಿ.ಕೆ.ಗೀತಾ, ಮಹದೇವಮ್ಮ, ಶಾಂತಮ್ಮ, ಸ್ವಸಹಾಯ ಸಂಘದ ಸದಸ್ಯರಿದ್ದರು.

ಚಂದ್ರಮತಿ ನಿಧನ



ಬೆಟ್ಟದಪುರ, ಅ.12– ಪಿರಿಯಾಪಟ್ಟಣ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ ಅವರ ಪತ್ನಿ ಚಂದ್ರಮತಿ(68) ಗುರುವಾರ ಅನಾರೋಗ್ಯದಿಂದ ನಿಧನರಾದರು. ಮೃತರಿಗೆ ಪತಿ ಅಣ್ಣಯ್ಯಶೆಟ್ಟಿ, ಇಬ್ಬರು ಪುತ್ರರು, ಒಬ್ಬ ಪುತ್ರಿ, ಅಪಾರ ಬಂಧು–ಬಳಗ ಇದ್ದಾರೆ. ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಕಿತ್ತೂರಿನ ಗುರುವಯ್ಯನ ಕೊಪ್ಪಲು ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕರಾದ ಕೆ.ಮಹದೇವ್, ಸಾ.ರಾ.ಮಹೇಶ್, ಎಚ್.ಸಿ.ಬಸವರಾಜ್, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಂಜುನಾಥ್ ಸಂತಾಪ ಸೂಚಿಸಿದ್ದಾರೆ.

ಆರ್.ಎಂ.ರಾಮಪ್ರಸಾದ್




ಪಿರಿಯಾಪಟ್ಟಣ, ಅ.12–ತಾಲೂಕಿನ ರಾವಂದೂರು ಗ್ರಾಮದ ವರ್ತಕ ಆರ್.ಎಂ.ರಾಮಪ್ರಸಾದ್ (ಶಶಿಪಟೇಲ್–55 ವರ್ಷ) ಗುರುವಾರ ನಿಧನರಾದರು. ಮೃತರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ 10 ಗಂಟೆಗೆ ರಾವಂದೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ಲಂಬರ್ ಚಂದ್ರು



ಹುಣಸೂರು: ನಗರದ ಕಲ್ಕುಣಿಕೆಯ ಹೌಸಿಂಗ್‌ಬೋರ್ಡ್ ಕಾಲೋನಿಯ ದಿ. ನಲ್ಲಿ ನಾರಾಯಣ ಅವರ ಪುತ್ರ ಪ್ಲಂಬರ್ ಚಂದ್ರು(42) ಗುರುವಾರ ಅನಾರೋಗ್ಯದಿಂದ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಹಾಗೂ ಅಪಾರ ಬಂಧು–ಬಳಗ ಇದ್ದಾರೆ. ಪಟ್ಟಣದ ತಾಲೂಕು ಕಚೇರಿ ಪಕ್ಕದ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇವಯ್ಯ



ಹೆಚ್.ಡಿ.ಕೋಟೆ: ತಾಲೂಕಿನ ಹಂಪಾಪುರ ಹೋಬಳಿಯ ಆಲನಹಳ್ಳಿ ಗ್ರಾಮದ ನಿವಾಸಿ ದೇವಯ್ಯ (ಯತ್ತಯ್ಯ–90 ವರ್ಷ) ಬುಧವಾರ ನಿಧನರಾದರು. ಮೃತರಿಗೆ ಪತ್ನಿ ಪುಟ್ಟಮ್ಮ, ಮಕ್ಕಳಾದ ಹೊಸೂರಮ್ಮ, ರಾಜಣ್ಣ, ಗೌರಮ್ಮ, ಅಶ್ವಿನಿ, ಪ್ರತಾಪ್, ಸೊಸೆ ಶೋಭಾರಾಣಿ ಹಾಗೂ ಅಪಾರ ಬಂಧು–ಬಳಗ ಇದ್ದಾರೆ. ಮೃತರ ಜಮೀನಿನಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮಹಿಳೆ ಹೊಟ್ಟೆಯಲ್ಲಿತ್ತು ಎರಡೂವರೆ ಕೆಜಿ ಗೆಡ್ಡೆ

ಹೆಚ್.ಡಿ.ಕೋಟೆ: ಪಟ್ಟಣದ ಮಿನಿ ವಿಧಾನಸೌಧ ಎದುರಿನ ಕಬಿನಿ ಕೇರ್ ಆಸ್ಪತ್ರೆಯ ವೈದ್ಯರು ಮಹಿಳೆ ಹೊಟ್ಟೆಯಲ್ಲಿದ್ದ ಎರಡೂವರೆ ಕೆಜಿ ಗೆಡ್ಡೆಯನ್ನು ಯಶಸ್ವಿಯಾಗಿ ತೆಗೆದು ಚಿಕಿತ್ಸೆ ನೀಡಿದ್ದಾರೆ.

ಹುಣಸೂರು ತಾಲೂಕಿನ ಬಿಳಿಕೆರೆ ಗ್ರಾಮದ ಮಹಿಳೆ ಗಾಯತ್ರಿ ಹೊಟ್ಟೆ ನೋವಿನಿಂದ ಬಳಲುತ್ತಿದ್ದರಿಂದ ಕಬಿನಿ ಕೇರ್ ಆಸ್ಪತ್ರೆಗೆ ದಾಖಲಾಗಿದ್ದರು. ನಂತರ ಆಸ್ಪತ್ರೆಯ ಹಿರಿಯ ವೈದ್ಯರಾದ ದೀಪಕ್, ಡಾ. ದೀಪಿಕಾ ರೈ, ಡಾ.ಯಶವಂತ್, ಡಾ.ಸಂಜಯ್ ನೇತೃತ್ವದಲ್ಲಿ ಶಸ್ತ್ರಚಿಕಿತ್ಸೆ ನಡೆಸಿ, ಈಕೆಯ ಹೊಟ್ಟೆಯಲ್ಲಿದ್ದ ಗೆಡ್ಡೆಯನ್ನು ತೆಗೆಯಲು ಯಶಸ್ವಿಯಾಗಿದ್ದಾರೆ. ಈಗ ಈಕೆ ಆರೋಗ್ಯವಾಗಿದ್ದಾರೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಕೆಲಸ ಮಾಡದ ಪುರಸಭೆ ಸಿಬ್ಬಂದಿ ವಿರುದ್ಧ ಕ್ರಮ



ಕೆ.ಆರ್.ನಗರದ 9ನೇ ವಾರ್ಡ್‌ನಲ್ಲಿ ನಡೆಯುತ್ತಿದ್ದ ಚರಂಡಿ ಸ್ವಚ್ಛತೆಯನ್ನು ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ ಪರಿಶೀಲಿಸಿದರು.

ಕೆ.ಆರ್.ನಗರ, ಅ.12– ಕುಡಿಯುವ ನೀರು ಪೂರೈಕೆ, ಚರಂಡಿಗಳ ಸ್ವಚ್ಛತೆ, ಬೀದಿದೀಪ, ರಸ್ತೆ ರಿಪೇರಿ ಸೇರಿದಂತೆ ಮತ್ತಿತರರ ಕೆಲಸಗಳನ್ನು ಪುರಸಭೆಯ ಸಿಬ್ಬಂದಿ ಮಾಡದಿದ್ದಲ್ಲಿ ನನ್ನ ಗಮನಕ್ಕೆ ತಂದರೆ ಕ್ರಮ ಕೈಗೊಳ್ಳುವುದಾಗಿ ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ ತಿಳಿಸಿದರು.

ಪಟ್ಟಣದ 9ನೇ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಭೆಯಲ್ಲಿ ಮಾತನಾಡಿದ ಅವರು, ಹಸಿ ಮತ್ತು ಒಣ ಕಸ ವಿಂಗಡಿಸಿ ಪುರಸಭೆಯ ವಾಹನಕ್ಕೆ ನೀಡಬೇಕು. ಪ್ಲಾಸ್ಟಿಕ್ ಬಳಸಬೇಡಿ. ಪುರಸಭೆ ಸಿಬ್ಬಂದಿಯೊಂದಿಗೆ ಸೌಜನ್ಯದಿಂದ ವರ್ತಿಸಿ ಸ್ವಚ್ಛತೆಗೆ ಸಹಕರಿಸುವಂತೆ ಮನವಿ ಮಾಡಿದರು. ಈಗಾಗಲೇ 1 ಮತ್ತು 22ನೇ ವಾರ್ಡ್‌ಗಳಲ್ಲಿ ಸಭೆ ನಡೆಸಿ, ಅಲ್ಲಿನ ನಾಗರಿಕರ ಅಹವಾಲುಗಳನ್ನು ಸ್ವೀಕರಿಸಲಾಗಿದೆ. ಜತೆಗೆ 22ನೇ ವಾರ್ಡ್‌ನಲ್ಲಿ ವಾಸವಿರುವ ಮರಕುಕ್ಕೆ ತಯಾರಿಕೆ ಮಾಡುವವರನ್ನು ಗುರುತಿಸಿ ಬೀದಿಬದಿ ವ್ಯಾಪಾರಿಗಳ ಪಟ್ಟಿಗೆ ಸೇರಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಎಲ್ಲಾ ವಾರ್ಡ್‌ಗಳಲ್ಲಿ ಸಭೆ ನಡೆಸಿ, ಜನರ ಸಮಸ್ಯೆ ಆಲಿಸಿ ಅಗತ್ಯ ಮೂಲಸೌಕರ್ಯ, ನಿವೇಶನಗಳ ಖಾತೆ, ಮನೆಗಳ ಇ–ಸ್ವತ್ತು ಸೇರಿದಂತೆ ತಿಳಿವಳಿಕೆ ನೀಡುವುದು ಹಾಗೂ ಅವರಿಂದ ಮನೆ, ನೀರಿನ ಕಂದಾಯ ಪಾವತಿಸುವಂತೆ ತಿಳಿಸುವುದು. ಎಲ್ಲೆಲ್ಲಿ ವಾಣಿಜ್ಯ ಕಟ್ಟಡ ಮತ್ತು ಅಂಗಡಿಗಳು ಇವೆಯೋ ಅವುಗಳಿಗೆ ವಾಣಿಜ್ಯ ಕಂದಾಯ ವಿಧಿಸುವುದು ಸೇರಿದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಪುರಸಭೆಯ ಪರಿಸರ ಇಂಜಿನಿಯರ್ ರೀತು ಸಿಂಗ್, ಕಂದಾಯಾಧಿಕಾರಿ ರಮೇಶ್, ಸಹಾಯಕ ಇಂಜಿನಿಯರ್ ಚಂದ್ರಶೇಖರ್, ಸೌಮ್ಯ, ಆರೋಗ್ಯ ನಿರೀಕ್ಷಕರಾದ ಲೋಕೇಶ್, ರಾಜೇಂದ್ರ, ಪುರಸಭೆ ಸದಸ್ಯರಾದ ಕೋಳಿ ಪ್ರಕಾಶ್, ಮುಖಂಡ ಧರ್ಮ ಹಾಗೂ ಸಿಬ್ಬಂದಿ ಹಾಜರಿದ್ದರು.

ಮುಖ್ಯಾಧಿಕಾರಿಗೆ ಪ್ರಶಂಸೆ

ಪುರಸಭೆ ಮುಖ್ಯಾಧಿಕಾರಿ ಡಾ. ಜಯಣ್ಣ ನೇತೃತ್ವದಲ್ಲಿ ಮೊದಲ ಬಾರಿಗೆ ಪ್ರತಿ ವಾರ್ಡ್‌ಗಳ ಸಭೆ ಮಾಡುವ ಮೂಲಕ ಸಾರ್ವಜನಿಕರ ಸಮಸ್ಯೆ ಹಾಗೂ ಪಟ್ಟಣದ ನಾಗರಿಕರ ಆಸ್ತಿ ರಕ್ಷಣೆ, ಖಾತೆ ಮತ್ತು ಇ–ಸ್ವತ್ತುಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಕಂದಾಯ ವಸೂಲಿ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಇದನ್ನು ಮುಂದುವರಿಸುವಂತೆ ವಾರ್ಡ್‌ನ ಮೂಲ ನಿವಾಸಿಗಳು ತಿಳಿಸಿ, ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರು ರೇಸುಗಳು

12ನೇ ದಿನ, ಶುಕ್ರವಾರ 13–10–2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಲಲಿತ ಮಹಲ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಲೈಕ್ ಮೈ ಡ್ಯಾಡಿ 2. ಡಬ್ಬಲ್ ವಿಷನ್ 3. ಎಕೊ ಸಿಸ್ಟರ್

II. ಲೋಕ ಪಾವನಿ ಪ್ಲೇಟ್ ಡಿ2–1400 ಮೀ. ರೇಟೆಡ್ 20 ರಿಂದ 65.(ನೋ ವಿಫ್). ಮ.2.30ಕ್ಕೆ
1. ಇಲಿವಾಡೋ 2. ಮೇ ಬ್ಯಾಚ್ 3. ನ್ಯಾಚುರಲ್ ಹಂಟರ್

III. ತ್ರಿವೇಣಿ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಮ.3.00ಕ್ಕೆ
1 ಸ್ಪಿರಿಚ್ಯುಯಲ್ ಫೋರ್ಸ್ 2. ರಿಯಲ್ ಶೋ 3. ತೆನಾಲಿ

IV. ಅರಸ್ ಕಾರ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. (ಮೈಸೂರ್ ಬೇಸ್ಡ್ ಹಾರ್ಸ್). ಸಂ.3.30ಕ್ಕೆ
1. ವಿಜಯ ಫಾಲ್ಕನ್ 2. ಇಂಡಿಯನ್ ಪೆಟ್ರಿಯಟ್ 3. ವೈಲ್ಡ್ ಸ್ಪೆಲ್

V. ಬೆನಕ ಡೆವಲಪರ್ಸ್ ಮೈಸೂರ್ ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್ 3 ವರ್ಷ (ಟರ್ಮ್ಸ್) ಸಂ.4.00ಕ್ಕೆ
1. ಅಗ್ನಾಸ್ಟಿಕ್ 2. ಆಲ್ ಅಟ್ರಾಕ್ಟೀವ್ 3. ಒಹನ್‌ಸಿಸಿ

VI. ಕಾರಾಪುರ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1 ಬೆನ್‌ಗಾಝಿ 2. ಆರಮ್‌ಸ್ಟ್ರಾಂಗ್ 3. ಲಕ್ಕಿ ಪಾಯಿಂಟ್

VII. ಲೋಕ ಪಾವನಿ ಪ್ಲೇಟ್ ಡಿ1–1400 ಮೀ. ರೇಟೆಡ್ 20 ರಿಂದ 65.(ನೋ ವಿಫ್). ಸಂ.5.00ಕ್ಕೆ
1 ಫಾರ್ಚೂನೆಟಸ್ 2 ಮ್ಯಾಜಿಕ್ ಸರ್ಕಲ್ 3. ಫ್ರೀ ಸ್ಪಿರಿಟೆಡ್

ದಿನದ ಅತ್ಯುತ್ತಮ	ಬೆನ್‌ಗಾಝಿ
ಡಬ್ಬಲ್	ಇಲಿವಾಡೋ, ವಿಜಯ ಫಾಲ್ಕನ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಕೆಲ ಕಂದಾಯ ನಿರೀಕ್ಷರು, ಪ್ರಥಮ ದರ್ಜೆ ಸಹಾಯಕರ ವರ್ಗಾವಣೆ

ಮೈಸೂರು, ಅ.12(ಎಂಕೆ)– ಕಂದಾಯ ನಿರೀಕ್ಷಕರು ಹಾಗೂ ಪ್ರಥಮ ದರ್ಜೆ ಸಹಾಯಕರನ್ನು ವರ್ಗಾಯಿಸಿ ಕಂದಾಯ ಇಲಾಖೆ ಅಧೀನ ಕಾರ್ಯದರ್ಶಿ ಬಿ.ಎಸ್.ಪ್ರದೀಪ್ ಕುಮಾರ್ ಆದೇಶ ಹೊರಡಿಸಿದ್ದಾರೆ.


ರಾಘವೇಂದ್ರ

ಮೈಸೂರು ಜಿಲ್ಲೆ ಸಾಲಿಗ್ರಾಮ ತಾಲೂಕಿನ ಮಿರ್ಲೆ ಹೋಬಳಿ ಕಂದಾಯ ನಿರೀಕ್ಷಕರಾಗಿದ್ದ ಬಿ.ಹೇಮಂತ್‌ಕುಮಾರ್ ಅವರನ್ನು ಮೈಸೂರು ತಾಲೂಕು ಕಸಬಾ ಹೋಬಳಿ ಕಂದಾಯ ನಿರೀಕ್ಷಕರಾಗಿ ವರ್ಗಾಯಿಸಲಾಗಿದೆ. ಹಾಗೆಯೇ ಮೈಸೂರು ತಾಲೂಕು ಕಸಬಾ ಹೋಬಳಿ ಕಂದಾಯ ನಿರೀಕ್ಷಕರಾಗಿದ್ದ ರಾಘವೇಂದ್ರ ಅವರನ್ನು ಸಾಲಿಗ್ರಾಮ ತಾಲೂಕಿನ ಮಿರ್ಲೆ ಹೋಬಳಿ ಕಂದಾಯ ನಿರೀಕ್ಷಕರಾಗಿ ವರ್ಗಾಯಿಸಲಾಗಿದೆ.

ಹಾಗೆಯೇ ಹುಣಸೂರು ತಾಲೂಕು ಕಚೇರಿ ಪ್ರಥಮ ದರ್ಜೆ ಸಹಾಯಕರಾಗಿದ್ದ ಸಿ.ಎಸ್.ವಿಶ್ವನಾಥ್ ಅವರನ್ನು ನಂಜನಗೂಡು ತಾಲೂಕು ಕಸಬಾ ಹೋಬಳಿ ಕಂದಾಯ ನಿರೀಕ್ಷಕರಾಗಿ ವರ್ಗಾವಣೆ ಮಾಡಿದರೆ, ಈ ಮೊದಲು ನಂಜನಗೂಡು ತಾಲೂಕು ಕಸಬಾ ಹೋಬಳಿ ಕಂದಾಯ ನಿರೀಕ್ಷಕರಾಗಿದ್ದ ಜೆ.ಪ್ರಕಾಶ್ ಅವರನ್ನು ಹುಣಸೂರು ತಾಲೂಕು ಕಚೇರಿ ಪ್ರಥಮ ದರ್ಜೆ ಸಹಾಯಕರಾಗಿ ನಿಯೋಜಿಸಿ ಆದೇಶಿಸಲಾಗಿದೆ.

ಆಪರೇಷನ್ ಅಜಯ್: ಭಾರತೀಯರನ್ನು ಹೊತ್ತ ಮೊದಲ ವಿಮಾನ ಇಸ್ರೇಲ್‌ನಿಂದ ಟೇಕಾಫ್

ಜೆರುಸಲೇಂ: ಯುದ್ಧ ಪೀಡಿತ ಇಸ್ರೇಲ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಮರಳಿ ದೇಶಕ್ಕೆ ಕರೆತರಲು ಕೇಂದ್ರ ಸರ್ಕಾರ 'ಆಪರೇಷನ್ ಅಜಯ್' ಆರಂಭಿಸಿದ್ದು, ಮೊದಲ ಚಾರ್ಟರ್ ಫ್ಲೈಟ್ ಗುರುವಾರ ರಾತ್ರಿ ಬೆನ್ ಗುರಿಯಾನ್ ವಿಮಾನ ನಿಲ್ದಾಣದಿಂದ ಹೊರಟಿದೆ. ಇಸ್ರೇಲ್‌ನಲ್ಲಿ ನೆಲೆಸಿರುವ ಸುಮಾರು 230 ಭಾರತೀಯರನ್ನು ಹೊತ್ತ ಮೊದಲ ವಿಮಾನ ಇಂದು ರಾತ್ರಿ 9 ಗಂಟೆಗೆ ಟೇಕಾಫ್ ಆಗಿದೆ. ಮೊದಲಿಗೆ ಬಂದವರಿಗೆ ಮೊದಲು ಸೇವೆ' ಆಧಾರದ ಮೇಲೆ ಅವರು ಭಾರತಕ್ಕೆ ತೆರಳಲಿದ್ದಾರೆ. ಅ.7ರಂದು ಇಸ್ರೇಲ್ ಮೇಲೆ ಹಮಾಸ್ ಉಗ್ರರು ದಾಳಿ ನಡೆಸಿದ ನಂತರ ಯುದ್ಧದ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಏರ್ ಇಂಡಿಯಾ ತನ್ನ ಹಾರಾಟವನ್ನು ತಕ್ಷಣವೇ ಸ್ಥಗಿತಗೊಳಿಸಿದ್ದು, ಹಲವು ಭಾರತೀಯರು ದೇಶಕ್ಕೆ ಮರಳು ಸಾಧ್ಯವಾಗದೇ ಇಸ್ರೇಲ್‌ನಲ್ಲಿ ಸಿಲುಕಿದ್ದಾರೆ. ಆಪರೇಷನ್ ಅಜಯ್ ಅಡಿ ಇಸ್ರೇಲ್‌ನಿಂದ ದೇಶಕ್ಕೆ ವಾಪಸಾಗುತ್ತಿರುವ ಭಾರತೀಯರು ಯಾವುದೇ ಶುಲ್ಕವನ್ನು ಪಾವತಿಸಬೇಕಿಲ್ಲ ಮತ್ತು ಅವರ ಪ್ರಯಾಣದ ವೆಚ್ಚವನ್ನು ಸರ್ಕಾರ ಭರಿಸುತ್ತಿದೆ.

15ನೇ ವರ್ಷದ ಸವಿನೆನಪು


ಶ್ರೀ ಸ್ವಾಮಿ.ಎಂ(ಮುನ್ನಾ)
ಜನನ: 04.01.1991
ಮರಣ: 13.10.2008

ಬಾಳೆಂಬ ಆಗಸದಲ್ಲಿ ಮೂಡಿ
ಮರೆಯಾದ ಹರ್ಷಧಾರೆ
ನಮಗಾಗಿ ನಮ್ಮೆಲ್ಲರ
ಎದೆಯಲ್ಲಿ ಕೋಡಿಯಾಗಿ
ಹರಿದಿದೆ ಕಣ್ಣೀರಧಾರೆ,
ಮುಂದೆಂದೂ ನಿನ್ನ
ನೆನಪುಗಳೇ ನಮಗೆಲ್ಲಾ
ಶಾಶ್ವತ ಅಮೃತಧಾರೆ

ದುಃಖಿತಪ್ತರು: ತಂದೆ ಮೋಹನ್, ತಾಯಿ ಸುಶೀಲ, ಅಣ್ಣ ರಮೇಶ್, ಅತ್ತಿಗೆ ದಿವ್ಯ ಹಾಗೂ ಜಾನವಿ.ಆರ್ ಅಕ್ಷಯ್ ಆರ್, ಬಂಧು ಮಿತ್ರರು, 'ಎಂ' ಬ್ಲಾಕ್, ಕುವೆಂಪುನಗರ, ನಂಜುಡೇಶ್ವರ ಲಾಂಡ್ರಿ

ಹಸಿರು ನಮ್ಮ ಉಸಿರು



IN THE COURT OF HON'BLE VI ADDL SENIOR CIVIL JUDGE AT MYSURU
OS. No.32/2022

Plaintiffs : Kasthuri bai and other
V/s
Defendants : Thimmanayaka and others

D2(c) Manchamma W/o Late Devaraju D/o Late Chaluva Naika Aged about 51 years. Residing at, Hosaramanalli Village, Hunasur Taluk, Mysuru District

D2(d), Siddamma W/o Basavaraju S/o Late Chaluva Naika Residing at Hosaramanalli Village, Hunasur Taluk, Mysuru District.

D2 (f). Gayathri W/o Swaminayaka D/o Late Chaluva Naika Aged about 46 years Residing at Hosaramanalli Village, Hunasur Taluk, Mysuru District

The Plaintiffs have filed a suit against the defendants for Permanent injunction and with respect to the suit schedule property. Hence the defendant no.2d Lrs C.D. AND F you are hereby summoned to appear in this court in person or by a pleader on. **08.11.2023 at 11.00 AM** to answer the claim and you are directed to produce on that day all the documents upon which you intend to relay in support of your defense. Failing which, the suit will be disposed of Exparte,

SCHEDULE

Property bearing junger No 1874, measuring East to West 110 feet, North to South 198 feet, situated at Hinkal Village, Kasaba hobli, Mysore taluk and bounded on the **East by**: property of Ramanna, **West by**: property of Girigowda **North by**: Road and on the, **South by**: Property Karinayaka and Marinayaka Hullu ithlu is defendant father.

Given under my hand and seal of the Court on this **12 day September 2023** at Mysuru.

By the order of the Court
Sd/- Chief Administrative Officer
Prl Senior Civil Court, Mysuru

B.R. Chandramouli, Advocate
No.68, 1st Floor, Century Park Layout
Vasanth Mohal Road, Nazarbad Mohalla, Mysuru.
Ph No. 9342184797

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರವರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ನಗರ ವಿಭಾಗ (ಜೆ.ಎನ್.ನರ್ಮ್)
ಜಲಭವನ, 2ನೇ ಮಹಡಿ, ಪಿ–4,10ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ,
ಸರಸ್ವತಿಪುರಂ, ಮೈಸೂರು–570009 ☐: 9480813129 ಇ–ಮೇಲ್: kwbmysjnee@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೈಸೂರು ನಗರದ ಯಾದವಗಿರಿಯಲ್ಲಿನ ಹೆಚ್.ಎಲ್.ಆರ್ ಆವರಣದಲ್ಲಿ ಇರುವ ಕಾರ್ಯಪಾಲಕ ಅಭಿಯಂತರರು, ನಗರ ವಿಭಾಗ, ಜೆ.ಎನ್.ನರ್ಮ್, ಮೈಸೂರು ರವರ ಹಳೆಯ ಕಛೇರಿಯ ತಾಂತ್ರಿಕ ಶಾಖೆ, ಉಗ್ರಾಣ ಶಾಖೆ, ಅತಿಥಿ ಗೃಹ ಭಾಗಕ್ಕೆ ಬಣ್ಣ ಬಳಿಯುವ ಕಾಮಗಾರಿಯ ಟೆಂಡರ್‌ನ್ನು ಪ್ರಕಟಣೆ ಸಂಖ್ಯೆ:1405/2023–24, ದಿನಾಂಕ:12.10.2023 ರಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಖಾಲಿ ಟೆಂಡರ್ ಪುಸ್ತಕದ ಬೆಲೆ ತಲಾ –ರೂ.2,000/–, ಖಾಲಿ ಟೆಂಡರ್ ಪತ್ರಗಳನ್ನು ವಿತರಿಸುವ ದಿ:19.10.2023 ತನಕ, ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿ:20.10.2023, ಇತರೆ ಮಾಹಿತಿ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,

apmcnanjangud@gmail.com Ph:08221-226309

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಹುಲ್ಲಹಳ್ಳಿ ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆ.
ಸಂಖ್ಯೆ: ಕೃಉಮಾಸ/ನಂ/362/2023–24 ದಿನಾಂಕ: 09.10.2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು ಇವರು ಈ ಕೆಳಕಂಡ ಕಾಮಗಾರಿಗೆ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿ ಅನುಸಾರ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ನೊಂದಾಯಿತ ಹಾಗೂ Standard Tender Documents KW-1 Clause-3(with latest amendments) ನಲ್ಲಿ ಅರ್ಹರಿರುವ (ಸಿವಿಲ್) ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೇದಿಕೆಯಡಿ ಸಲ್ಲಿಸಲು ಅಹ್ವಾನಿಸಲಾಗಿದೆ.

ಕ್ರ.ಸಂ.1 ಕಾಮಗಾರಿಯ ಹೆಸರು: ಕೃ.ಉ.ಮಾ.ಸ, ನಂಜನಗೂಡು 2023–24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮುಂಭಾಗ ದಲ್ಲಿರುವ ಕ್ಯಾಂಟೀನ್ ಅಭಿವೃದ್ಧಿಪಡಿಸುವ ಕಾಮಗಾರಿ. (ಐಟಂವಾರು ಟೆಂಡರ್). **ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ:** 3,37,175=78 **ಇ.ಎಂ.ಡಿ. ಮೊಬಲಗು ಶೇಕಡ 2.50 ರಂತೆ (ರೂ ಗಳಲ್ಲಿ):** 8,500=00 **ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ:** 3 ತಿಂಗಳು (ಮಳೆಗಾಲ ಸೇರಿ). **ಅರ್ಹ ಗುತ್ತಿಗೆದಾರರ ದರ್ಜೆ:** ಕೆ.ಡಬ್ಲ್ಯು–1, ಕ್ಲಾಸ್–3 ರಲ್ಲಿ ಅರ್ಹರಿರುವ & ಲೋ.ಇ.ಯಲ್ಲಿ ನೊಂದಾಯಿತ ಸಿವಿಲ್ ಗುತ್ತಿಗೆದಾರರು. **ಇ ಪ್ರೋಸಸಿಂಗ ಫೀ (ಇ ಪೇಮೆಂಟ್):** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ **ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ: 1)** ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ ಪೋರ್ಟಲ್‌ನಲ್ಲಿ ಸ್ವೀಕರಿಸುವ ಕೊನೆ ದಿ: 30.10.2023 **2)** ಟೆಂಡರುಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 03.11.2023 **3)** ಹೆಚ್ಚಿನ ಷರತ್ತು ಹಾಗೂ ನಿಭಂದನೆಗಳನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದು. **4)** ಯಾವುದೇ ಲಿಖಿತ ಕಾರಣವನ್ನು ಕೊಡದೆ ಟೆಂಡರನ್ನು ತಿರಸ್ಕರಿಸುವ ಅಥವಾ ಪುರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ನಂಜನಗೂಡು
ಸಹಿ/– ಆಡಳಿತಾಧಿಕಾರಿಯವರು, ಕೃ.ಉ.ಮಾ.ಸ., ನಂಜನಗೂಡು

ಹಂಪಾಪುರ ಗ್ರಾಮ ಪಂಚಾಯಿತಿ ಕಾರ್ಯಾಲಯ

ಹಂಪಾಪುರ, ಹೆಚ್.ಡಿ.ಕೋಟೆ, ತಾಲ್ಲೂಕು, ಮೈಸೂರು ಜಿಲ್ಲೆ.

ಗ್ರಾಂ.ಪಂ,ಹಂ,ನಂ:01/2023–24 ದಿ: 11.10.2023

2023–24ನೇ ಸಾಲಿನ ಕೆರೆ ಮತ್ತು ಮಳಿಗೆಗಳ ಬಹಿರಂಗ ಹರಾಜು ಪ್ರಕಟಣೆ

ಹಂಪಾಪುರ ಗ್ರಾಮ ಪಂಚಾಯಿತಿಯ ಐಟಂವಾರು ಕೆರೆ ಹಾಗೂ ಮಳಿಗೆಗಳ ಬಹಿರಂಗ ಹರಾಜನ್ನು ದಿನಾಂಕ: 19–10–2023ನೇ ಗುರುವಾರದಂದು ಈ ಕೆಳಕಂಡಂತೆ ನಡೆಸಲಾಗುವುದು. ಆಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಕೆರೆ ಮೀನು ಪಾಶುವಾರು ಹಕ್ಕನ್ನು ಪಡೆದು ಮತ್ಸ್ಯ ಪಾಲನ ಮೂಲಕ ಲಾಭವನ್ನು ಪಡೆಯಬಹುದಾಗಿದೆ.

ಕ್ರ.ಸಂ.	ಹರಾಜು ನಡೆಯುವ ಸ್ಥಳ	ತಹರೆ	ಸಮಯ	ಅವಧಿ	ಠೇವಣಿ ಮೊಬಲಗು
1	ಹಂಪಾಪುರ ಗ್ರಾಮ ಪಂಚಾಯಿತಿ ಹಿಂಭಾಗದ ಅಂಗನವಾಡಿ ಕೇಂದ್ರ ಆವರಣ	1. ಹಂಪಾಪುರ ಕೆರೆ 2. ದಾಸನಕಟ್ಟೆ 3. ಕೋಹಳ ಕೆರೆ 4. ಪುರದ ಕೆರೆ 5. ಬೀಸಪ್ಪನ ಕೆರೆ 6. ಮಾರ್ಚಹಳ್ಳಿ ಕೆರೆ	11.00	3 ವರ್ಷ	10,000/–
2	ಹಂಪಾಪುರ ಗ್ರಾಮ ಪಂಚಾಯಿತಿ ಹಿಂಭಾಗದ ಅಂಗನವಾಡಿ ಕೇಂದ್ರ ಆವರಣ	1. ಮಳಿಗೆ ಸಂಖ್ಯೆ 1&2 2. ಮಳಿಗೆ ಸಂಖ್ಯೆ 5	12.00	1 ವರ್ಷ	5000/–

ನಿಬಂಧನೆಗಳು

* ಹರಾಜು ಅಖೈರಾದ ಕೂಡಲೇ ಅಖೈರು ಬಿಡ್‌ದಾರರ ವಿನಃ ಉಳಿದವರ ಠೇವಣಿ ಹಣ ವಾಪಸ್ ಮಾಡಲಾಗುವುದು.
* ಹರಾಜು ಅಖೈರಾದ ಕೂಡಲೇ ಅಖೈರು ಬಿಡ್ಡುದಾರರು ಬಿಡ್ಡು ಪೂರ್ತಾ ಹಣವನ್ನು ಸ್ಥಳದಲ್ಲಿಯೇ ಚೆಕ್ ಅಥವಾ ನಗದು ಮೂಲಕ ಪಾವತಿ ಮಾಡಬೇಕು.
* ಪೂರ್ತಾ ಹಣವನ್ನು ಸ್ಥಳದಲ್ಲಿಯೇ ಪಾವತಿ ಮಾಡದಿದ್ದಲ್ಲಿ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿ ಮರು ಹರಾಜು ಮಾಡಲಾಗುವುದು.
* ಹರಾಜು ಆದ ಮೇಲೆ ಬಿಡ್‌ದಾರರು 100/–ರೂ, ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡತಕ್ಕದ್ದು.
* ಹರಾಜಿನಲ್ಲಿ ಭಾಗವಹಿಸುವವರು ಗ್ರಾಮ ಪಂಚಾಯಿತಿಗೆ ಯಾವುದೇ ಬಾಕಿದಾರರಾಗಿರಕೂಡದು.
* ಬಿಡ್‌ನಲ್ಲಿ ಯಾವುದೇ ರೀತಿಯ ತಕರಾರು ಮತ್ತು ನಿರ್ಣಯವನ್ನು ತೆಗೆದುಕೊಳ್ಳುವ ಅಧಿಕಾರ ಅಧ್ಯಕ್ಷರ ತಿರ್ಮಾನಕ್ಕೆ ಬಿಟ್ಟಿರುತ್ತದೆ.
* ಮೇಲ್ಕಂಡ ಯಾವುದೇ ಷರತ್ತುಗಳಿಗೆ ಅವಿಧೇಯರಾಗಿ ನಡೆದುಕೊಂಡಲ್ಲಿ ತಮ್ಮ ಹರಾಜು ಹಕ್ಕನ್ನು ಕಳೆದುಕೊಂಡು ತಗಲುವ ನಷ್ಟಕ್ಕೆ ಬಿಡ್‌ದಾರರನ್ನು ಗುರಿಪಡಿಸಿ ಅದರ ನಷ್ಟವನ್ನು ಅವರ ಸ್ಥಿರ ಅಥವಾ ಚರ ಆಸ್ತಿಯಿಂದ ವಸೂಲಿ ಮಾಡಲಾಗುವುದು.
* ಈ ಹರಾಜು ಬಿಡ್ಡನ್ನು ಬೇರೆಯವರಿಗೆ ವರ್ಗ ಮಾಡುವುದಾಗಲೀ ಅಥವಾ ಪರಭಾರೆ ಮಾಡುವುದಾಗಲೀ ಮಾಡಕೂಡದು.
* ಪ್ರತಿ ವರ್ಷದ ಬಿಡ್ ಹಣಕ್ಕೆ 10% ರಷ್ಟು ಹಣ ಹೆಚ್ಚಿಗೆ ಪಾವತಿಸತಕ್ಕದ್ದು. *ಹರಾಜು ಬಿಡ್ಡುದಾರರು ಹರಾಜು ನಡೆಯುವ ಅರ್ಧಗಂಟೆ ಮುಂಚಿತವಾಗಿ ಠೇವಣಿ ಹಣವನ್ನು ಕಟ್ಟುವುದು.

ಹೆಚ್ಚಿನ ವಿವರಗಳಿಗೆ ಹಾಗೂ ನಿಬಂಧನೆಗಳಿಗೆ ಹಂಪಾಪುರ ಗ್ರಾಮ ಪಂಚಾಯಿತಿಯನ್ನು ಕಛೇರಿ ಕೆಲಸದ ವೇಳೆ ಸಂಪರ್ಕಿಸುವುದು.

ಸಹಿ/– ಶ್ರೀಮತಿ ದೇವಮ್ಮ, ಅಧ್ಯಕ್ಷರು, ಹಂಪಾಪುರ ಗ್ರಾಂ.ಪಂ.
ಸಹಿ/– ಶ್ರೀಮತಿ ಸೌಭಾಗ್ಯ ವಿ., ಉಪಾಧ್ಯಕ್ಷರು, ಹಂಪಾಪುರ ಗ್ರಾಂ.ಪಂ.
ಸಹಿ/– ಶ್ರೀಮತಿ ಸೌಮ್ಯ ಎಸ್.ವಿ., ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಂಪಾಪುರ ಗ್ರಾಂ.ಪಂ.

ಗ್ರಾಮ ಪಂಚಾಯಿತಿ ಸರ್ವ ಸದಸ್ಯರು ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ